"ಜನ್ನ ಮತ್ತು ರತ್ನಾಕರವರ್ಣಿಯರು ಪ್ರತಿಪಾದಿಸಿದ ಅಹಿಂಸಾ ತತ್ತ್ವ"

ಕನ್ನಡ ವಿಶ್ವವಿದ್ಯಾಲಯದ ಎಂ.ಫಿಲ್. ಪದವಿಗೆ
ಅರ್ಪಿಸಿದ ಸಂಪ್ರಬಂಧ

ಸಂಶೋಧಕರು : ಉಷಾ

ಮಾರ್ಗದರ್ಶಕರು :
ಡಾ। ಬಿ.ಪಿ. ಸಂಪತ್‌ಕುಮಾರ್
ಮುಖ್ಯಸ್ಥರು, ಕನ್ನಡ ವಿಭಾಗ
ಶ್ರೀ ಧರ್ಮಸ್ಥಳ ಮಂಜುನಾಥೇಶ್ವರ ಕಾಲೇಜು, ಉಜಿರೆ

ಡಾ। ಹಾ.ಮಾ.ನಾ. ಅಧ್ಯಯನ ಕೇಂದ್ರ
ಶ್ರೀ ಧರ್ಮಸ್ಥಳ ಮಂಜುನಾಥೇಶ್ವರ ಕಾಲೇಜು, ಉಜಿರೆ
(ಕನ್ನಡ ವಿಶ್ವವಿದ್ಯಾಲಯ, ಹಂಪಿ)

೨೦೦೮

"ಜನ್ನ ಮತ್ತು ರತ್ನಾಕರವರ್ಣಿಯರು ಪ್ರತಿಪಾದಿಸಿದ ಅಹಿಂಸಾ ತತ್ತ್ವ"

ಕನ್ನಡ ವಿಶ್ವವಿದ್ಯಾಲಯದ ಎಂ.ಫಿಲ್. ಪದವಿಗೆ
ಅರ್ಪಿಸಿದ ಸಂಪ್ರಬಂಧ

ಸಂಶೋಧಕರು : ಉಷಾ

ಮಾರ್ಗದರ್ಶಕರು :
ಡಾ। ಬಿ.ಪಿ. ಸಂಪತ್‌ಕುಮಾರ್
ಮುಖ್ಯಸ್ಥರು, ಕನ್ನಡ ವಿಭಾಗ
ಶ್ರೀ ಧರ್ಮಸ್ಥಳ ಮಂಜುನಾಥೇಶ್ವರ ಕಾಲೇಜು, ಉಜಿರೆ

ಡಾ। ಹಾ.ಮಾ.ನಾ. ಅಧ್ಯಯನ ಕೇಂದ್ರ
ಶ್ರೀ ಧರ್ಮಸ್ಥಳ ಮಂಜುನಾಥೇಶ್ವರ ಕಾಲೇಜು, ಉಜಿರೆ
(ಕನ್ನಡ ವಿಶ್ವವಿದ್ಯಾಲಯ, ಹಂಪಿ)

೨೦೦೮

586

ಅರ್ಹತಾ ಪತ್ರ

ಉಷಾ ಇವರು "ಜನ್ನ ಮತ್ತು ರತ್ನಾಕರವರ್ಣಿಯರು ಪ್ರತಿಪಾದಿಸಿದ ಅಹಿಂಸಾ ತತ್ವ" ಎಂಬ ಶೀರ್ಷಿಕೆಯ ಈ ಸಂಪ್ರಬಂಧವನ್ನು ಎಂ.ಫಿಲ್ ಪದವಿಗಾಗಿ ಕನ್ನಡ ವಿಶ್ವವಿದ್ಯಾಲಯಕ್ಕೆ ಸಾದರಪಡಿಸಲು ನನ್ನ ಮಾರ್ಗದರ್ಶನದಲ್ಲಿ ಸಿದ್ಧಪಡಿಸಿದ್ದಾರೆ. ಇದರಲ್ಲಿನ ವಿಷಯವನ್ನು ಅಥವಾ ಯಾವುದೇ ಭಾಗವನ್ನು ಈ ಮೊದಲು ಯಾವುದೇ ಪದವಿ ಮತ್ತು ಉದ್ದೇಶಗಳಿಗಾಗಲಿ ಅವರು ಒಪ್ಪಿಸಿಲ್ಲ.

ಉಜಿರೆ

ಡಾ॥ ಬಿ.ಪಿ. ಸಂಪತ್‌ಕುಮಾರ್
ಮಾರ್ಗದರ್ಶಕರು
ಮುಖ್ಯಸ್ಥರು, ಕನ್ನಡ ವಿಭಾಗ
ಶ್ರೀ ಧರ್ಮಸ್ಥಳ ಮಂಜುನಾಥೇಶ್ವರ ಕಾಲೇಜು
ಉಜಿರೆ

ಘೋಷಣಾ ಪತ್ರ

ಡಾ। ಬಿ.ಪಿ. ಸಂಪತ್‌ಕುಮಾರ್ ಇವರ ಮಾರ್ಗದರ್ಶನದಲ್ಲಿ ಸಿದ್ಧಪಡಿಸಿದ

"ಜನ್ನ ಮತ್ತು ರತ್ನಾಕರವರ್ಣಿಯರು ಪ್ರತಿಪಾದಿಸಿದ ಅಹಿಂಸಾ ತತ್ವ"

ಎಂಬ ಶೀರ್ಷಿಕೆಯ ಈ ಸಂಪ್ರಬಂಧವನ್ನು ಎಂ.ಫಿಲ್ ಕನ್ನಡ ಪದವಿಗಾಗಿ ಕನ್ನಡ ವಿಶ್ವವಿದ್ಯಾಲಯಕ್ಕೆ ಸಾದರಪಡಿಸಲು ಸಿದ್ಧಪಡಿಸಲಾಗಿದೆ. ಈ ಸಂಪ್ರಬಂಧದ ಯಾವುದೇ ಭಾಗವನ್ನು ನಾನು ಈ ಮೊದಲು ವಿಶ್ವವಿದ್ಯಾಲಯದ ಯಾವುದೇ ಪದವಿಗಾಗಿ ಅಥವಾ ಯಾವುದೇ ಉದ್ದೇಶಗಳಿಗಾಗಿ ಬಳಸಿಕೊಂಡಿಲ್ಲವೆಂದು ಘೋಷಿಸುತ್ತೇನೆ.

ಉಜಿರೆ

(ಉಷಾ)

ಪರಿವಿಡಿ

ಅಧ್ಯಾಯ ೧
ಅಧ್ಯಯನದ ಉದ್ದೇಶ ಮತ್ತು ವ್ಯಾಪ್ತಿ

ಪೀಠಿಕೆ : ಜಿನನಿಂದ ಭೋದಿಸಲ್ಪಟ್ಟ ಧರ್ಮವೇ ಜೈನಧರ್ಮ. ಜಿನನೆಂದರೆ ತನ್ನ ಆತ್ಮದ ವಿಕಾರಗಳನ್ನು ಜಯಿಸಿಕೊಂಡವನು. ೨೪ ಜನ ತೀರ್ಥಂಕರರೇ ಜಿನರು. ಅವರು ಬೋಧಿಸಿದ ಧರ್ಮವೇ ಜೈನಧರ್ಮ.

ಪ್ರಪಂಚದ ಅತ್ಯಂತ ಪ್ರಾಚೀನ ಧರ್ಮಗಳಲ್ಲಿ ಜೈನಧರ್ಮವು ಒಂದಾಗಿದ್ದು 'ಅಹಿಂಸೆ' ಜೈನಧರ್ಮದ ಪ್ರಧಾನ ತತ್ವಗಳಲ್ಲಿ ಒಂದು. ಈ ತತ್ವದ ತಳಹದಿಯ ಮೇಲೆ ಜೈನಧರ್ಮ ನಿಂತಿದೆ. ಹಾಗೂ ಅದನ್ನು ಪೋಷಿಸಲಿಕ್ಕಾಗಿಯೇ ಹಲವು ಸಾಹಿತ್ಯ ಕೃತಿಗಳು, ಶಾಸ್ತ್ರಗ್ರಂಥಗಳು ರಚನೆಯಾಗಿವೆ.

ಧರ್ಮದ ಹೆಸರಿನಲ್ಲಿ ನಡೆಯುತ್ತಿದ್ದ ವಂಚನೆಯನ್ನು ತಪ್ಪಿಸಲು, ಮುಕ್ತಿಯ ಹೆಸರಿನಲ್ಲಿ ನಡೆಯುತ್ತಿದ್ದ ಬಲಿದಾನವನ್ನು ಕೊನೆಗಾಣಿಸಲು ಭಾರತೀಯರ ಚಿಂತನೆಯಲ್ಲಿ ಅಹಿಂಸಾತತ್ವ ಮೈದಾಳಿತು.

ಭಾರತೀಯ ತತ್ವಜ್ಞಾನದ ಸಂದರ್ಭದಲ್ಲಿ ಜೈನಧರ್ಮ ಅಹಿಂಸೆಯನ್ನು ಪ್ರತಿಪಾದಿಸಿದ ಕಾರಣ ಮುಖ್ಯ ಧರ್ಮವಾಗಿ ಇಂದಿಗೂ ಜೀವಂತವಾಗಿದೆ. ಈ ಜೈನಧರ್ಮವನ್ನು ರಾಜಾಶ್ರಯವು ಒಪ್ಪಿಕೊಂಡಿದ್ದರಿಂದ ಕ್ರಿ.ಪೂ. ಸುಮಾರು ೪ನೇ ಶತಮಾನದಲ್ಲಿ ಜೈನಧರ್ಮ ಕರ್ನಾಟಕದಲ್ಲಿ ಬೇರೂರಿತು. ಪ್ರಾಚೀನ ಕಾಲದಲ್ಲಿ ಕರ್ನಾಟಕವನ್ನಾಳಿದ ಹಲವಾರು ರಾಜಮನೆತನಗಳು ಜೈನಧರ್ಮವನ್ನು ಅವಲಂಬಿಸಿದ್ದವು. ಹಾಗೂ ಅನೇಕ ರಾಜಮನೆತನಗಳು ಜೈನಯತಿಗಳ ಪ್ರಭಾವ ಮತ್ತು ಸ್ಫೂರ್ತಿಯಿಂದಲೇ ಅಸ್ತಿತ್ವಕ್ಕೆ ಬಂದವೆಂದು ಹೇಳಬಹುದು. ಹೀಗೆ ಜೈನಧರ್ಮವು ಕನ್ನಡ ನಾಡಿನಲ್ಲಿ ಪ್ರಭಾವಶಾಲಿಯಾಗಿದ್ದು, ಅದನ್ನು ರಾಜಮನೆತನಗಳು ಪೋಷಿಸಿ, ಪ್ರೋತ್ಸಾಹ ನೀಡಿದವು.

ಉದ್ದೇಶ : ರಾಜರ ಸಾಮ್ರಾಜ್ಯ ವಿಸ್ತರಣೆಯ ಆಸೆಯ ಜೊತೆಗೆ ದೇಶದೊಳಗಿನ ದುರುಳರ ಕುಟಿಲತನದಿಂದ ಪರಕೀಯ ರಾಜರುಗಳ ಆಕ್ರಮಣದಿಂದ ಬೇರೆ ಬೇರೆ ವಿಧದಲ್ಲಿ ಸಾವು-ನೋವುಗಳು ಸಂಭವಿಸುತ್ತಿದ್ದ ಕಾಲಘಟ್ಟದಲ್ಲಿ ಪರಾಕ್ರಮದಿಂದ ಅಂದರೆ ಹಿಂಸೆಯಿಂದಲ್ಲ ಅಹಿಂಸೆಯಿಂದಲೂ ಜಗತ್ತನ್ನು ಗೆಲ್ಲಬಹುದೆಂದು ತೋರಿಸಿದ ಎರಡು ಧರ್ಮಗಳೆಂದರೆ ಜೈನ ಮತ್ತು ಬೌದ್ಧ ಧರ್ಮಗಳು.

ಬೌದ್ಧಧರ್ಮವು ಭಾರತದಲ್ಲಿ ಮತ್ತು ಭಾರತದ ಹೊರಗಡೆ ಪ್ರಖ್ಯಾತಿಯನ್ನು ಪಡೆದರೆ ಜೈನಧರ್ಮ ಹೆಚ್ಚಾಗಿ ಭಾರತದಲ್ಲಿ ಪ್ರಸಿದ್ಧಿ ಪಡೆಯಿತು. ಜಗತ್ತಿನಲ್ಲಿ ಇಂದು ಹಿಂಸೆ ತಾಂಡವಾಡುತ್ತಿದ್ದು, ಪ್ರಕ್ಷುಬ್ಧಗೊಂಡಿರುವ ಜಗತ್ತಿನ ಪ್ರಸ್ತುತ ಸಂದರ್ಭಕ್ಕೆ ಜೈನಧರ್ಮ ಸಂದೇಶಗಳು ಉತ್ತರವಾಗಿದೆ. ಹಿಂಸೆ - ಅಹಿಂಸೆಗಳಲ್ಲಿ ಜಗತ್ತಿನಲ್ಲಿ ಗೆಲ್ಲುವುದು ಅಹಿಂಸೆಯೇ. ಕನ್ನಡ ಸಾಹಿತ್ಯವನ್ನು ಬೆಳೆಸಿ ಪೋಷಿಸಿದ ಧರ್ಮಗಳಲ್ಲಿ ಜೈನಧರ್ಮ ಒಂದು. ಜೈನಕವಿಗಳು ತಮ್ಮ ಕೃತಿಗಳಲ್ಲಿ ಜೈನಧರ್ಮದ ಈ ಅಹಿಂಸಾತತ್ವದ ಸೂಕ್ಷ್ಮಾತಿಸೂಕ್ಷ್ಮ ಎಳೆಗಳನ್ನು, ಪದರುಗಳನ್ನು ಬಿಡಿಸಿ ಅನಾವರಣಗೊಳಿಸಿದ್ದಾರೆ. ಇಂತಹವರಲ್ಲಿ ಪಂಪ, ರನ್ನ, ಪೊನ್ನ, ಜನ್ನ, ರತ್ನಾಕರವರ್ಣಿ ಹೀಗೆ ಹಲವು ಜೈನಕವಿಗಳು ಜೈನಧರ್ಮದ ತತ್ವ ಸಿದ್ಧಾಂತವನ್ನು ಕೃತಿಯಲ್ಲಿ ಅನಾವರಣಗೊಳಿಸಿದವರಲ್ಲಿ ಪ್ರಮುಖರು. ಈ ಹಿನ್ನೆಲೆಯಲ್ಲಿ ಜನ್ನ ಮತ್ತು ರತ್ನಾಕರವರ್ಣಿಯರು ಪ್ರತಿಪಾದಿಸಿದ ಅಹಿಂಸೆಯ ವಿಮರ್ಶಾತ್ಮಕ ವಿಶ್ಲೇಷಣೆಯೇ ಈ ಅಧ್ಯಯನದ ಉದ್ದೇಶ.

ವ್ಯಾಪ್ತಿ : ಭಾರತೀಯ ಸಾಹಿತ್ಯ ಪರಂಪರೆಗಳಲ್ಲಿ ಜೈನಧರ್ಮ ಪ್ರಮುಖವಾದುದು. ಕರ್ನಾಟಕದಲ್ಲಿ

ಜೈನಧರ್ಮ ಪ್ರಾಮುಖ್ಯತೆಯನ್ನು ಪಡೆದಿದ್ದು, ಇದರ ಸಾಹಿತ್ಯ ವಿಪುಲವಾಗಿ ಬೆಳೆಯುತ್ತಾ ಬಂದಿರುವುದನ್ನು ಕಾಣಬಹುದಾಗಿದೆ.

ಜೈನಧರ್ಮದಲ್ಲಿ ಪಂಚಾಣು ವ್ರತಗಳಲ್ಲಿ ಒಂದಾದ ಅಹಿಂಸಾ ತತ್ವ ಪ್ರಮುಖವಾಗಿದ್ದು, ಭಾರತೀಯ ಚಿಂತನೆಯ ಮಾರ್ಗದ ಮೇಲೆ ಶತಮಾನಗಳಿಂದಲೂ ಪ್ರಭಾವ ಬೀರುತ್ತಾ ಬಂದಿದೆ. ಅಹಿಂಸೆಯ ಕುರಿತು ಹಲವಾರು ಸಾಹಿತ್ಯ ಕೃತಿಗಳು ಅನಾವರಣಗೊಂಡರೂ ಜೈನಧರ್ಮದ ಪ್ರೇರಣೆಯಿಂದ ಪ್ರಮುಖ ಮಹಾಪುರುಷರೂ ಈ ತತ್ವವನ್ನು ಬಳಸಿಕೊಂಡಿರುವುದನ್ನು ಗುರುತಿಸಬಹುದು.

ಜೈನಪರಂಪರೆಯ ೨೪ನೇ ತೀರ್ಥಂಕರರಲ್ಲಿ ವೃಷಭನು ಅಹಿಂಸಾಧರ್ಮವನ್ನು ಮೊದಲು ಬೋಧಿಸಿದನು. ಮಹಾವೀರನು ಅಹಿಂಸಾ ಪರಮೋಧರ್ಮ ಎಂದರೂ, ಮಹಾವೀರನಿಗಿಂತ ಹಿಂದೆಯೇ ಜೈನರಲ್ಲಿ ಈ ತತ್ವ ಪ್ರಚಲಿತವಿತ್ತು. ಜೈನರು ಅಹಿಂಸೆಯನ್ನು ತಮ್ಮ ಮೂಲತತ್ವವಾಗಿ ತಮ್ಮ ಧಾರ್ಮಿಕ ಜೀವನಕ್ಕೆ ಅಳವಡಿಸಿಕೊಂಡರು. ಮಾತ್ರವಲ್ಲದೆ ಜೈನಧರ್ಮದ ಸಿದ್ಧಾಂತಗಳನ್ನಿಟ್ಟು ರಾಜಾಶ್ರಯದೊಂದಿಗೆ ಲೌಕಿಕ ಕಾವ್ಯ, ಧಾರ್ಮಿಕ ನಿಷ್ಠೆಯಿಂದ ಆಗಮಿಕ ಕಾವ್ಯ - ಹೀಗೆ ವೀರರಸ ಪ್ರಧಾನವಾದ ಕೃತಿಗಳನ್ನು ರಚಿಸಲು ಪ್ರಾರಂಭಿಸಿದರು. ರಾಜರ ಮೆಚ್ಚುಗೆಯ ಜೊತೆಗೆ ಜೈನಧರ್ಮವನ್ನು ಸಾರುವ ಉದ್ದೇಶದಿಂದಲೂ ಕೃತಿ ರಚಿಸಿದರು.

ಈ ಹಿನ್ನೆಲೆಯಲ್ಲಿ ಪಂಪ, ರನ್ನ, ಪೊನ್ನ ಮೊದಲಾದ ಜೈನ ಕವಿಗಳಂತೆ ಜನ್ನನು ತನ್ನ ಕೃತಿಗಳಲ್ಲಿ ಅಹಿಂಸೆಯ ಪರಿಕಲ್ಪನೆಯನ್ನಿಟ್ಟು ಕೃತಿ ರಚನೆ ಮಾಡಿರುವುದನ್ನು ಗುರುತಿಸಬಹುದು. ಸುಮಾರು ೧೪ನೇ ಶತಮಾನದ ಕೊನೆಯವರೆಗೆ ಜೈನಪುರಾಣಗಳು ಚಂಪೂ ಕಾವ್ಯಗಳಾಗಿಯೂ ಮುಂದೆ ಸಾಂಗತ್ಯ, ತ್ರಿಪದಿ ರೂಪವಾಗಿ ಬಂದವು.

ನಂತರ ಬಂದ ಮಧ್ಯಯುಗೀನ ಕಾಲಘಟ್ಟದ ಕವಿಗಳಾದ ಬಸವಣ್ಣ, ಹರಿಹರ, ರಾಘವಾಂಕ ಮೊದಲಾದ ಕವಿಗಳು ರಾಜಸತ್ತೆಯನ್ನು ತಿರಸ್ಕರಿಸಿ ತಮ್ಮ ವ್ಯಕ್ತಿ ಸ್ವಾತಂತ್ರ್ಯ, ವೈಚಾರಿಕತೆ - ಸ್ವಾತಂತ್ರ್ಯಕ್ಕೆ ಅಡ್ಡಿಯಾಗುತ್ತದೆಂದು ಮೌಲ್ಯಭಕ್ತಿಗೆ ಪ್ರಾಮುಖ್ಯತೆಯನ್ನು ಕೊಟ್ಟು ಭಕ್ತಿರಸವನ್ನು ಮೂಲ ಜೀವಾಳವಾಗಿ ಅಳವಡಿಸಿ, ಸಾಮಾನ್ಯರ ಜೊತೆಗೆ ತಮ್ಮನ್ನು ಬೆರೆಸಿಕೊಂಡು ಕೃತಿ ರಚನೆ ಮಾಡಲು ಪ್ರಾರಂಭಿಸಿದರು. ಇದೇ ನಿಟ್ಟಿನಲ್ಲಿ ಬಸವಣ್ಣ ಭಕ್ತಿಯ ಜೊತೆಗೆ ಧರ್ಮವನ್ನು ಕೇಂದ್ರವಾಗಿರಿಸಿ 'ದಯೆಯೇ ಧರ್ಮದ ಮೂಲವಯ್ಯ' ಎಂದರು.

ಮಧ್ಯಯುಗೀನ ಕಾಲದಲ್ಲಿ ಜನರಲ್ಲಿ ತಿಳುವಳಿಕೆ ಮೂಡಿಸುವಲ್ಲಿ, ಒಂದು ಸಮಾಜದ ಹೋರಾಟಕ್ಕೆ ಕಾವ್ಯ ಬರೆಯುವುದರ ಜೊತೆಗೆ 'ದೇಸೀ' ಭಾಷೆಗೆ ಪ್ರಾಧಾನ್ಯತೆ ಕೊಟ್ಟರು. ಮಾತ್ರವಲ್ಲದೆ ಛಂದಸ್ಸಿನ ಮೇಲರಿಮೆಯನ್ನು ಬಿಟ್ಟು ದೇಶೀಯ ಪ್ರಾಕೃತ ಛಂದಸ್ಸನ್ನು ಬಳಸಿಕೊಂಡು ಸಾಂಗತ್ಯ, ಷಟ್ಪದಿ, ತ್ರಿಪದಿಗಳನ್ನು ಬಳಸಿ ಕಾವ್ಯ ರಚನೆ ಮಾಡಿದರೂ ಧರ್ಮದ ಬಗ್ಗೆ ಸಾಂಗತ್ಯ ಕೃತಿಗಳು ಸ್ವಂತಿಕೆಯನ್ನು ಇಟ್ಟುಕೊಂಡು ಬಂದಿರುವುದನ್ನು ರತ್ನಾಕರ ವರ್ಣಿಯ ಭರತೇಶ ವೈಭವದಲ್ಲಿ ಗುರುತಿಸಬಹುದು.

ಜೈನಧರ್ಮದ ಅಹಿಂಸೆಯಿಂದ ಪ್ರೇರಿತರಾದ ಗಾಂಧೀಜಿಯವರ ಬಗ್ಗೆ ಜಿಮ್ಮರ್ ಈ ರೀತಿ ಅಭಿಪ್ರಾಯ ಪಡುತ್ತಾರೆ : "ಸಾಮಾಜಿಕ ಹಾಗೂ ರಾಜಕೀಯ ನ್ಯಾಯವನ್ನು ಪಡೆಯಲು ಗಾಂಧೀಜಿ ಅಹಿಂಸೆಯನ್ನು ಒಂದು ರಚನಾತ್ಮಕ ವಿಧಾನವಾಗಿ ರೂಪಿಸಿದರು. ಮುನಿಗಳು ಅಥವಾ ಸನ್ಯಾಸಿಗಳ ಧರ್ಮದಲ್ಲಿ ಅಹಿಂಸಾ

ತತ್ವವೇ ಮೊದಲನೆಯದು. ಇದರಿಂದಾಗಿ ಅವರು ಮಾನವಾತೀತವಾದ ಒಂದು ಘಟ್ಟವನ್ನು ಮುಟ್ಟುತ್ತಾರೆ" ಹಾಗೂ ಗಾಂಧೀಜಿ ರೂಪಿಸಿದ ಸತ್ಯಾಗ್ರಹಕ್ಕೂ ಜೈನರ ಈ ಅಹಿಂಸಾ ತತ್ವವೇ ಆಧಾರ. ಜೈನಮುನಿಗಳಿಂದ ಗಾಂಧೀಜಿ ಪ್ರಭಾವಿತರಾಗಿದ್ದಾರೆ ಎಂದು ಹೇಳಿದ್ದಾರೆ.

ಗಾಂಧೀಜಿಯವರ ಪ್ರಥಮ ಪಂಚಸೂತ್ರಗಳು ಸಾವಿರಾರು ವರ್ಷಗಳ ಹಿಂದಿನ ಜೈನ ಮುನಿಗಳವು ಎಂದು 'ಪೋಲರ್' ಹೇಳಿದರೆ ಅಹಿಂಸೆ ಮಾನವರಿಗಾಗಿ, ಹಿಂಸೆ ದಾನವರಿಗಾಗಿ ಎಂದು ರೊಲ್ಲಾಂಡ್ ಅಭಿಪ್ರಾಯ ಪಡುತ್ತಾರೆ.

ಮಾನಿಯರ್ ವಿಲಿಯಮ್ಸ್ ತನ್ನ 'ಜೈನಧರ್ಮ' ಎಂಬ ಲೇಖನದಲ್ಲಿ ಪ್ರಾಣಿವಧೆ ನಿಷೇಧವನ್ನು ಸಂತತಿ ಪೂರ್ವ ಪರಾಕಾಷ್ಠೆಗೆ ಕೊಂಡೊಯ್ಯುವಲ್ಲಿ ಜೈನರು ಇತರ ಭಾರತೀಯ ಪಂಥಗಳನ್ನು ಮೀರಿಸಿದ್ದಾರೆ ಎಂದು ಹೇಳಿದ್ದಾರೆ.

ಪ್ರಪಂಚದ ಇತರ ಶ್ರೇಷ್ಠ ಧರ್ಮಗಳಂತೆಯೇ ಜೈನಧರ್ಮದಿಂದ ಕೂಡಾ ನಾನು ತುಂಬಾ ಉಪಕೃತನಾಗಿದ್ದೇನೆಂದು, ಅಹಿಂಸೆ ಯಾವಾಗಲೂ ಹಿಂಸೆಗಿಂತ ಶ್ರೇಷ್ಠ ಹಾಗೂ ಪರಿಣಾಮಕಾರಿ ಎಂದು ಸ್ವತಃ ಗಾಂಧೀಜಿಯವರೇ ಹೇಳಿದ್ದಾರೆ.

ಜೀವನವೇ ಒಂದು ಮಹಾನವಮಿ ಎಂದೂ ಅದರಲ್ಲಿನ ಬಹುಮುಖ್ಯ ಗುಣಗಳೇ ತಪಸ್ಸು, ಸಂಯಮ ಮತ್ತು ಅಹಿಂಸೆಗಳೆಂದು ಚಾಂದೋಗ್ಯ ಉಪನಿಷತ್ತಿನಲ್ಲಿ ವಿವರಿಸಲಾಗಿದೆ.

ಹೀಗೆ ಎಲ್ಲ ಧರ್ಮಗಳೂ ಅಹಿಂಸೆಯ ತತ್ವವನ್ನು ಸ್ವೀಕರಿಸಿದ್ದರೂ ಜೈನಧರ್ಮವು ತನ್ನ ಉಸಿರನ್ನಾಗಿ ಮಾಡಿದೆ. "ಜೈನಧರ್ಮದಲ್ಲಿನ ನೀತಿ ಸಂಹಿತೆಯ ಕೇಂದ್ರ ಬಿಂದುವೇ ಅಹಿಂಸೆ. ಮಾನವ ಉನ್ನತಿಗೆ ಎಲ್ಲ ಜೀವರಕ್ಷಣೆಗೆ ಇರತಕ್ಕಂಥ ಒಂದು ಮೌಲ್ಯ. ಅಹಿಂಸೆಗೆ ಜಾತಿ, ಧರ್ಮ, ಮತವಿಲ್ಲ. ಅಹಿಂಸೆಗೆ ಯಾವುದೇ ದೇಶ ಕಾಲದ ಪರಿಮಿತಿ ಇಲ್ಲ. ಅಹಿಂಸೆ ಎಂಬುದು ಸರ್ವಕಾಲಿಕ, ಅದು ಸಾರ್ವಭೌಮ ಸಿದ್ಧಾಂತ. ಅಹಿಂಸೆಯನ್ನು ಅವರದು ಇವರದು ಎಂದು ಹೇಳಲಿಕ್ಕೂ ಸಾಧ್ಯವಿಲ್ಲ. ಯಾವುದೇ ಒಂದು ಧರ್ಮದ ಚೌಕಟ್ಟಿನಲ್ಲಿ ಅದನ್ನು ಬಿಗಿಹಿಡಿಯಲಿಕ್ಕೂ ಸಾಧ್ಯವಿಲ್ಲ. ಆದ್ದರಿಂದ ಈ ಅಹಿಂಸೆ ಎನ್ನುವುದು ಲೋಕದ ಸರ್ವಶ್ರೇಷ್ಠ ಸಿದ್ಧಾಂತ. ಅಹಿಂಸೆ ಇರುವುದು ಯಾವುದೇ ಒಂದು ಮತದ ಪಂಥದ ಪ್ರಚಾರಪ್ರಗತಿಗಾಗಿ ಅಲ್ಲ. ಅದರಲ್ಲಿ ಎಲ್ಲ ಜೀವದ ಸುಖವಿದೆ, ಶಾಂತಿಯಿದೆ" ಎಂದು ಕರ್ಮಯೋಗಿ ಸ್ವಸ್ತಿ ಶ್ರೀ ಚಾರುಕೀರ್ತಿ ಭಟ್ಟಾರಕ ಸ್ವಾಮಿ ಹೇಳಿದ್ದಾರೆ.[೧]

ಹೀಗೆ ಜೈನಧರ್ಮದಲ್ಲಿ ಅಹಿಂಸಾ ತತ್ವವು ತನ್ನ ಛಾಪು ಮೂಡಿಸಿರುವುದನ್ನು ನಾವು ಗುರುತಿಸಬಹುದು.

ಅಧ್ಯಾಯ ೨

ಕನ್ನಡ ಸಾಹಿತ್ಯದಲ್ಲಿ ಜೈನಕೃತಿಗಳು, ಆಶಯ, ಲೌಕಿಕದಲ್ಲಿ ಸಂಪ್ರದಾಯ - ಅಲೌಕಿಕದಲ್ಲಿ ಪುರಾಣವಸ್ತು - ಜೈನಧರ್ಮ ಸಿದ್ಧಾಂತಗಳ ಅನಾವರಣ ಇತ್ಯಾದಿ

ಜೈನ ಸಾಹಿತ್ಯವು ಪ್ರಾಚೀನ ಸಾಹಿತ್ಯವಾಗಿದ್ದು ಇದಕ್ಕೆ ಸಾವಿರ ವರ್ಷಗಳ ಇತಿಹಾಸವಿದೆ. ಕನ್ನಡದಲ್ಲಿ ಜೈನ ಸಾಹಿತ್ಯವು ೮ನೇ ಶತಮಾನದಲ್ಲಿ ಆರಂಭಗೊಂಡಿರುವುದನ್ನು ಗುರುತಿಸಬಹುದು. ಕನ್ನಡ ಸಾಹಿತ್ಯದಲ್ಲಿ ಮೊದಲ ಜೈನ ಕೃತಿ ಹರಿವಂಶ. ಗುಣಭದ್ರಾಚಾರ್ಯರಿಗೆ ಸಮಕಾಲೀನನಾದ ಮೊದಲನೆಯ ಗುಣವರ್ಮನು ಈ ಕೃತಿಯನ್ನು ರಚಿಸಿದನೆಂದು ವಿದ್ವಾಂಸರು ಅಭಿಪ್ರಾಯಪಡುತ್ತಾರೆ. ಈತನಿಗಿಂತ ಹಿಂದಿನವನಾದ ಶ್ರೀವಿಜಯನೂ ಚಂದ್ರಪ್ರಭ ಪುರಾಣವನ್ನು ಬರೆದಿರುವಂತೆ ಊಹೆಗಳಿವೆ. ಆದರೆ ಅವರ ಗ್ರಂಥಗಳು ಉಪಲಬ್ಧವಾಗಿಲ್ಲ.

ಜಿನಸೇನನಿಂದ ಪ್ರಾರಂಭವಾದ ಪುರಾಣ ರಚನೆಯ ಪರಂಪರೆಯು ಮಧುರನಿಂದ ಮುಂದೆ ಸಾಗಿ ದೇವಚಂದ್ರನವರೆಗೂ ನಡೆದು ಬಂದಿರುವುದನ್ನು ಕನ್ನಡ ಸಾಹಿತ್ಯ ಚರಿತ್ರೆಯಲ್ಲಿ ಕಾಣಬಹುದು. ಸುಮಾರು ೧೪ನೇ ಶತಮಾನದ ಕೊನೆಯವರೆಗಿನ ಜೈನಪುರಾಣಗಳು ಚಂಪೂಕಾವ್ಯಗಳಾಗಿಯೂ, ಗದ್ಯಗಳಾಗಿಯೂ ಮುಂದಿನವುಗಳು ಷಟ್ಪದಿ, ಸಾಂಗತ್ಯರೂಪವಾಗಿಯೂ ಮುಂದುವರಿದಿರುವುದನ್ನು ಗುರುತಿಸಬಹುದು.

ಗಂಗರಾಜ ಮಹೇಂದ್ರಾಂತಕ ಎಡೆಯಪ್ಪ (೮೮೬-೯೧೩) ಎಂಬ ರಾಜನ ಆಶ್ರಯದಲ್ಲಿ ಒಂದನೇ ಗುಣವರ್ಮನೆಂಬ ಕವಿಯು ಹರಿವಂಶ ಮತ್ತು ಶೂದ್ರಕ ಎಂಬ ಎರಡು ಚಂಪೂ ಕೃತಿಗಳನ್ನು ರಚಿಸಿದನೆಂಬುದಕ್ಕೆ ಆಧಾರಗಳಿವೆ. ಈತನು ಜೈನಮತಕ್ಕೆ ಸೇರಿದವನಾಗಿದ್ದು, ಹರಿವಂಶ ಕೃತಿಯು ಹರಿವಂಶದಲ್ಲಿ ಹುಟ್ಟಿದ ನೇಮಿನಾಥನೆಂಬ ೨೨ನೇ ತೀರ್ಥಂಕರನ ಬಗ್ಗೆ ಬರೆದ ಪುರಾಣ ಕಾವ್ಯ. ಶೂದ್ರಕ ಎಂಬುದು ಹಿಂದೆ ಸಂಸ್ಕೃತದಲ್ಲಿ ಪ್ರಚಲಿತವಾಗಿದ್ದ ಶೂದ್ರಕನೆಂಬ ರಾಜನಿಗೆ ಸಂಬಂಧಿಸಿದ ವಿಷಯವನ್ನು ಒಳಗೊಂಡಿರಬೇಕು. ಶೂದ್ರಕ ಕಾವ್ಯದ ಅನೇಕ ಪದ್ಯಗಳು ದೊರೆತಿದ್ದು, ಇದರಲ್ಲಿ ಗುಣವರ್ಮನ ಆಶ್ರಯದಾತನಾದ ಎಡೆಯಪ್ಪನಿಗೆ ಇದ್ದ ಬಿರುದುಗಳು ಬಂದಿವೆ. ಈ ಕಾವ್ಯದ ನಾಯಕನೊಂದಿಗೆ ತನ್ನ ಆಶ್ರಯದಾತನನ್ನು ಸಮೀಕರಿಸಿ ಈ ಕೃತಿಯನ್ನು ರಚಿಸಿರಬಹುದು. ಹೀಗೆ ಗುಣವರ್ಮನೇ ಮುಂದಿನ ಬಹುಮಂದಿ ಜೈನಕವಿಗಳು ಮಾಡಿದಂತೆ ಪುರಾಣ ಕಾವ್ಯವೊಂದನ್ನು, ಲೌಕಿಕ ಕಾವ್ಯವೊಂದನ್ನು ರಚಿಸುವ ಸಂಪ್ರದಾಯಕ್ಕೆ ಮೇಲ್ಪಂಕ್ತಿಯನ್ನು ಹಾಕಿರಬಹುದು. ಈ ದೃಷ್ಟಿಯಿಂದ ಈತನ ಕಾವ್ಯಗಳು ಬಹು ಮುಖ್ಯವಾದರೂ ದುರಾದೃಷ್ಟವಶಾತ್ ಈ ಕಾವ್ಯಗಳು ದೊರೆತಿಲ್ಲ.

ರಾಜಾಶ್ರಯದೊಂದಿಗೆ ಲೌಕಿಕ ಕಾವ್ಯ, ಧಾರ್ಮಿಕ ನಿಷ್ಠೆಯಿಂದ ಆಗಮಿಕ ಕಾವ್ಯವನ್ನು ಬರೆಯಲು ಮೊದಲುಗೊಂಡದ್ದು ಜೈನಕೃತಿಗಳಲ್ಲಿ ಗುರುತಿಸಬಹುದು. ಈ ಜೈನಕವಿಗಳು ಆಶ್ರಯದಾತರಿಗಾಗಿ ಕಾವ್ಯವನ್ನು ರಚಿಸಿದರು. ತಮ್ಮ ಆಶ್ರಯದಾತರನ್ನು ಕೊಂಡಾಡುವುದೇ ಅವರ ಲೌಕಿಕ ಕಾವ್ಯ ರಚನೆಯ ಮುಖ್ಯ ಉದ್ದೇಶವಾಗಿತ್ತು. ಅವರ ಕಾವ್ಯದ ಕಥಾವಸ್ತು ಪುರಾಣಗಳಿಂದ ಆಯ್ದುದಾಗಿದೆ. ಪುರಾಣ ಕಥೆಯ ನಾಯಕನಿಗೆ ತಮ್ಮ ರಾಜರನ್ನು ಅಂಕಿತ ಮಾಡಿ ಕಾವ್ಯ ರಚಿಸುವುದು ಕವಿಗಳ ವಾಡಿಕೆಯಾಗಿತ್ತು. ಅಲೌಕಿಕದಲ್ಲಿ ತೀರ್ಥಂಕರ ಮೊದಲಾದ ಧಾರ್ಮಿಕ ವ್ಯಕ್ತಿಗಳ ಭವಾವಳಿಗಳ ಚಿತ್ರಣವೇ ಈ ಕಾವ್ಯದ ಮುಖ್ಯ ಉದ್ದೇಶವಾಗಿದೆ.

ಕ್ರಿ.ಶ. ೯, ೧೦, ೧೧ನೇ ಶತಮಾನ ಅಂದರೆ ರಾಷ್ಟ್ರಕೂಟ ಮತ್ತು ಹೊಯ್ಸಳರ ಕಾಲ ಕರ್ನಾಟಕದ ಉತ್ತುಂಗ ಕಾಲ ಎನ್ನಬಹುದು. ಏಕೆಂದರೆ ಈ ಕಾಲದ ಚಕ್ರವರ್ತಿಗಳಲ್ಲಿ ಹಲವರು ಜೈನ ಮತಾವಲಂಬಿಗಳಾಗಿದ್ದರು ಮತ್ತು ಜೈನಧರ್ಮಕ್ಕೆ ವಿಶೇಷ ಪ್ರೋತ್ಸಾಹ ನೀಡುತ್ತಿದ್ದರು. ಕನ್ನಡ ಸಾಹಿತ್ಯದಲ್ಲಿ ಮೊಟ್ಟಮೊದಲು ಸಿಗುವ ಜೈನ ಕಾವ್ಯಗಳೆಂದರೆ ಪಂಪ ಮಹಾಕವಿಯ ಆದಿಪುರಾಣ ಮತ್ತು ವಿಕ್ರಮಾರ್ಜುನ ವಿಜಯ. 'ಪಸರಿಪ ಕನ್ನಡಕ್ಕೊಡೆಯನೋರ್ವನೆ ಸತ್ಕವಿ ಪಂಪನಾವಗಂ' ಎಂದು ಹೊಗಳಿದ ನಾಗರಾಜನ ಮಾತು ಸತ್ಯವಾಗಿ ಉಳಿದಿದೆ. ಕ್ರಿ.ಶ. ೧೦ನೇ ಶತಮಾನದ ಪಂಪನ ಕಾವ್ಯ ಮಾರ್ಗವನ್ನೇ ೧೪ನೇ ಶತಮಾನದವರೆಗೂ ಅನೇಕ ಕವಿಗಳು ಅನುಸರಿಸಿಕೊಂಡು ಬಂದಿದ್ದಾರೆ. ಅವರಲ್ಲಿ ಪೊನ್ನ,ರನ್ನ, ನಾಗಚಂದ್ರ, ಅಗ್ಗಳ, ನೇಮಿಚಂದ್ರ, ನಯಸೇನ, ಗುಣವರ್ಮ, ಜನ್ನ, ಬ್ರಹ್ಮಶಿವ, ಕರ್ಣಪಾರ್ಯ, ವೃತ್ತವಿಲಾಸ, ಆಂಡಯ್ಯ, ಚಾವುಂಡರಾಯ, ರತ್ನಾಕರವರ್ಣಿ, ಆಚಣ್ಣ, ಪಾರ್ಶ್ವಪಂಡಿತ, ಪದ್ಮಣಾಂಕ, ಮಧುರ ಮೊದಲಾದವರು.

ವೈಷ್ಣವ, ಶೈವ, ವೀರಶೈವ ಧರ್ಮದ ಪ್ರಾಬಲ್ಯತೆಯಿಂದ ೧೫ನೇ ಶತಮಾನದ ಅಂತ್ಯದಲ್ಲಿ ಜೈನಧರ್ಮ ಇಳಿಮುಖವನ್ನು ಕಂಡರೂ ಪಶ್ಚಿಮ ಪ್ರದೇಶ ಕರಾವಳಿಯಲ್ಲಿ ಆಶ್ರಯ ಪಡೆದು ಪ್ರೋತ್ಸಾಹವನ್ನು ಗಳಿಸಿತು. ಜೈನಕವಿಗಳು ಜೈನಧರ್ಮದ ವಿಷಯಕ್ಕೆ ಸಂಬಂಧಿಸಿದ ಗ್ರಂಥ ರಚಿಸಿರುವರಾದರೂ ಪಂಪ, ರನ್ನ, ಪೊನ್ನ, ನೇಮಿಚಂದ್ರ, ಆಂಡಯ್ಯ ಇವರುಗಳು ವಿಕ್ರಮಾರ್ಜುನ ವಿಜಯ, ಗದಾಯುದ್ಧ, ಭುವನೈಕ ರಾಮಾಭ್ಯುದಯ, ಲೀಲಾವತಿ, ಕಬ್ಬಿಗರ ಕಾವ - ಇತ್ಯಾದಿ ಲೌಕಿಕ ಗ್ರಂಥಗಳನ್ನು ಬರೆದಿದ್ದಾರೆ. ಜೈನಕವಿಗಳು ತಮ್ಮ ಧರ್ಮದ ತಿರುಳನ್ನು ಜನತೆಗೆ ಪಸರಿಸುತ್ತಾ ಕನ್ನಡ ಸಾಹಿತ್ಯಕ್ಕೆ ಕೊಡುಗೆಯನ್ನು ನೀಡಿದ್ದಾರೆ.

ಜೈನಕವಿಗಳು ತಮ್ಮ ಲೌಕಿಕ ಕೃತಿಗಳಲ್ಲಿ ವೀರರಸ ಪ್ರಧಾನವಾದ ಕಥೆಗಳನ್ನು ಬರೆದಿದ್ದಾರೆ. ಅಂತೆಯೇ ಪಂಪನ ಕರ್ಣ, ರನ್ನನ ದುರ್ಯೋಧನ, ನಾಗಚಂದ್ರನ ರಾವಣ ಪಾತ್ರಗಳನ್ನು ಪೌರುಷ ಪ್ರಧಾನ ಮಹಾನಾಯಕರ ಪಾತ್ರಗಳಾಗಿ ಚಿತ್ರಿಸಿದ್ದಾರೆ. ಆದ್ದರಿಂದ ಕನ್ನಡ ಸಾಹಿತ್ಯದ ಧ್ರುವತಾರೆಗಳಾದ ಜೈನಕವಿಗಳು ಈ ಮಹಾ ವ್ಯಕ್ತಿಗಳ ಸೃಷ್ಟಿಗೈಯುವುದರ ಮೂಲಕ ನಮ್ಮ ಸಾಹಿತ್ಯಕ್ಕೊಂದು ವಿಶಿಷ್ಟ ಸ್ಥಾನವನ್ನು ಗಳಿಸಿಕೊಟ್ಟಿದ್ದಾರೆ.

ಪಂಪನ ಕಾಲ ೯೪೦. ನಮಗೆ ಸಿಕ್ಕಿರುವ ಕಾವ್ಯಗಳಲ್ಲಿ ಇವನದೇ ಮೊದಲ ಕಾವ್ಯ. "ಮುನ್ನಿನ ಕಬ್ಬಮಮೆಲ್ಲಂ ಇಕ್ಕಿ ಮೆಟ್ಟಿದುದು ಇವನ ಕಾವ್ಯಗಳು" ಎಂದು ಶ್ರೀಮಾನ್ ಟಿ.ಎಸ್. ವೆಂಕಟಯ್ಯನವರು ಹೇಳಿದಂತೆ ಸೂರ್ಯೋದಯದ ನಂತರ ಇತರ ನಕ್ಷತ್ರಗಳೆಲ್ಲ ಕಾಂತಿಹೀನವಾಗಿ ಮರೆಯಾಗುವಂತೆ ಪಂಪನ ಕಾವ್ಯಗಳು ಉದಯಿಸಿದ ನಂತರ ಮುಂದಿನ ಕಾವ್ಯಗಳು ಹೇಳಹೆಸರಿಲ್ಲದಂತಾದವು. ಪಂಪ ತನ್ನ ಗ್ರಂಥದಲ್ಲಿ ಹೇಳಿಕೊಂಡಿರುವಂತೆ ಚಾಲುಕ್ಯ ದೊರೆ ೨ನೇ ಅರಿಕೇಸರಿಯ ಆಶ್ರಯದಲ್ಲಿದ್ದು 'ಆದಿಪುರಾಣ' ಮತ್ತು 'ವಿಕ್ರಮಾರ್ಜುನ ವಿಜಯ' ಎಂಬ ಆಗಮಿಕ ಮತ್ತು ಲೌಕಿಕ ಕಾವ್ಯವನ್ನು ರಚಿಸಿದ್ದಾನೆ. 'ಬೆಳಗುವೆನಿಲ್ಲಿ ಲೌಕಿಕ ಮನಲ್ಲಿ ಜಿನಾಗಮಮಂ' ಎಂದು ಪಂಪನೇ ಹೇಳಿದ್ದಾನೆ.

ಪಂಪನು ತನ್ನ ಹುಟ್ಟಿನ ಬಗ್ಗೆ ಆದಿಪುರಾಣದಲ್ಲಿ ತಿಳಿಸಿದ್ದಾನೆ. ಓದುಗರನ್ನು ಲೌಕಿಕದಿಂದ ಅಲೌಕಿಕಕ್ಕೆ, ಕತ್ತಲಿನಿಂದ ಬೆಳಕಿನೆಡೆಗೆ ಕೊಂಡೊಯ್ಯಲು ಪ್ರಯತ್ನಿಸಿರುವುದು ಈತನ ಈ ಕೃತಿಯಲ್ಲಿ ಕಂಡುಬರುತ್ತದೆ.

ಈ ಕಾವ್ಯದಲ್ಲಿ ಕವಿ ಜೈನಧರ್ಮವನ್ನು, ಕಾವ್ಯಧರ್ಮವನ್ನು ಸಮರಸವಾಗಿ ಬೆಳೆಸಿರುವುದನ್ನು

ಕಾಣಬಹುದು. ಜೈನಮತದ ಬಗ್ಗೆ ಅಲ್ಲಲ್ಲಿ ವರ್ಣನೆಯು ಕಂಡುಬಂದರೂ ಇದೊಂದು ಸುಂದರ ಭವ್ಯ ಕಾವ್ಯ. ಪಂಪನು ತನ್ನ ಎರಡನೆಯ ಕಾವ್ಯದಲ್ಲಿ ತನ್ನ ಆಶ್ರಯದಾತನಾದ ಅರಿಕೇಸರಿಯನ್ನು ಅರ್ಜುನನಿಗೆ ಹೋಲಿಸಿದ್ದಾನೆ. ಈ ಕಾವ್ಯದಲ್ಲಿ ಬರುವ ಎಲ್ಲಾ ಮಹಾವ್ಯಕ್ತಿಗಳ ಪಾತ್ರಗಳನ್ನು ಪಂಪ ಬಹು ಜಾಣ್ಮೆಯಿಂದ ಚಿತ್ರಿಸಿರುವನಲ್ಲದೆ ಕರ್ಣನಿಗೆ ವಿಶಿಷ್ಟ ಸ್ಥಾನ ಕೊಟ್ಟಿದ್ದಾನೆ. ಹೀಗೆ ಲೌಕಿಕ, ಧಾರ್ಮಿಕಗಳೆಂಬ ಕಾವ್ಯಗಳನ್ನು ರಚಿಸಿ, ಲೌಕಿಕದಲ್ಲಿ ತನ್ನ ಆಶ್ರಯದಾತನನ್ನು ಶ್ಲೇಷೆಯಿಂದ ಹೊಗಳುವ ರೀತಿಗೆ ನಮಗೆ ತಿಳಿದಂತೆ ಪಂಪನೇ ಮಾರ್ಗದರ್ಶಕ. ಕನ್ನಡ ಭಾಷೆಯ ಸೌಂದರ್ಯ, ಶಕ್ತಿಗಳನ್ನು ಬಳಸಿಕೊಂಡದ್ದು ಇವನ ಹಿರಿಮೆಗಳಲ್ಲಿ ಒಂದು. ಅವನ 'ದೇಸಿ'ಯನ್ನು ಮುಂದಿನ ಅನೇಕ ಕವಿಗಳು ಹೊಗಳಿದ್ದಾರೆ.

ಜೀವನದಲ್ಲಿದ್ದ ಸ್ವನಿಷ್ಠೆ, ಸ್ನೇಹ, ವಿಶ್ವಾಸ ಮುಂತಾದ ಜೀವನ ಮೌಲ್ಯಗಳನ್ನು ಕಾವ್ಯರೂಪದಲ್ಲಿ ಸುಂದರವಾಗಿ ಚಿತ್ರಿಸಿದ ಕವಿ ಪಂಪ. ಹೀಗಾಗಿ ಪಂಪ ಕನ್ನಡದ ಮೊದಲನೇ ಕವಿ ಅಲ್ಲದಿದ್ದರೂ ಆದಿಕವಿ ಎನಿಸಿಕೊಂಡಿದ್ದಾನೆ. ಪಂಪನ ಈ ಮಾರ್ಗವನ್ನು ಇತರ ಕವಿಗಳು ಮುಂದೆ ಅನುಸರಿಸಿದರು. ಅವನ ಉಜ್ವಲ ಪ್ರತಿಭೆ, ಪಾಂಡಿತ್ಯದೊಡನೆ ಸಮಗ್ರವಾದ ಜೀವನಾನುಭವ, ವಿಶಾಲದೃಷ್ಟಿ, ಸಮನ್ವಯ ಬುದ್ಧಿ, ಇವು ಬೆರೆತುಕೊಂಡು ಕನ್ನಡ ಮಾರ್ಗ ಕಾವ್ಯಕ್ಕೆ ಉನ್ನತ ಶಿಖರಗಳಂತಿರುವ ೨ ಕೃತಿಗಳನ್ನು ನೀಡಿದ. ಇದು ಮುಂದಿನ ಕವಿಗಳಿಗೆ ಮೇಲ್ಪಂಕ್ತಿಯಾದವು. ಆನೆ ನಡೆದುದೇ ಬೀದಿ ಎಂಬಂತೆ ಪಂಪನ ಕಾವ್ಯ ಮಾರ್ಗವೊಂದು ಕನ್ನಡ ಜೈನ ಸಾಹಿತ್ಯದಲ್ಲಿ ರೂಢವಾಯಿತು. ರನ್ನನಂತಹ ಮಹಾಕವಿ ಪಂಪನ ಕಾವ್ಯದ ಒಂದು ಆಶ್ವಾಸವನ್ನೇ ಮುಖ್ಯವಾಗಿರಿಸಿಕೊಂಡು ತನ್ನ ಗದಾಯುದ್ಧವೆಂಬ ಕೃತಿಯನ್ನು ರಚಿಸಿದ್ದಾನೆ. ನಾಗಚಂದ್ರನೆಂಬ ಇನ್ನೊಬ್ಬ ಕವಿ ತನ್ನನ್ನು ಅಭಿನವ ಪಂಪ ಎಂದು ಕರೆದುಕೊಂಡು ಪಂಪನಿಗೆ ಗೌರವ ಸಲ್ಲಿಸಿದ್ದಾನೆ.

ರತ್ನತ್ರಯರಲ್ಲಿ ಎರಡನೆಯವನು ಪೊನ್ನ. ಈತನ ಭುವನೈಕ ರಾಮಾಭ್ಯುದಯ ಲೌಕಿಕ ಗ್ರಂಥವಾದರೆ, ಶಾಂತಿನಾಥ ಪುರಾಣ (ಪುರಾಣ ನಾಮ ಚೂಡಾಮಣಿ) ಧರ್ಮ ಗ್ರಂಥವಾಗಿದೆ. ಜಿನಾಕ್ಷರಮಾಲೆ ಎಂಬ ಜಿನಸ್ತೋತ್ರವೊಂದನ್ನು ೩೯ ಕಂದ ಪದ್ಯಗಳಲ್ಲಿ ರಚಿಸಿರುವುದಾಗಿ ತಿಳಿದು ಬಂದಿದೆ. ಇದನ್ನು 'ಜಿನಸ್ತುತಿ ಸಂಗ್ರಹ' ಎಂದು ಕರೆಯಬಹುದು.

ಪೊನ್ನನ ಕಾಲ ಸುಮಾರು ಕ್ರಿ.ಶ. ೯೫೦. ಈತನು ರಾಷ್ಟ್ರಕೂಟ ಚಕ್ರವರ್ತಿ ಮುಮ್ಮಡಿ ಕೃಷ್ಣನ ಆಸ್ಥಾನ ಕವಿಯಾಗಿದ್ದು ಕ್ರಿ.ಶ. ೯೫೦ರಲ್ಲಿ ಕಾವ್ಯ ರಚಿಸಿದ್ದಾನೆ. ಈತನ ಕವಿತಾ ಶೈಲಿಯನ್ನು ಮೆಚ್ಚಿ ಈತನಿಗೆ ಮುಮ್ಮಡಿ ಕೃಷ್ಣನು ಕುರುಳ್ಗಳಸವಣ್ಣ, ಉಭಯಕವಿತಾ ಚಕ್ರವರ್ತಿ ಎಂಬ ಬಿರುದನ್ನು ನೀಡಿ ಗೌರವಿಸಿದ್ದಾನೆ.

ಕವಿರತ್ನಗಳಲ್ಲಿ ಕೊನೆಯವನು ರನ್ನ. ಈತನ ಕಾಲ ಸುಮಾರು ಕ್ರಿ.ಶ. ೯೪೯. ಜನ್ಮಸ್ಥಳ ಮುದುವೊಳಲು. ತಾಯಿ ಅಬ್ಬಲಬ್ಬೆ, ತಂದೆ ಜಿನವಲ್ಲಭೇಂದ್ರ. ಈತನು ಅಜಿತನಾಥ ಪುರಾಣ ಎಂಬ ಧಾರ್ಮಿಕ ಕಾವ್ಯವನ್ನು, ಗದಾಯುದ್ಧ ಎಂಬ ಲೌಕಿಕ ಕಾವ್ಯವನ್ನು ಬರೆದಿದ್ದಾನೆ. ಲೌಕಿಕ ಕಾವ್ಯದಲ್ಲಿ ಪಂಪನಂತೆ ತನ್ನ ಕಾವ್ಯನಾಯಕನಾದ ಭೀಮನೊಡನೆ ತನ್ನ ಆಶ್ರಯದಾತನನ್ನು ಸಮೀಕರಿಸಿ ರಚಿಸಿದ್ದಾನೆ. 'ಹುಟ್ಟು ಸಾವುಗಳಿಗೆ ಕೊನೆಯಿಲ್ಲ, ಅದು ಕೊನೆಗೊಳ್ಳಬೇಕಾದರೆ ಮೋಕ್ಷ ಪ್ರಾಪ್ತವಾಗಬೇಕು. ಈ ಮೋಕ್ಷ ಸಾಧನೆಗಾಗಿ ಜೈನಧರ್ಮವನ್ನು ನಂಬು' ಎಂದು ತನ್ನ ಕಾವ್ಯದಲ್ಲಿ ತಿಳಿಸಿದ್ದಾನೆ.

ಜೈನಧರ್ಮಪ್ರಸಾರ ಕಾರ್ಯವನ್ನು ಕಾವ್ಯ ಜಗತ್ತಿನ ಮೂಲಕ ತಂದ ಜೈನ ಕೃತಿ ಶಿವಕೋಟ್ಯಾಚಾರ್ಯರ ವಡ್ಡಾರಾಧನೆ. ಇದು ಕನ್ನಡದ ಗದ್ಯಗ್ರಂಥಗಳಲ್ಲಿ ಪ್ರಾಚೀನ ಗ್ರಂಥ. ಇದೊಂದು ಜೈನ ಧಾರ್ಮಿಕ ಕಥೆಗಳ

ಸಂಗ್ರಹವಾಗಿದೆ. ಧರ್ಮದಲ್ಲಿ ನಂಬಿಕೆ ಇಟ್ಟು, ಉಪಸರ್ಗಗಳನ್ನು ಅರಿಷಡ್ವರ್ಗಗಳನ್ನು ಜಯಿಸಿ ಕೇವಲಿಗಳಾದವರ ಕಥಾಗ್ರಂಥ. ೧೯ ಕಥೆಗಳಿರುವ ಈ ಕೃತಿಯು ಪಾತ್ರಗಳನ್ನು ಅರಳಿಸುತ್ತಾ ಧರ್ಮವನ್ನು ಮನದಲ್ಲಿ ಹಬ್ಬುತ್ತಾ ಓದುಗರನ್ನು ಮುಂದೆ ಕರೆದೊಯ್ಯುತ್ತದೆ.

ಜೈನ ಕವಿಗಳಲ್ಲಿ ಪ್ರಮುಖನೂ, ಪಂಪನ ಮಾರ್ಗಾನುಸಾರಿಯೂ ಆದ ಚಾವುಂಡರಾಯ ಚಾವುಂಡರಾಯ ಪುರಾಣ ಅಥವಾ ತ್ರಿಷಷ್ಠಿ ಲಕ್ಷಣ ಪುರಾಣ ಜೈನ ಕೃತಿಯಾಗಿದೆ. ಇದು ಜೈನಧರ್ಮದ ಪೂಜ್ಯರಾದ ೨೪ ತೀರ್ಥಂಕರರುಗಳನ್ನೂ, ಚಕ್ರವರ್ತಿಗಳನ್ನೂ ಒಳಗೊಂಡಂತೆ ೬೩ ಜನ ಶಲಾಕಾಪುರುಷರ ಕಥೆಯನ್ನೊಳಗೊಂಡಿದೆ.

೧೨ನೇ ಶತಮಾನದಲ್ಲಿದ್ದ ಕವಿ ನಾಗಚಂದ್ರ ಪಂಪಯುಗದ ಕವಿಯಾಗಿದ್ದು ಈತನು ಮಲ್ಲಿನಾಥ ಪುರಾಣ ಮತ್ತು ರಾಮಚಂದ್ರ ಚರಿತ ಪುರಾಣ ಎಂಬ ಎರಡು ಕಾವ್ಯಗಳನ್ನು ರಚಿಸಿದ್ದು, ಇವೆರಡೂ ಜೈನಾಗಮನವನ್ನು ಒಳಗೊಂಡಿರುವ ಕಾವ್ಯಗಳಾಗಿದ್ದು, ಜೈನಧರ್ಮದ ಸಾರವನ್ನು ಒಳಗೊಂಡಿದೆ.

ಶಾಂತಿನಾಥ ಎಂಬ ಜೈನಕವಿಯು ಸುಕುಮಾರ ಚರಿತಂ ಎಂಬ ಚಂಪೂಕಾವ್ಯವನ್ನು ರಚಿಸಿದ್ದು ಈ ಕಾವ್ಯವು ಧರ್ಮ ನಿರೂಪಣಾ ಗ್ರಂಥವಾಗಿದ್ದು, ಜೈನ ಮತಾಚಾರದ ವಿಚಾರವನ್ನು ಒಳಗೊಂಡಿದೆ.

೧೨ನೇ ಶತಮಾನದಲ್ಲಿದ್ದ ಪಂಪಯುಗದ ಜೈನಕವಿಯಾದ ನಯಸೇನನು ರಚಿಸಿದ ಧರ್ಮಾಮೃತ ಕೃತಿಯು ಜೈನ ಮತದ ಪ್ರಚಾರಕ್ಕಾಗಿ ರಚಿಸಿದ ಗ್ರಂಥವಾಗಿದೆ.

ಜೈನಮತದಿಂದ ಶೈವಮತಕ್ಕೆ ಸೇರಿ ಪುನಃ ಜೈನ ಮತಾವಲಂಬಿಯಾದ ನಯಸೇನನ ಸಮಕಾಲೀನ ಹಾಗೂ ಪಂಪಮಾರ್ಗಾನುಸಾರಿಯಾದ ಕವಿ ಬ್ರಹ್ಮಶಿವ ; ಸಮಯ ಪರೀಕ್ಷೆ, ತ್ರೈಲೋಕ ಚೂಡಾಮಣಿ ಎಂಬ ಗ್ರಂಥಗಳನ್ನು ಬರೆದಿದ್ದು, ತನ್ನ ಕೃತಿಗಳ ಮೂಲಕ ಜೈನಧರ್ಮದ ಸಾರವನ್ನು ಜನತೆಗೆ ತಿಳಿಸಿದ್ದಾನೆ.

ಸುಮಾರು ಕ್ರಿ.ಶ. ೧೧೪೦ರಲ್ಲಿದ್ದ ಪಂಪಯುಗದ ಕವಿ ಕರ್ಣಪಾರ್ಯ. ಈತನು ೨೨ನೇ ಜೈನ ತೀರ್ಥಂಕರನಾದ ನೇಮಿನಾಥ ಎಂಬ ಪುರಾಣವನ್ನು ಪುರಾಣ ಕೃತಿಯನ್ನು ಬರೆದಿದ್ದು ಇದು ಜೈನಧರ್ಮಕ್ಕೆ ಸಂಬಂಧಿಸಿದ ಕೃತಿಯಾಗಿದೆ. ಈತನಿಗೆ ಸಹಜ ಕವಿತಾ, ರಸೋದಯ, ಭವ್ಯಜನವನ ಮಾರ್ತಾಂಡ, ಸಮ್ಯಕ್ತ್ವ ರತ್ನಾಕರ ಇತ್ಯಾದಿ ಬಿರುದುಗಳಿವೆ.

ಈತನಿಗೆ ಸಮಕಾಲೀನನಾದ ಮತ್ತೊಬ್ಬ ಕವಿ ವೃತ್ತ ವಿಲಾಸ. ಈತನು ನಯಸೇನ, ಬ್ರಹ್ಮಶಿವರ ಹಾದಿಯಲ್ಲೇ ನಡೆದು ಬಂದವ. ಸಂಸ್ಕೃತದ ಧರ್ಮಪರೀಕ್ಷೆ ಎಂಬ ಗ್ರಂಥವನ್ನು ಕನ್ನಡಕ್ಕೆ ಅನುವಾದಿಸಿದ್ದಾನೆ.

ಪಂಪಯುಗದ ಎಲ್ಲಾ ಕವಿಗಳ ಆಶಯ ತಮ್ಮ ಕೃತಿಗಳ ಮೂಲಕ ಜೈನ ಮತಪ್ರಚಾರಕ್ಕೆ ಹೊರಟವರಾಗಿದ್ದು, ಜೈನಧರ್ಮವನ್ನು ಸಾರುವುದೇ ಇವರ ಉದ್ದೇಶವಾಗಿತ್ತು.

ನೇಮಿಚಂದ್ರನು ಸ್ವತಂತ್ರಯುಗದ ಚಂಪೂ ಕವಿಯಾಗಿದ್ದು ಹರಿಹರನ ಸಮಕಾಲೀನ. ಈತನು ಲೀಲಾವತಿ ಎಂಬ ಲೌಕಿಕ ಗ್ರಂಥವನ್ನೂ, ನೇಮಿನಾಥ ಪುರಾಣ ಎಂಬ ಧಾರ್ಮಿಕ ಕಾವ್ಯವನ್ನೂ ರಚಿಸಿದ್ದಾನೆ. ಲೀಲಾವತಿ ಈತನು ರಚಿಸಿದ ಶೃಂಗಾರ ಕಾವ್ಯ. ನೇಮಿನಾಥ ಪುರಾಣ ಕಾವ್ಯ ಮತ್ತು ಧರ್ಮಗಳೆರಡನ್ನು ಒಳಗೊಂಡಿರುವ ಗ್ರಂಥ. ಇದು ೨೨ನೇ ತೀರ್ಥಂಕರ ನೇಮಿನಾಥನ ಕಥೆಯನ್ನು ತಿಳಿಸುವ ಧಾರ್ಮಿಕ ಶ್ರೇಷ್ಠ ಕಾವ್ಯ.

ನೇಮಿಚಂದ್ರ, ರುದ್ರಭಟ್ಟರ ಸಮಕಾಲೀನ ಕವಿಯಾದ ಬೊಪ್ಪಣ್ಣ ಪಂಡಿತನು ಜೈನಕವಿಯಾಗಿದ್ದು,

"ನಿರ್ವಾಣ ಲಕ್ಷ್ಮೀಪತಿ ನಕ್ಷತ್ರಮಾಲಿಕೆ " ಎಂಬ ಚಿಕ್ಕ ಗ್ರಂಥವನ್ನೂ, ಗೊಮ್ಮಟೇಶ್ವರನನ್ನು ಕುರಿತು ೨೭ ವೃತ್ತಗಳನ್ನು ಬರೆದಿದ್ದಾನೆ.

ಚಂಪೂ ಮಾರ್ಗದಲ್ಲಿ ಕಾವ್ಯವನ್ನು ರಚಿಸಿರುವ ಸ್ವತಂತ್ರ್ಯಯುಗದ ಕವಿ ಅಗ್ಗಳ. ಈತನ ಕಾಲ ಸುಮಾರು ಕ್ರಿ.ಶ. ೧೧೮೯. ಈತನು ಚಂದ್ರಪ್ರಭ ಪುರಾಣ ಎಂಬ ಕೃತಿಯನ್ನು ರಚಿಸಿದ್ದಾನೆ.

ಬಂಧುವರ್ಮನೆಂಬ ಜೈನಕವಿ ಸುಮಾರು ಕ್ರಿ.ಶ. ೧೨೦೦ರಲ್ಲಿದ್ದ. ಇವನಿಗೆ ವಾಣಿವಲ್ಲಭನೆಂಬ ಬಿರುದಿತ್ತು ಈತನು ಹರಿವಂಶಾಭ್ಯುದಯ ಎಂಬ ಗ್ರಂಥವನ್ನು ರಚಿಸಿದ್ದು, ಇದು ಅಹಿಂಸಾ ಪರಮೋ ಧರ್ಮ ಎಂಬುದನ್ನು ತಿಳಿಸುತ್ತದೆ.

ಕ್ರಿ.ಶ. ಸುಮಾರು ೧೨೦೫ರಲ್ಲಿದ್ದ ಸ್ವತಂತ್ರ್ಯಯುಗದ ಚಂಪೂ ಕವಿ ಪಾರ್ಶ್ವಪಂಡಿತ. ಈತನು ಪಾರ್ಶ್ವನಾಥಪುರಾಣ ಎಂಬ ಕೃತಿಯನ್ನು ರಚಿಸಿದ್ದಾನೆ. ಈ ಕೃತಿಯು ಕನ್ನಡದಲ್ಲಿ ಬರೆದವರಲ್ಲಿ ಈತನೇ ಮೊದಲಿಗ.

ಸ್ವತಂತ್ರ್ಯಯುಗದ ಮತ್ತೊಬ್ಬ ಕವಿ ಕುಮುದೇಂದು. ಜೈನಕವಿಯಾದ ಈತನು ಷಟ್ಪದಿಯಲ್ಲಿ ಜೈನರಾಮಾಯಣವನ್ನು ಬರೆದಿದ್ದಾನೆ. ಈತನ ಕಾಲ ಸುಮಾರು ೧೨೭೦.

೧೨ನೇ ಶತಮಾನದ ಚಂಪೂಯುಗದಲ್ಲಿ ಪ್ರಮುಖನಾದವನು ಜನ್ನ. ಈತನು ಹೊಯ್ಸಳ ವೀರಬಲ್ಲಾಳನ ಆಸ್ಥಾನ ಕವಿಯಾಗಿದ್ದು, ಈತನಿಗೆ ಕವಿಚಕ್ರವರ್ತಿ ಎಂಬ ಬಿರುದಿತ್ತು. ಯಶೋಧರ ಚರಿತೆ ಮತ್ತು ಅನಂತನಾಥ ಪುರಾಣವು ಜೈನಧರ್ಮ ಸಾರವನ್ನೂ ಹೇಳುವ ಗ್ರಂಥವಾಗಿದೆ.

ಗುಣವರ್ಮನು ಸುಮಾರು ಕ್ರಿ.ಶ. ೯೦೦ರಲ್ಲಿ ಇದ್ದನೆಂದೂ, ಈತನ ನೇಮಿನಾಥ ಪುರಾಣ ಎಂಬ ಗ್ರಂಥವು ಜೈನ ಗ್ರಂಥವಾಗಿದೆ.

೨ನೇ ಗುಣವರ್ಮನು ಜೈನಕವಿಯಾಗಿದ್ದು, ಈತನ ಕಾಲ ಸುಮಾರು ಕ್ರಿ.ಶ.೧೨೩೦. ಪುಷ್ಪದಂತ ಪುರಾಣ ಎಂಬ ಚಂಪೂ ಗ್ರಂಥವನ್ನು ಬರೆದಿದ್ದಾನೆ.

ಕಮಲಭವ ಎಂಬ ಜೈನಕವಿ. ಈತನ ಕಾಲ ಸುಮಾರು ಕ್ರಿ.ಶ. ೧೨೩೫ರಲ್ಲಿ. ಈತನು ಶಾಂತೇಶ್ವರ ಪುರಾಣ ಎಂಬ ಚಂಪೂ ಕೃತಿಯನ್ನು ಬರೆದಿದ್ದಾನೆ.

ಸುಮಾರು ಕ್ರಿ.ಶ. ೧೨೩೫ರಲ್ಲಿದ್ದ ಚಂಪೂಯುಗದ ಚಂಪೂಕವಿ ಆಂಡಯ್ಯ. ಈತನು ಕಬ್ಬಿಗರ ಕಾವ ಎಂಬ ಕಾವ್ಯವನ್ನು ರಚಿಸಿ ಕನ್ನಡ ಸಾಹಿತ್ಯಲೋಕದಲ್ಲಿ ತನ್ನ ಸ್ಥಾನವನ್ನು ಭದ್ರಪಡಿಸಿದ್ದಾನೆ. ಈ ಕಾವ್ಯಕ್ಕೆ 'ಕವನಗೆಲ್ಲ' ಎಂದೂ ಹೆಸರಿದೆ. ಈ ಕಾವ್ಯದಲ್ಲಿ ಕವಿಯು ಜೈನಧರ್ಮದ ಹಿರಿಮೆಯನ್ನು ಮತ್ತು ಮಹತ್ವವನ್ನು ಎತ್ತಿಹಿಡಿಯಲು ಹೊರಟಿರುತ್ತವೆ. ಪರಮತವನ್ನು ಅವಹೇಳನ ಮಾಡದೆ ತನ್ನ ಮತವಾದ ಜೈನಮತವನ್ನು ಎತ್ತಿಹಿಡಿದಿರುವುದು ಈತನ ಜಾಣ್ಮೆಗೆ ಉದಾಹರಣೆಯಾಗಿದೆ.

ಹಳಗನ್ನಡ ಕೃತಿಗಳಿಂದ ಆಯ್ದ ಕಾವ್ಯ ಸಂಕಲನವನ್ನು ಹೊರತಂದ ಕವಿ ಮಲ್ಲಿಕಾರ್ಜುನ. ಈತನ ಕಾಲ ೧೩ನೇ ಶತಮಾನ. ಕ್ರಿ.ಶ. ೧೨೪೫. ಈತನ ಸೂಕ್ತಿ ಸುಧಾರ್ಣವ, ಲೀಲಾವತಿ, ಅನಂತನಾಥ ಪುರಾಣ, ಚಂದ್ರಪ್ರಭ ಪುರಾಣ, ಜಗನ್ನಾಥ ವಿಜಯ ಕೃತಿಗಳು ಧರ್ಮದ ಬಗ್ಗೆ ಉಲ್ಲೇಖ ದೊರೆಯದಿದ್ದರೂ ಕೇಶೀರಾಜನ ತಂದೆ ಎಂದು ತಿಳಿದು ಬಂದಿರುವುದರಿಂದ ಈತನು ಜೈನ ಎಂದು ಗುರುತಿಸಬಹುದು.

ಮಹಾಬಲನು ಸುಮಾರು ಕ್ರಿ.ಶ. ೧೨೫೪ರಲ್ಲಿದ್ದನೆಂದೂ ಈತನು ಕವಿಯಾಗಿದ್ದು ನೇಮಿನಾಥ

ಪುರಾಣವನ್ನು ಬರೆದಿದ್ದಾನೆಂದು ತಿಳಿದು ಬರುತ್ತದೆ.

ಸುಮಾರು ೧೨೬೦ರಲ್ಲಿದ್ದ ಜೈನ ಯುಗದ ಚಂಪೂಕವಿ ಕೇಶೀರಾಜ. ಈತನು ಮಲ್ಲಿಕಾರ್ಜುನನ ಮಗ, ಜನ್ನನ ಸೋದರಳಿಯ. ಚೋಳಪಾಲಚರಿತ್ರೆ, ಸುಭದ್ರಾಹರಣ್ಯ, ಪ್ರಬೋಧ ಚಂದ್ರ, ಕಿರಾತ, ಶ್ರೀಚಕ್ರಮಾಲೆ ಎಂಬ ೫ ಗ್ರಂಥಗಳನ್ನು ಬರೆದಿರುವನಲ್ಲದೆ ಶಬ್ದಮಣಿದರ್ಪಣವೆಂಬ ವ್ಯಾಕರಣ ಗ್ರಂಥದ ಕರ್ತೃ ಆಗಿದ್ದಾನೆ.

ಆಚಣ್ಣನು ಸುಮಾರು ಕ್ರಿ.ಶ. ೧೧೯೫ರಲ್ಲಿದ್ದ ಜೈನಕವಿ. ತಂದೆ ಕೇಶೀರಾಜ, ತಾಯಿ ಮಲ್ಲಾಂಬಿಕೆ. ಈತನಿಗೆ ವಾಣಿವಲ್ಲಭ ಎಂಬ ಬಿರುದಿದ್ದು, ವರ್ಧಮಾನ ಪುರಾಣ ಎಂಬ ಕೃತಿಯ ಕರ್ತೃ.

ನಾಗರಾಜನೆಂಬ ಜೈನಕವಿ ಸುಮಾರು ಕ್ರಿ.ಶ. ೧೩೩೧ರಲ್ಲಿದ್ದನೆಂದೂ ಈತನ ಕೃತಿ ಪುಣ್ಯಾಸ್ರವ ಜೈನಧರ್ಮದ ಶ್ರೇಷ್ಠತೆಯ ಬಗ್ಗೆ ಕಥಾನಿರೂಪಣ ಶೈಲಿಯಲ್ಲಿ ಹೇಳಹೊರಟಿರುವ ಈತನು ಜೈನನೆಂದು ಊಹಿಸಬಹುದು.

ಬಾಹುಬಲಿ ಪಂಡಿತನು ಸುಮಾರು ಕ್ರಿ.ಶ. ೧೩೫೨ರಲ್ಲಿದ್ದ ಜೈನಕವಿ. ಈತನ ಕೃತಿ ಧರ್ಮನಾಥ ಪುರಾಣ.

ಬಾಹುಬಲಿ ಪಂಡಿತನ ಸಮಕಾಲೀನ ಕವಿ ಮಧುರ. ಈತನ ಕಾಲ ಸುಮಾರು ಕ್ರಿ.ಶ. ೧೩೮೫. ಧರ್ಮನಾಥ ಪುರಾಣ ಎಂಬ ಕೃತಿ ಬರೆದಿದ್ದು ಕೇವಲ ೪ ಆಶ್ವಾಸಗಳು ಮಾತ್ರ ದೊರೆತಿದೆ.

ಪದ್ಮಣಾಂಕನು ೧೫ನೇ ಶತಮಾನದಲ್ಲಿದ್ದ ಜೈನಕವಿ. ಈತನು ಪದ್ಮರಾಜ ಪುರಾಣ ಎಂಬ ಕಾವ್ಯವನ್ನು ರಚಿಸಿದ್ದಾನೆ.

ನಂತರದಲ್ಲಿ ಪ್ರಾರಂಭಗೊಂಡ ಕುಮಾರವ್ಯಾಸ ಯುಗದ ಜೈನಕವಿಗಳು ತಮ್ಮ ಪೂರ್ವಜರ ಚಂಪೂಶೈಲಿಯನ್ನು ಬಿಟ್ಟು ದೇಶೀಯ ಛಂದಸ್ಸನ್ನು ಬಳಸಿ ತಮ್ಮ ಕಾವ್ಯರಚನೆಯ ಮೂಲಕ ಧರ್ಮ ಪ್ರಸಾರ ಕಾರ್ಯವನ್ನು ಮಾಡಿದರು.

ಭಾಸ್ಕರನೆಂಬ ಜೈನಕವಿ ೧೫ನೇ ಶತಮಾನದ ಪೂರ್ವಭಾಗದಲ್ಲಿದ್ದನು. ಈತನ ತಂದೆ ಬಸವಾಂಕನೆಂಬ ಜೈನ ಬ್ರಾಹ್ಮಣನೆಂದೂ, ಈತನು ಜೀವಂಧರ ಚರಿತೆ ಎಂಬ ಕಾವ್ಯವನ್ನು ಭಾಮಿನಿ ಷಟ್ಪದಿಯಲ್ಲಿ ರಚಿಸಿದ್ದಾನೆ.

೧೫ನೇ ಶತಮಾನದ ಮಧ್ಯಭಾಗದಲ್ಲಿದ್ದ ಮತ್ತೊಬ್ಬ ಜೈನಕವಿ ಕಲ್ಯಾಣಕೀರ್ತಿ. ಈತನು ಜ್ಞಾನ ಚಂದ್ರಾಭ್ಯುದಯ, ಕಾಮನಕಥೆ, ಅನುಪ್ರೇಕ್ಷೆ, ಜನಸ್ತುತಿ ತತ್ವ ಭೇದಾಷ್ಟಕ ಎಂಬ ಗ್ರಂಥಗಳನ್ನು ರಚಿಸಿದ್ದಾನೆ.

ಶೃಂಗಾರ ಕವಿಯೆಂಬ ಹೆಸರಿಗೆ ಪಾತ್ರನಾದ ಕವಿ ರತ್ನಾಕರವರ್ಣಿ. ಈತನು ೧೫ನೆಯ ಶತಮಾನದ ಮಧ್ಯಭಾಗದಲ್ಲಿದ್ದ ಜೈನಕವಿ. ೮೪ ಸಂಧಿಗಳುಳ್ಳ ಭರತೇಶ ವೈಭವವನ್ನು ಸಾಂಗತ್ಯದಲ್ಲಿ ಬರೆದು ನಿರೂಪಿಸಿದ್ದಾನೆ. ಈತನು ಒಮ್ಮೆ ಜೈನಮತವನ್ನು ತೊರೆದು ವೀರಶೈವ ದೀಕ್ಷೆಯನ್ನು ಪಡೆದು ಮತ್ತೆ ಸ್ವಧರ್ಮಕ್ಕೆ ಮರಳಿದ. ಈತನು ಭರತೇಶ ವೈಭವವನ್ನಲ್ಲದೆ ಅಪರಾಜಿತೇಶ್ವರ ಶತಕ, ತ್ರಿಲೋಕ ಶತಕ, ರತ್ನಾಕರಾಧೀಶ್ವರ ಶತಕ ಎಂಬ ಶತಕ ಗ್ರಂಥ, ೨ ಸಾವಿರ ಗ್ರಂಥಗಳಷ್ಟು ಆಧ್ಯಾತ್ಮ ಗೀತೆಗಳನ್ನು ರಚಿಸಿದ್ದಾನೆ. ಈತನ ಭರತೇಶ ವೈಭವ ಒಂದು ಶೃಂಗಾರ ರಸಕಾವ್ಯ.

ವಿಜಯಣ್ಣ ಕವಿ ರತ್ನಾಕರವರ್ಣಿಯ ಸಮಕಾಲೀನ ಕವಿ. ಈತನ ಕಾಲ ಸುಮಾರು ಕ್ರಿ.ಶ. ೧೪೫೦. ಈತನ ದ್ವಾದಶಾನುಪ್ರೇಕ್ಷೆ ಜೈನಧರ್ಮವನ್ನು ಪ್ರತಿಪಾದಿಸುವ ಗ್ರಂಥ.

ಶಿಶುಮಾಯಣ (ತರಳಮಾಯಣ) ಈತನ ಕಾಲ ಕ್ರಿ.ಶ. ೧೪೫೪. ಈತನ ಕೃತಿ ಅಂಜನಾಚರಿತೆ. ಇದು ೬ ಸಾವಿರ ಪದ್ಯಗಳುಳ್ಳ ಬೃಹತ್ ಗ್ರಂಥ. ತ್ರಿಪುರ ದಹನ ಸಾಂಗತ್ಯ ಎಂಬ ಇನ್ನೊಂದು ಗ್ರಂಥವಿದೆ.

ತೆರಕಣಾಂಬಿ ಬೊಮ್ಮರಸ ೧೫ನೆಯ ಶತಮಾನದ ಜೈನಕವಿ. ಸನತ್ಕುಮಾರ ಚರಿತೆ, ಜೀವಂತರ ಸಾಂಗತ್ಯ ಎಂಬ ಎರಡು ಕೃತಿಗಳನ್ನು ರಚಿಸಿದ್ದಾನೆ.

ಸುಮಾರು ಕ್ರಿ.ಶ. ೧೫೦೦ರಲ್ಲಿದ್ದ ಕೋಟೇಶ್ವರನೆಂಬ ಕವಿಯು ಭಾಮಿನಿ ಷಟ್ಪದಿಯಲ್ಲಿ ಜೀವಂಧರ ಚರಿತೆಯನ್ನು ಬರೆದಿದ್ದಾನೆ.

ಮಂಗರಸನು ಖಗೇಂದ್ರ ಮಣಿದರ್ಪಣ ಎಂಬ ವಿಷವೈದ್ಯ ಗ್ರಂಥವನ್ನು, ೨ನೇ ಮಂಗರಸನು ೧೪೫೮ರಲ್ಲಿ ಮಂಗರಾಜ ನಿಘಂಟನ್ನು, ೩ನೇ ಮಂಗರಸನು ಜಯನೃಪಕಾವ್ಯ, ನೇಮಿ ಜಿನೇಶ್ವರ ಸಂಗತಿ, ಶ್ರೀಪಾಲ ಚರಿತೆ, ಪ್ರಭಂಜನ ಚರಿತೆ, ಸಂಯುಕ್ತ ಕೌಮುದಿ, ಸೂಪಶಾಸ್ತ್ರ ಇತ್ಯಾದಿ ಗ್ರಂಥಗಳನ್ನು ಬರೆದಿದ್ದಾನೆ.

ಶಿವಮೊಗ್ಗ ಜಿಲ್ಲೆಯವನಾದ ಅಭಿನವ ವಾದಿ ವಿದ್ಯಾನಂದನು ಕಾವ್ಯಸಾರ ಎಂಬ ಕವನ ಸಂಕಲನವನ್ನು ಬರೆದಿದ್ದಾನೆ. ಈತನ ಧರ್ಮದ ಬಗ್ಗೆ ಉಲ್ಲೇಖಗಳಿಲ್ಲದಿದ್ದರೂ ಜೈನನೆಂದು ಊಹಿಸಬಹುದು. ಈತನ ಕಾಲ ಸುಮಾರು ಕ್ರಿ.ಶ. ೧೬ನೆಯ ಶತಮಾನದ ಆದಿಭಾಗ.

೧೬ನೆಯ ಶತಮಾನದ ಮಧ್ಯಭಾಗದಲ್ಲಿದ್ದ ಸಾಳ್ವ ಕವಿ ಜೈನ. ಈತನು ಸಾಳ್ವ ಭಾರತ, ರಸರತ್ನಾಕರ, ವೈದ್ಯಸಾಂಗತ್ಯ ಗ್ರಂಥಗಳನ್ನು ರಚಿಸಿರುವನಲ್ಲದೆ ಶಾರದಾ ವಿಲಾಸ ಎಂಬ ಗ್ರಂಥವನ್ನು ರಚಿಸಿರಬಹುದೆಂದು ಊಹಿಸಲಾಗಿದೆ.

೧೬ನೆಯ ಶತಮಾನದ ಮಧ್ಯಭಾಗದಲ್ಲಿದ್ದ ಮತ್ತೊಬ್ಬ ಜೈನಕವಿ ದೊಡ್ಡಯ್ಯ. ಈತನ ಕಾಲ ಸುಮಾರು ಕ್ರಿ.ಶ. ೧೫೫೦. ಈತನು ೮ನೇ ತೀರ್ಥಂಕರನ ಚರಿತೆಯನ್ನು ಸಾಂಗತ್ಯದಲ್ಲಿ ಚಂದ್ರಪ್ರಭೆ ಚರಿತೆ ಕೃತಿಯನ್ನಾಗಿ ರಚಿಸಿದ್ದಾನೆ.

ಶೃಂಗೇರಿಯವನಾದ ಬಾಹುಬಲಿಯ ಕಾಲ ಸುಮಾರು ಕ್ರಿ. ಶ. ೧೫೬೦. ಈತನ ಕೃತಿ ನಾಗಕುಮಾರ.

೧೬ನೇ ಶತಮಾನದಲ್ಲಿ ಕಾವ್ಯ ರಚನೆಗೆ ತೊಡಗಿದ ಇತರ ಜೈನ ಕವಿಗಳೆಂದರೆ ವಿಜಯಕುಮಾರ ಚರಿತೆಯ ಕರ್ತೃ ಶ್ರುತಕೀರ್ತಿ. ಚಂದ್ರಪ್ರಭ ಷಟ್ಪದಿಯ ಕರ್ತೃ ದೊಡ್ಡಣಾಂಕ. ಶೃಂಗಾರ ಕಥೆಯ ಕರ್ತೃ ಪದ್ಮರಸ. ಈ ಕೃತಿಯಲ್ಲಿ ಶೃಂಗಾರ ಪ್ರಧಾನವಾದ ಸುಖನಿಲಯ ಪುರದ ಅರಸುಕುಮಾರನ ಕಥೆಯನ್ನೊಳಗೊಂಡಿದೆ. ಶೃಂಗಾರ ಕಥೆಯ ಕರ್ತೃ ಪದ್ಮರಸನೂ, ವಜ್ರಕುಮಾರ ಚರಿತೆಯ ಕರ್ತೃ ಬ್ರಹ್ಮಕವಿಯೂ, ನಾನಾರ್ಥ ರತ್ನಾಕರ ಬರೆದ ದೇವೋತ್ತಮ, ಕರ್ಣಾಟಕ ಸಂಜೀವನ ಎಂಬ ಕೃತಿ ರಚಿಸಿದ ಶೃಂಗಾರ ಕವಿ, ಯೋಗ ರತ್ನಾಕರವನ್ನು ಬರೆದ ಶಾಂತರಸ.

ಮಹಾವಿದ್ವಾಂಸನೂ ಷಡ್ಭಾಷಾ ಪಂಡಿತನೂ ಆದ ದೇವಚಂದ್ರನು ಹೊಗಳಿರುವ ಭಟ್ಟಾಕಳಂಕ ೧೭ನೇ ಶತಮಾನದ ಆದಿಕವಿ. ಈತನ ಕಾಲ ಸುಮಾರು ಕ್ರಿ.ಶ. ೧೬೦೪. ಕನ್ನಡ ಸಂಸ್ಕೃತಗಳೆರಡರಲ್ಲೂ ಕವಿ ಎಂದು ತಾನೇ ಹೇಳಿಕೊಂಡಿರುವಂತೆ ಈತ ಶಬ್ದಾನುಶಾಸನವೆಂಬ ವ್ಯಾಕರಣ ಗ್ರಂಥವನ್ನು ಬರೆದಿರುತ್ತಾನೆ. ಇದಲ್ಲದೆ ಭಾಷಾ ಮಂಜರಿ ಎಂಬ ವೃತ್ತಿಯನ್ನು ಮಂಜರಿ ಮಕರಂದ ಎಂಬ ವ್ಯಾಖ್ಯೆಯನ್ನು ಬರೆದಿದ್ದಾನೆ.

೧೭ನೇ ಶತಮಾನದಲ್ಲಿದ್ದ ಧರಣಿ ಪಂಡಿತ ಎಂಬ ಜೈನಕವಿ. ಈತನ ಕಾಲ ಸುಮಾರು ಕ್ರಿ.ಶ. ೧೬೫೦. ಈತನು ವರಾಂಗನೃಪ ಚರಿತೆ ಮತ್ತು ಬಿಜ್ಜಳರಾಯ ಚರಿತೆ ಎಂಬ ಗ್ರಂಥಗಳನ್ನು ಬರೆದಿದ್ದಾನೆ. ಬಿಜ್ಜಳರಾಯ

ಚರಿತೆಯಲ್ಲಿ ಬಿಜ್ಜಳ ರಾಜನನ್ನು ಜೈ ಶಾಸನ ವಾಧಿವರ್ಧನ ಚಂದ್ರಮ, ಜೈನ ವಂಶಾನ್ವಯ ತಿಲಕ ಎಂದು ಹೊಗಳಿರುವುದು ಕಂಡು ಬಂದಿರುವುದರಿಂದ ಬಿಜ್ಜಳರಾಯ ಜೈನನೆಂದು ತಿಳಿಯುತ್ತದೆ.

ಈತನ ಸಮಕಾಲೀನರಾದ ನಾಗಚಂದ್ರನು ಜಿನಮುನಿ ತನಯವನ್ನೂ, ಚಿದಾನಂದನೆಂಬ ಕವಿ ಮುನಿ ವಂಶಾಭ್ಯುದಯವನ್ನೂ ಬರೆದಿರುವುದಾಗಿ ತಿಳಿದು ಬಂದಿದೆ. ದೇವಚಂದ್ರನೆಂಬ ಜೈನಕವಿ ಮೈಸೂರು ಮುಮ್ಮಡಿ ಕೃಷ್ಣದೇವರಾಯನ ಆಶ್ರಿತನು. ಈತನು ರಾಜಾವಳೀ ಕಥೆ, ರಾಮಕಥಾವತಾರವೆಂಬ ಗ್ರಂಥ ರಚಿಸಿದ್ದಾನೆ.

ಹೀಗೆ ಜೈನಕವಿಗಳು ತಮ್ಮ ಸಾಹಿತ್ಯ ಕೃತಿಗಳಿಂದ ತಮ್ಮ ಧರ್ಮಪ್ರಚಾರದ ಆಕಾಂಕ್ಷೆಯನ್ನು ತೋರಿರುವುದನ್ನು ಕಾಣಬಹುದು.

ಜೈನಧರ್ಮದ ಸಿದ್ಧಾಂತಗಳಾದ ಭವಾವಳಿ, ಮೋಕ್ಷ ಸಿದ್ಧಾಂತ, ಕರ್ಮಸಿದ್ಧಾಂತ, ಪಂಚಾಣುವ್ರತಗಳಾದ ಸತ್ಯ, ಅಹಿಂಸೆ, ಅಪರಿಗ್ರಹ, ಅಚೌರ್ಯ, ಬ್ರಹ್ಮಚರ್ಯ ಮತ್ತು ಉತ್ತಮ ಕ್ಷಮಾ ಮಾರ್ಧವ (ಮೃದುತ್ವ) ಆರ್ಜವ (ಸರಳ) ತಪ, ತ್ಯಾಗ ಮೊದಲಾದ ಅಂಶಗಳನ್ನು ಇಟ್ಟುಕೊಂಡು ಜೈನಧರ್ಮ ಸಿದ್ಧಾಂತಗಳನ್ನು ಅನಾವರಣಗೊಳಿಸಿ ಕೃತಿಯಲ್ಲಿ ಬಳಸಿರುವುದನ್ನು ಗುರುತಿಸಬಹುದು.

ಹೀಗೆ ಆರಂಭಗೊಂಡ ಅಲೌಕಿಕ ಕಾವ್ಯ ಪರಂಪರೆಯನ್ನು ಮುಂದಿನ ಎಲ್ಲಾ ಜೈನ ಕವಿಗಳೂ ಅನುಸರಿಸಿದಂತೆ ಕಂಡುಬರುತ್ತದೆ. ೨೪ ತೀರ್ಥಂಕರರಲ್ಲಿ ಯಾರಾದರೊಬ್ಬ ತೀರ್ಥಂಕರನನ್ನು ತಮ್ಮ ಪುರಾಣಕಾವ್ಯದ ವಸ್ತುವನ್ನಾಗಿ ಅವರು ಬಳಸಿಕೊಂಡಿದ್ದಾರೆ. ಇಲ್ಲೆಲ್ಲ ಜೈನಧರ್ಮದ ತತ್ವಸಿದ್ಧಾಂತಗಳ ಪ್ರಸಾರವೇ ಪ್ರಧಾನವಾಗಿರುವುದನ್ನು ಗಮನಿಸಬಹುದು.

ಅಧ್ಯಾಯ ೩

ಜನ್ನ ಮತ್ತು ರತ್ನಾಕರವರ್ಣಿ - ಕವಿ - ಕೃತಿ - ಪರಿಚಯ

ಜನ್ನ - ಕವಿ - ಕೃತಿ - ಪರಿಚಯ

ಜನ್ನನು ಕನ್ನಡದ ಮುಖ್ಯ ಚಂಪೂ ಕವಿಗಳಲ್ಲಿ ಒಬ್ಬ. ಜನ್ನಿಗ, ಜನ್ನಯ್ಯ ಜನ್ನಮರಸ ಎಂದೂ ಈತನು ಪ್ರಸಿದ್ಧ. ಈತನ ಕಾಲವನ್ನು ೧೨ನೇ ಶತಮಾನದ ಕೊನೆಯ ಭಾಗ ಮತ್ತು ೧೩ನೇ ಶತಮಾನದ ಮೊದಲ ಭಾಗ ಎಂದು ಹೇಳಬಹುದು. ಜನ್ನ ಜೈನ ಧರ್ಮೀಯನು. ದೇವಮುನಿ ಈತನ ಧಾರ್ಮಿಕ ಗುರು. ಈತ ಹೊಯ್ಸಳ ನರಸಿಂಹನಲ್ಲಿ ಕಟಕೋಪಾಧ್ಯಾಯನಾಗಿದ್ದ. ಈತ ಪಂಪನಂತೆ ಕವಿಯೂ, ಕಲಿಯೂ ಆಗಿದ್ದ. ಇವನು ಲಕ್ಷ್ಮಿ ಸರಸ್ವತಿ ಇಬ್ಬರೂ ಒಲಿದಿರುವ ಅದೃಷ್ಟಶಾಲಿಯಾಗಿದ್ದ. ಜನ್ನನು ಯಶೋಧರ ಚರಿತೆ, ಅನಂತನಾಥ ಪುರಾಣ ಎಂಬ ಕೃತಿಯನ್ನು ಬರೆದಿದ್ದಾನೆ. ಇತ್ತೀಚೆಗೆ 'ಅನುಭವ ಮುಕುರ' ಎಂಬ ಕೃತಿ ಸಿಕ್ಕಿದೆ. ಜನ್ನ ಪಂಡಿತರ, ಕವಿಗಳ ವಂಶದಲ್ಲಿ ಹುಟ್ಟಿದವನು. ಸಮನೋಬಾಣ ಎಂಬ ಬಿರುದಿನ ಶಂಕರ ಇವನ ತಂದೆ, ತಾಯಿ ಗಂಗಾದೇವಿ, ಈತನ ಹೆಂಡತಿ ಲಕುಮಾದೇವಿ. ಸೂಕ್ತಿ ಸುಧಾರಣವ ಎಂಬ ಸಂಕಲನ ಗ್ರಂಥವನ್ನು ರಚಿಸಿದ ಮಲ್ಲಿಕಾರ್ಜುನ ಜನ್ನನ ಭಾವ. ಶಬ್ದಮಣಿದರ್ಪಣದ ಕೇಶೀರಾಜ ಈ ಮಲ್ಲಿಕಾರ್ಜುನನ ಮಗ. ೨ನೇ ನಾಗವರ್ಮ ಜನ್ನನಿಗೆ ಉಪಾಧ್ಯಾಯನಾಗಿದ್ದ. ಈ ವಿದ್ವಾಂಸರ ವಂಶದಲ್ಲಿ ಇದ್ದುದರಿಂದ ಜನ್ನನಿಗೆ ರಾಜರ ಕೃಪೆ ಬೇಗ ದೊರೆಯಿತು. ಹೊಯ್ಸಳ ಚಕ್ರವರ್ತಿ ವೀರ ಬಲ್ಲಾಳನಲ್ಲಿ ಜನ್ನನು ಆಸ್ಥಾನ ಕವಿಯಾಗಿದ್ದನು. ಬಲ್ಲಾಳನ ಮಗ ವೀರನರಸಿಂಹನಲ್ಲಿ ಆಸ್ಥಾನ ಕವಿಯಾಗುವುದರ ಜೊತೆಗೆ ಮಂತ್ರಿಯೂ ದಂಡಾಧೀಶನೂ ಆಗಿದ್ದನು. ವೀರಬಲ್ಲಾಳನು ಜನ್ನನಿಗೆ ಕವಿ ಚಕ್ರವರ್ತಿ ಎಂಬ ಬಿರುದನ್ನು ಕೊಟ್ಟಿದ್ದಾನೆ. ಅಲ್ಲದೆ ಜನ್ನ ತನ್ನನ್ನು ಸಾಹಿತ್ಯ ರತ್ನಾಕರ, ಕವಿಕಲ್ಪಲತಾ ಮಂದಾರ, ವಿದ್ವತ್ ಸಭಾ ಕಳಹಂಸ, ಕವಿ ಬಾಳಲೋಚನ - ಇತ್ಯಾದಿ ಬಿರುದುಗಳಿಂದ ಕರೆದುಕೊಂಡಿದ್ದಾನೆ.

ಜನ್ನನು ವೀರಬಲ್ಲಾಳನ ಕಾಲದಲ್ಲಿಯೇ ಕೆಲವು ಶಾಸನಗಳನ್ನು ರಚಿಸಿದ್ದಾನೆ. ವಿಶೇಷವಾದ ಜನಭಕ್ತಿ ಇದ್ದುದರಿಂದ ಅನಂತನಾಥ ಪುರಾಣವನ್ನು ಬರೆದುದಲ್ಲದೆ ಅನಂತನಾಥ ಬಸದಿಯೊಂದನ್ನು ಕಟ್ಟಿಸಿ, ಹಳೇಬೀಡಿನಲ್ಲಿ ವಿಜಯ ಪಾರ್ಶ್ವಜಿನೇಶ್ವರ ಬಸದಿಯ ದ್ವಾರವನ್ನು ಮಾಡಿಸಿ ತನ್ನ ಜಿನಭಕ್ತಿಯನ್ನು ತೋರಿಸಿದ್ದಾನೆ.

"ಜಗದೊಳ್ ತಾನಿತ್ತ ಕೈಯಲ್ಲದೆ ಒಡ್ಡಿದ ಕೈಯಲ್ಲದ ಪೆಂಪು" ಎಂದು ಹೇಳಿಕೊಂಡಿರುವುದರಿಂದ, ಜನ್ನನು ಉದಾರವಾಗಿ ದಾನಧರ್ಮ ಮಾಡಿದಂತೆ ತಿಳಿಯುತ್ತದೆ.

ಕವಿತ್ವ, ವ್ಯಾಕರಣ, ತರ್ಕ, ನಾಟ್ಯ, ಸಂಗೀತ, ಶಾಸ್ತ್ರಕಲೆಗಳಲ್ಲಿ ಪ್ರಭುತ್ವವನ್ನು ಪಡೆದಿರುವ ಜನ್ನನ ಕಾವ್ಯರಚನೆ ಶಾಸನಗಳಿಂದ ಆರಂಭವಾಗಿದೆ. ಇವನು ೪ ಶಾಸನಗಳನ್ನು ರಚಿಸಿದ್ದಾನೆ. ಚನ್ನರಾಯ ಪಟ್ಟಣದ ೧೭೬ನೇ ಶಾಸನ (ಕ್ರಿ.ಶ. ೧೧೯೧), ತರೀಕೆರೆಯ ೪೫ನೇ ಶಾಸನ (೧೧೯೭) ೪೨ನೇ ಶಾಸನ (೧೬೦೨) ಇವನಿಂದ ರಚನೆಯಾಗಿದೆ. ಕಾವ್ಯಗುಣಗಳಿಂದ ಕೂಡಿದ ಜನ್ನನ ಎಲ್ಲಾ ಶಾಸನಗಳೂ ಚಂಪೂ ಶೈಲಿಯಲ್ಲಿವೆ.

ಯಶೋಧರ ಚರಿತೆ : ಇದು ಜನ್ನನ ಜನಪ್ರಿಯ ಕೃತಿ. ವಿಷಮ ಪ್ರಣಯ ಪ್ರಸಂಗಗಳನ್ನೊಳಗೊಂಡ ಧಾರ್ಮಿಕ ಕೃತಿ. ಈ ಕಾವ್ಯವು ಅನೇಕ ಅಂಶಗಳಿಂದ ವಿಶಿಷ್ಟವಾದುದು. ಒಂದು ಅರ್ಥದಲ್ಲಿ ನೋಡಿದರೆ ಇದು ಚಂಪೂಕಾವ್ಯವೇ ಅಲ್ಲ, ಏಕೆಂದರೆ ಇದರಲ್ಲಿ ಗದ್ಯವೇ ಇಲ್ಲ. ಅಲ್ಲದೇ ಇರುವ ಹತ್ತೇ ಹತ್ತು ವೃತ್ತಗಳನ್ನು ಬಿಟ್ಟರೆ ಸಂಪೂರ್ಣವಾಗಿ ಕಂದಗಳಲ್ಲೇ ರಚಿತವಾಗಿರುವ ಕಾವ್ಯ ಇದು. ೧೨೦೯ರಲ್ಲಿ ಈ ಕಾವ್ಯ ರಚನೆಯಾಗಿದೆ. ಒಟ್ಟು ೩೧೧ ಪದ್ಯಗಳು ಮಾತ್ರ ಇದರಲ್ಲಿ ಇವೆ. ಕಥೆ ನಾಲ್ಕು ಅವತಾರಗಳಲ್ಲಿ ವಿಭಾಗಗೊಂಡಿದೆ. ಹರಿಭದ್ರನ ಸಮರಾ ಇಚ್ಚಕಹಾ, ಗುಣಭದ್ರಾಚಾರ್ಯರ ಉತ್ತರ ಪುರಾಣ, ಸೋಮದೇವನ ಯಶಸ್ತಿಲತದಲ್ಲಿ ಈ ಕಥೆಯನ್ನು ಹೆಸರಿಸಿದೆ. ೧೧ನೇ ಶತಮಾನದ ವಾದಿರಾಜ ಸೂರಿಯೇ ಯಶೋದರ ಚರಿತ ಸಂಸ್ಕೃತ ಕಾವ್ಯ ಜನ್ನನ ಯಶೋಧರ ಚರಿತೆಗೆ ಆಕರವಾಗಿದೆ. ಜನ್ನನ ಕೃತಿಗೆ ವಾದಿರಾಜನ ಸಂಸ್ಕೃತ ಕಾವ್ಯದ ಪ್ರೇರಣೆಯಿಂದ ಅಂದರೂ ಜನ್ನ ಕವಿತಾ ಪ್ರಜ್ಞೆಯು ವಾದಿರಾಜನ ಕವಿತಾ ಪ್ರಜ್ಞೆಗಿಂತ ಎಷ್ಟೋ ಮೇಲಾದುದು ಎಂದು ಡಿ.ಎಲ್. ನರಸಿಂಹಾಚಾರ್ಯರು ಅಭಿಪ್ರಾಯ ಪಡುತ್ತಾರೆ.[2] ಜನ್ನನು ಅಲ್ಲಲ್ಲಿ ತನ್ನ ಸ್ವಂತಿಕೆಯನ್ನು ಮೆರೆದಿದ್ದಾನೆ. ಜೀವದಯಾಷ್ಟಮಿ ಎಂಬ ಅಹಿಂಸಾ ವ್ರತವನ್ನು ಆಚರಿಸಿದ ಜೈನರು ಪಾರಣೆಯ ದಿನದಂದು ಕೇಳುವುದಕ್ಕಾಗಿ ಈ ಕಾವ್ಯವವನ್ನು ಬರೆದಂತೆ ಕವಿ ಹೇಳಿಕೊಂಡಿದ್ದಾನೆ. ಆ ವ್ರತಕ್ಕನುಗುಣವಾಗಿ ಯಶೋಧರ ಚರಿತೆಯು ಅಹಿಂಸೆಯ ಶ್ರೇಷ್ಠತೆಯನ್ನು ಸಾರುವ ಉದ್ದೇಶವನ್ನು ಪಡೆದಿದೆ.

ಯಶೋಧರ ಚರಿತೆಯು ಕಥಾಸಾರ :

ಅಯೋಧ್ಯೆ ದೇಶಕ್ಕೆ ರಾಜಪುರ ಎಂಬುದು ರಾಜಧಾನಿ. ಅದನ್ನು ಮಾರಿದತ್ತನು ಆಳುತ್ತಿದ್ದನು. ಊರಿನ ದೇವತೆ ಚಂಡಮಾರಿಗೆ ವರ್ಷಾವಧಿ ಜಾತ್ರೆಯಲ್ಲಿ ಪಶುಬಲಿಯೊಂದಿಗೆ ನರಬಲಿಯೂ ನಡೆಯುತ್ತಿತ್ತು. ವರ್ಷಂಪ್ರತಿ ಪ್ರಾಣಿ, ನರಬಲಿ ಕೊಡದಿದ್ದರೆ ದೇವತೆಯು ಮುನಿಯುವಳೆಂದು ಜನ ನಂಬುತ್ತಿದ್ದರು. ಪದ್ಧತಿಯಂತೆ ಪ್ರತೀ ವಸಂತ ಮಾಸದಲ್ಲಿ ಈ ಜಾತ್ರೆ, ಬಲಿಗಳು ನಡೆಯುವಂತೆ ಆ ವರ್ಷವೂ ದೇವಿಯ ಉತ್ಸವವನ್ನು ಎದುರುಗೊಳ್ಳಲೆಂಬಂತೆ ವಸಂತ ಮಾಸವು ಸಂಭ್ರಮದಿಂದ ಬಂದಿತ್ತು. ಶಿಶಿರವನ್ನೇ ಹಿಡಿದ ವಸಂತನು ಸಣ್ಣ ಸಣ್ಣ ಚೂರುಗಳಾಗಿ ಕತ್ತರಿಸಿದಂತೆ ಮುತ್ತುಗದ ಹೂವುಗಳು ಉದುರಿದ್ದವಂತೆ. ತಂಗಾಳಿ ತಂಡ ನಮಸ್ಕಾರ ಮಾಡುತ್ತಾ ಕಮಲವನ ಎಂಬ ಕೆಂಡದ ಕೊಂಡದಲ್ಲಿ ಬರುತ್ತಿದೆ ಎಂಬುದನ್ನು ಸಾರಿ ಹೇಳುವಂತೆ ದುಂಬಿಯು ಝೇಂಕಾರ ಇತ್ತನು. ಸಂಪ್ರದಾಯದಂತೆ ನರಬಲಿ ಕೊಡಲು ಶುಭ ಲಕ್ಷಣಗಳುಳ್ಳ ಎಳೆಯ ವಯಸ್ಸಿನ ಸತ್ಕುಲದಲ್ಲಿ ಹುಟ್ಟಿದ ಇಬ್ಬರು ಮಕ್ಕಳನ್ನು ಕರೆತರಲು ಮಾರಿದತ್ತ ರಾಜನು ಚಂಡಕರ್ಮನೆಂಬ ತಳವಾರನನ್ನು ಕಳುಹಿಸುತ್ತಾನೆ. ಆಗ ಸುದತ್ತಾಚಾರ್ಯರೆಂಬ ಜೈನಮುನಿಗಳ ಮುನಿಸಮೂಹದೊಂದಿಗೆ ಚರಿಗೆಗೆಂದು ಹೊರಟ ಯತಿಯರಾದ ಅಭಯರುಚಿ, ಅಭಯಮತಿಯರೆಂಬ ಚಿಕ್ಕ ವಯಸ್ಸಿನ ಅಣ್ಣತಂಗಿಯರು ಎದುರಾಗುತ್ತಾರೆ. ಈ ಮಕ್ಕಳನ್ನು ಕಂಡು ತನಗೆ ಬಲಿಗೆ ತಕ್ಕುದಾದ ಮಕ್ಕಳೇ ಸಿಕ್ಕಿದರೆಂದು ಸಂತೋಷದಿಂದ ಹರಿಣಗಳನ್ನು ಹುಲಿಯು ಹಿಡಿಯುವಂತೆ ಚಂಡಕರ್ಮನು ಮಕ್ಕಳನ್ನು ಹಿಡಿಯುತ್ತಾನೆ. ತಮಗೆ ಬಂದೊದಗಲಿರುವ ದುಸ್ಥಿತಿಯನ್ನು ಅರಿತು ಭಯಗೊಂಡ ಅಮೃತಮತಿಯನ್ನು ಅಭಯರುಚಿಯು ತನ್ನ ವಯಸ್ಸಿಗೆ ಮೀರಿದ ಬುದ್ಧಿವಂತಿಕೆಯ ಮಾತುಗಳನ್ನು ಹೇಳಿ ತಂಗಿಗೆ ಹೀಗೆ ಸಮಾಧಾನ ಪಡಿಸುತ್ತಾನೆ.

"ವಿಧಿಯ ನಿಯಮಗಳನ್ನು ಮೀರಿದವರಾರು ? ಬಂದ ಕಷ್ಟಗಳನ್ನು ಎದುರಿಸುವುದೇ ನಿಜವಾದ

ತಪಸ್ಸು. ಅದಲ್ಲದೆ ತಪಸ್ಸಿಗೆ ಬೇರೆ ಕೋಡುಗಳಿವೆ ? ಆಗ ಅಭಯಮತಿಯು ಅಣ್ಣನನ್ನು ಸಮಾಧಾನ ಪಡಿಸುತ್ತಾ ತಾನೂ ವಯಸ್ಸಿಗೆ ಮೀರಿದ ಪ್ರಬುದ್ಧತೆಯಿಂದ ಹೀಗೆನ್ನುತ್ತಾಳೆ. "ಮಾಡಿದುದಂ ನಾವುಣ್ಣದೆ ಪೋಕುಮೆ" "ಭವಪ್ರಕೃತಿ ವಿಕೃತಿ ನಾವಱಿಯದುದೇ". ಸಂಸಾರದಲ್ಲಿ ಹುಟ್ಟಿ ಕೇವಲ ಸುಖವನ್ನು ಬಯಸುವುದು, ತಪ್ಪು ಎಂದು ಮುಂತಾಗಿ ಒಬ್ಬರನ್ನೊಬ್ಬರು ಸಂತೈಸುತ್ತಾ ಯಮನ ಅಡುಗೆ ಮನೆಯಂತಿದ್ದ ಮಾರಿಯ ಗುಡಿಯನ್ನು ಹೊಕ್ಕುತ್ತಾರೆ. ಅಲ್ಲಿ :

ತಳಮನುಡಿದಿಡುವ ಕಣ್ಣಂ
ಕಳೆದೇರಿಪ ಕರುಳ ತೋರಣಂಗಟ್ಟುವ ಕಾ
ಲ್ಗಳನುರಿಪಿ ನೆತ್ತರಿಂ ಕೂ
ಟ್ಗಳನಡುತಿಹ ಬೀರರೆತ್ತ ನೋಡ್ಪೊಡಮದಜೋಳ್ (ಅವತಾರ ೧ ೫೪)

ಮಾರಿದತ್ತ ನಿಂತದ್ದು ಮಕ್ಕಳಿಗೆ ಹೀಗೆ ಕಾಣಿಸಿತು.

ಭೈರವನ ಜವನ ಮಾರಿಯ
ಮೂರಿಯವೊಲ್ ನಿಂದ ಮಾರಿದತ್ತಂ ಲಲಿತಾ
ಕಾರರ ಧೀರರ ಬಂದ ಕು
ಮಾರರ ರೂಪಿಂಗೆ ಠಕ್ಕುಗೊಂಡಂತಿರ್ದಂ (ಅವತಾರ ೧ ೫೮)

ಅವರ ಗಾಂಭೀರ್ಯಕ್ಕೂ, ಸೌಂದರ್ಯಕ್ಕೂ ಬೆರಗಾಗಿ ಅವರನ್ನು ಬಲಿ ಕೊಡುವ ಮುನ್ನ ರಾಜನನ್ನು ಹರಸೆಂದು ಜನರು ಮಕ್ಕಳನ್ನು ಕೇಳಿದಾಗ, ಅವರು "ನೃಪವರ ನಿರ್ಮಲ ಧರ್ಮದಿಂದೆ ಪಾಲಿಸು ಧರೆಯಂ" ಎಂದು ಹರಸುತ್ತಾರೆ. ಇದನ್ನು ಕೇಳಿ ಎಲ್ಲರಿಗೂ ಆಶ್ಚರ್ಯವಾಗುತ್ತದೆ. ರಾಜನು ಮಕ್ಕಳ ಮಾತನ್ನು ಕೇಳಿ ಖಡ್ಗವನ್ನು ಕೆಳಗಿಳಿಸಿ, 'ಧೀರರಕಟ ಕುಮಾರರ್' ಎಂದು ಉದ್ಗರಿಸಿ ಅವರ ಕುಲಗೋತ್ರಗಳನ್ನು ವಿಚಾರಿಸುತ್ತಾನೆ.

ಈ ಮಕ್ಕಳ ವಯಸ್ಸು ಕಿರಿದು, ಆದರೆ ಅವರ ಧೈರ್ಯ ಹಿರಿದು. ರಾಜನಿಗೆ ಅವರಲ್ಲಿ ಒಂದು ಬಗೆಯ ಆತ್ಮೀಯತೆ ಮೂಡುತ್ತದೆ. ಜೊತೆಗೆ ಕುತೂಹಲ. "ನೀವಾರು? ಈ ಚಿಕ್ಕ ವಯಸ್ಸಿಗೆ ನೀವೇಕೆ ದೀಕ್ಷೆ ವಹಿಸಿದಿರಿ?" ಎಂದು ಪ್ರಶ್ನಿಸಿದರೆ ಅಭಯರುಚಿ ನಿರ್ಮಲ ಚಾರಿತ್ರ್ಯವುಳ್ಳ ಧರ್ಮಪರರ್ಗಲ್ಲದೆಮ್ಮಯ ನಿನ್ನಂತಹವರಿಗೆ ನಮ್ಮ ಚಾರಿತ್ರ್ಯವು ರುಚಿಸದು. "ತಪ್ಪೇರಿದ ದರ್ಪಣದೊಳ್ ಪಜ್ಜಲಿಸಲಾರ್ಪುದೇ ಪ್ರತಿಬಿಂಬಂ" ಜಿಡ್ಡು ಹತ್ತಿದ ಕನ್ನಡಿಗರಿಗೆ ಪ್ರತಿಬಿಂಬ ಪ್ರಜ್ವಲಿಸುವುದೇ ಎಂದು ತಮ್ಮ ಚಾರಿತ್ರ್ಯಕ್ಕೆ ತಾವೇ ಹೇಸಿ ವ್ಯಥೆಪಡುತ್ತಾರೆ. ಕೊನೆಗೂ ದಯೆಯಲ್ಲಿ ನೆಲೆಗೊಂಡ ರಾಜನಿಗೆ ತಮ್ಮ ಕಥೆಯನ್ನು ಹೇಳುವುದರಿಂದ ಎಲ್ಲರಿಗೂ ಪ್ರಯೋಜನವಾಗುವುದು, ಧರ್ಮ, ಅಹಿಂಸೆ ಇಲ್ಲಿ ನೆಲೆಗೊಳ್ಳುವುದೆಂದು ಅಭಯರುಚಿ ಕಥೆ ಹೇಳಲು ಪ್ರಾರಂಭಿಸುತ್ತಾನೆ.

ಉಜ್ಜಯಿನಿ ದೇಶದ ಅರಸು ಯಶೌಘ, ಅವನ ರಾಣಿ ಚಂದ್ರಮತಿ, ಯಶೋಧರ ಅವರ ಒಬ್ಬನೇ ಮಗ. ಅಮೃತಮತಿ ಅವನ ಮಡದಿ. ಅನ್ಯೋನ್ಯ ದಾಂಪತ್ಯ ಅವರದು. ಹೀಗಿರಲು ಯಶೌಘನು ಮಗನಿಗೆ ರಾಜ್ಯವನ್ನು ಒಪ್ಪಿಸಿ ಸನ್ಯಾಸ ದೀಕ್ಷೆಯನ್ನು ಪಡೆಯುತ್ತಾನೆ. ಯಶೋಧರ ಅಮೃತಮತಿಯೊಂದಿಗೆ ಸುಖವಾಗಿ ಇರುತ್ತಾನೆ. ಒಂದು ರಾತ್ರಿ ಈ ದಂಪತಿಗಳು ಅರಮನೆಯ ಮಹಡಿಯಲ್ಲಿ ಮಲಗಿರುವಾಗ ನಡುರಾತ್ರಿಯ

ಹೊತ್ತಿನಲ್ಲಿ ಪಟ್ಟದಾನೆಯ ಮಾವಟಿಗನು

ಬಿನದಕೆ ಪಾಡುತಿರೆ ನು

ಣ್ಣನಿ ನಿದ್ರೆಗೆ ಕತಕಬೀಜಮಾಯ್ತೆನೆ ಮೃಗಲೋ

ಚನೆ ತಿಳಿದಾಲಿಸಿ ಮುಟ್ಟಿದ

ಮನಮನೆ ತೊಟ್ಟನೆ ಪಸಾಯದಾನಂಗೊಟ್ಟಳ್ (ಅವತಾರ ೨ ೨೮)

ಎಂದು 'ಮಾಳವಶ್ರೀ' ಎಂಬ ದೇಶೀ ರಾಗವನ್ನು, ಅದರ ತಾಳ, ಲಯ, ಗುಣವಿಶೇಷತೆಯನ್ನು ಕುರಿತು ಅದಕ್ಕೆ ಸರಿಯಾದ ರೂಪವನ್ನು ಕೊಟ್ಟು ಹಾಡುತ್ತಿದ್ದನು. ಈ ಹಾಡನ್ನು ಕೇಳಿ ಆನಂದಿಸಿದ ಯಶೋಧರನಂತಹ ರೂಪು, ಯೌವನ ಬಲ, ಅಧಿಕಾರ, ಮೃದು ಹೃದಯಗಳಿಂದ ಕೂಡಿದ ವ್ಯಕ್ತಿಯ ಹೆಂಡತಿಯಾದ ಅಮೃತಮತಿಗೆ ಈ ಹಾಡುಗಾರನನ್ನು ನೋಡುವ ಕೂಡುವ ಬಯಕೆ ಉಂಟಾಯಿತು. ಅದನ್ನು ಈಡೇರಿಸಲು ಮಾರನೆಯ ದಿನ ತನ್ನ ದೂತಿಯೊಬ್ಬಳಿಗೆ ಲಂಚವಿತ್ತು ಹಿಂದಿನ ರಾತ್ರಿ ಹಾಡುತ್ತಿದ್ದವನಾರು ಎಂದು ತಿಳಿದು ಬರಲು ಕಳುಹಿಸಿದಳು. ರಾಣಿಯ ಕೆಲಸವನ್ನು ನಿರ್ವಹಿಸಲು ಹೋದ ದೂತಿಯು ಈ ಸುಕುಮಾರಿ ಸುಂದರಿಯಾದ ನಾರಿ ಬಯಸಿದ್ದಾಳೆ ಎಂದು ವ್ಯಥೆಪಟ್ಟಳು. ಅಂತೆಯೇ ಆ ವ್ಯಕ್ತಿಯ ರೂಪವನ್ನು ಕುರಿತು ರಾಣಿಗೆ ಹೀಗೆನ್ನುತ್ತಾಳೆ :

ಪಱಿದಲೆ ಕುಟಿನೊಸಲಟಿಗ

ಣ್ಣೊ ಱೆವಾಯ್ ಹಪ್ಪಳಿಕೆಮೂಗು ಮುರುಟಿದ ಕಿವಿ ಬಿ

ಬ್ಬಿಱುವಲ್ ಕುಸಿಗೊರಲಿಟಿದೆರ್ದೆ

ಪೊಱಂಟ ಬೆನ್ ಬಾತ ಬಸಿಱಡಂಗಿದ ಜಘನಂ (ಅವತಾರ ೨ ೨೮)

ಇಷ್ಟೇ ಅಲ್ಲದೆ ಕಪ್ಪು ಬಣ್ಣ, ಮೈಯಲ್ಲಿ ದುರ್ವಾಸನೆ, ಕಾಲೋ ಸೊಂಟ ಮುರಿದ ಕತ್ತೆಯ ಕಾಲು. ಒಟ್ಟಾರೆ ಆತ ಹೆಸರಿಗೆ ತಕ್ಕಂತೆ ಅಷ್ಟಾವಂಕ. ಆದರೆ ಅಮೃತಮತಿ ದಾಸಿ ಮಾತನ್ನು ಲೆಕ್ಕಿಸದೆ "ಪೊಲ್ಲಮೆಯೇ ಲೇಸು ನಲ್ಲರ ಮೈಯೊಳ್" ಎಂದು ಅವನ ಸ್ನೇಹ ಬೆಳೆಸಿದಳು. ಪ್ರತಿನಿತ್ಯ ರಾತ್ರಿ ಗಂಡನಿಗೆ ತಿಳಿಯದಂತೆ ಅವನೊಡನೆ ಸೇರುತ್ತಿದ್ದಳು. ಅಷ್ಟಾವಂಕನ ಸಹವಾಸ ಪ್ರಾರಂಭವಾದ ಮೇಲೆ ಅಮೃತಮತಿಯ ನಡವಳಿಕೆಯಲ್ಲಿ ವ್ಯತ್ಯಾಸವಾಯಿತು. ಹೊರಗೆ ಹಿಂದಿನಂತೆಯೇ ಅವಳು ನಡೆದುಕೊಳ್ಳುತ್ತಿದ್ದರೂ ಸೂಕ್ಷ್ಮ ಮನಸ್ಸಿನ ಯಶೋಧರನಿಗೆ ವ್ಯತ್ಯಾಸ ಗೊತ್ತಾಯಿತು. ಆಕೆಯನ್ನು ಪರೀಕ್ಷಿಸಬೇಕೆಂದು ಒಂದು ರಾತ್ರಿ ನಿದ್ದೆ ಬಂದಂತೆ ನಟಿಸಿದ. ಗಂಡನಿಗೆ ನಿದ್ದೆ ಬಂದಿದೆ ಎಂದು ತಿಳಿದು ಅಮೃತಮತಿ ಎದ್ದು ಬದಗನ ಬಳಿ ಹೊರಟಳು. ದೋಷದ ಹಿಂದೆಯೇ ಹೋಗುವ ಶಿಕ್ಷೆಯಂತೆ ರಾಜ ಅವಳನ್ನು ಹಿಂಬಾಲಿಸಿದ. ಅಲ್ಲಿ ಬದಗ ಅವಳು ತಡವಾಗಿ ಬಂದಳೆಂದು ಆಕೆ ತಂದಿದ್ದ ಹೂವು ಹಣ್ಣು ತಾಂಬೂಲಗಳನ್ನೆಲ್ಲ ತೆಗೆದು ಬಿಸಾಡಿದ.

ತೋರ ಮುಡಿವಿಡಿದು ಕುಡಿಯಂ

ನಾರಂ ತದೆವಂತೆ ತದೆದು ಬೀಟೆಯ ಕಾಲಿಂ

ಬಾರೇಟೆ ಬದಗನೊದೆದೊಡೆ

ಕೇರೆ ಪೊರಳ್ವಂತೆ ಕಾಲ ಮೇಲೆ ಪೊರಳ್ದಳ್ (ಅವತಾರ ೨ ೫೦)

ಹೀಗೆ ಬದಗ ಮನಬಂದಂತೆ ಅಮೃತಮತಿಯನ್ನು ಹೊಡೆದಾಗ ಅವಳು ಕೇರೆ ಹೊರಳಿದಂತೆ ಅವನ

ಕಾಲಮೇಲೆ ಹೊರಳಿದಳು. ಎಂತಹ ಹೀನ ಸ್ಥಿತಿಗಿಳಿದಿದ್ದಾಳೆ? ಮಹಾರಾಣಿ. ಅಷ್ಟಾವಂಕನು ಇಷ್ಟೆಲ್ಲಾ ದಂಡಿಸಿದರೂ ಸಹಿಸಿದ್ದಲ್ಲದೆ ತಾನು ತಡವಾಗಿ ಬಂದುದಕ್ಕೆ ಅವಳು ಕೊಡುವ ಕಾರಣ - "ಅರಸನೆಂಬ ಪಾಪಿಯು ಬೇಗ ನಿದ್ರಿಸದೇ ಹೋದದ್ದರಿಂದ ತಡವಾಯಿತು. ಆದರೆ ನನ್ನ ಪ್ರೀತಿಯಲ್ಲಿ ಕೊರತೆಯಿಲ್ಲ. ನಿನ್ನ ಹೊರತು ಮಿಕ್ಕ ಗಂಡಸರೆಲ್ಲ ಸೋದರ ಸಮಾನರು" ಇದನ್ನೆಲ್ಲಾ ನೋಡುತ್ತಾ, ಕೇಳುತ್ತಾ ಇದ್ದ ಯಶೋಧರನು ಕೋಪದಿಂದ ಅವರಿಬ್ಬರನ್ನು ಕೊಲ್ಲಬೇಕೆಂದು ಕತ್ತಿಯನ್ನು ಎತ್ತಿದ.

ಆಗಳ್ ಬಾಳ್ ನಿಮಿರ್ದುದು ತೋಳ್
ತೂಗಿದುದು ಮನಂ ಕನಲ್ದುದಿರ್ವರುಮನೆರ
ಲ್ದಾಗಂ ಮಾಡಲ್ ಧೃತಿ ಬಂ
ದಾಗಳ್ ಮಾಣೆಂಬ ತೆಱದೆ ಪೇಸಿದನರಸಂ (ಅವತಾರ ೨ ೫೩)

ಆದರೆ ತನ್ನ ಕತ್ತಿಯು ಛಲಗಾರರಾದ ಶತ್ರು ರಾಜರನ್ನು ಕೊಲ್ಲುತ್ತದೆಯೇ ವಿನಃ ಈ ವಂಚಕರು, ಅಲ್ಪರನ್ನು ಕೊಲ್ಲುವುದಿಲ್ಲ ಎಂದು ಇವರು ತನ್ನ ಕತ್ತಿಗಿಂತಲೂ ನೀಚರೆಂದು ಅವರಿಬ್ಬರನ್ನು ಕಡೆಗಣಿಸುತ್ತಾನೆ. ಇನ್ನು ಹೆಂಡತಿಯ ವಂಚನೆ, ಕೃತ್ಯವನ್ನು ಕಂಡು ತಾನು ಅವಳನ್ನು ಕೊಂದರೆ, ತನಗೂ ಮುಂದೆ ನರಕವೇ ಪ್ರಾಪ್ತಿ ಎಂದು ಅವಳನ್ನು ತೊರೆದುಬಿಡುವುದೇ ಸರಿ ಎಂದು ನಿರ್ಧರಿಸಿ ಹಾಗೆ ಹಿಂತಿರುಗಿ ಬಂದು ಮಲಗಿಕೊಂಡ. ಅಮೃತಮತಿಯೂ ಬಂದು ಏನೂ ಆಗದವಳಂತೆ ಮಲಗಿದಳು. ಯಶೋಧರನಿಗೆ ಕೋಪಕ್ಕಿಂತ ಜುಗುಪ್ಸೆ ಹೆಚ್ಚಾಯಿತು. ಮರುದಿನ ಯಶೋಧರ ಅಮೃತಮತಿಗೆ ಅಣಕಿಸುತ್ತಾ ನೈದಿಲೆ ಹೂವಿನಿಂದ ಹೊಡೆದಾಗ ಅವಳು ಮೂರ್ಛೆ ಹೋಗುತ್ತಾಳೆ. ರಾಜನು ವ್ಯಂಗ್ಯದಿಂದ "ಅಂದಿನ ಸಾವು ಅದೃಷ್ಟವಶಾತ್ ತಪ್ಪಿತು, ಇಂದು ನೈದಿಲೆ ಸಾವನ್ನು ತರುವಂತಾಯಿತು" ಎಂದು ಚುಚ್ಚಿ ನುಡಿಯುತ್ತಾನೆ. ಇದರಿಂದ ತನ್ನ ಗುಟ್ಟು ರಾಜನಿಗೆ ತಿಳಿದಿದೆ ಎಂದು ಅಮೃತಮತಿಗೆ ಗೊತ್ತಾದರೂ ಉತ್ತರವನ್ನು ನೀಡದೆ ಸುಮ್ಮನಿರುತ್ತಾಳೆ.

ಇತ್ತ ಮನಸ್ಸು ಕದಡಿ ಯಶೋಧರನು ತಾಯಿಯಲ್ಲಿಗೆ ಹೋಗುತ್ತಾನೆ. ಕಾಂತಿಹೀನವಾದ ಮಗನ ಮುಖವನ್ನು ಕಂಡ ಚಂದ್ರಮತಿಯು ಅವನ ದುಃಖಕ್ಕೆ ಕಾರಣವೇನೆಂದು ಕೇಳುತ್ತಾಳೆ. ಹೆಂಡತಿಯ ವರ್ತನೆಯನ್ನು ನೇರವಾಗಿ ಹೇಳಲಾರದೆ ಮರೆಮಾಚಲು ಹೀಗೆ ನುಡಿಯುತ್ತಾನೆ :

ದೇವಿಯರ ಪರಕೆಯಿಂದೆನ
ಗಾವುದಜೊಳ್ ಕೊರತೆಯಿಲ್ಲ ಪೋದಿರುಳೊಳ್ ಪೊಂ
ದಾವರೆಗೊಳದಂಚೆ ಕಟ
ಲ್ದಾವಲ್ಗೊಳದೊಳಗೆ ನಲಿವ ಕನಸಂ ಕಂಡೆಂ (ಅವತಾರ ೩ ೯)

ತಾಯಿ ಚಂದ್ರಮತಿ ಮಗನಿಗೆ ಏನೋ ತೊಂದರೆ ಬರಲಿದೆ ಎಂದು ಭಾವಿಸಿ ಈ ಕೆಟ್ಟ ಕನಸಿನ ದೋಷ ನಿವಾರಣೆಗೆ ದೇವತೆಗೆ ಬಲಿ ಕೊಡಬೇಕೆಂದು ಸೂಚಿಸಿದಳು. ಅಹಿಂಸಾ ಧರ್ಮವನ್ನು ಪಾಲಿಸುತ್ತಿದ್ದ ಯಶೋಧರ ತಾಯಿಯ ಮಾತನ್ನು ಕೇಳಿ ಕಿವಿ ಮುಚ್ಚಿಕೊಂಡ.

ಜೀವದಯೆ ಜೈನಧರ್ಮಂ
ಜೀವಹಿತಂ ನಂಬುವವರ್ಗೆ ಹಿಂಸೆಯಮೋಘಂ

ಭಾವಿತಮೆ ತಪ್ಪಿ ನುಡಿದಿರ್

ಕಾವರೆ ಕಣ್‌ಗೊಳ್ಳೊಡಚ್ಚೆ ಬಾರಿಪರೊಳರೇ (ಅವತಾರ ೩. ೧೯)

ಎಂದು ನುಡಿದ. ಆದರೆ ತಾಯಿಯದು ಒಂದೇ ಹಠ. ಕೊನೆಯ ಪಕ್ಷ ಹಿಟ್ಟಿನ ಕೋಳಿಯನ್ನಾದರೂ ಬಲಿಕೊಡದಿದ್ದರೆ ತಾನೇ ದೇವಿಗೆ ಬಲಿಯಾಗುವುದಾಗಿ ತಾಯಿ ಹೇಳಿದಾಗ ಯಶೋಧರ ವಿಧಿ ಇಲ್ಲದೆ ಅದಕ್ಕೆ ಒಪ್ಪುತ್ತಾನೆ.

ಮಹಾನವಮಿಯ ಹಿಂದಿನ ದಿನ ಭೀಮಾಷ್ಟಮಿಯಲ್ಲಿ ಬಲಿಕೊಡಲು ಒಂದು ಹಿಟ್ಟಿನ ಕೋಳಿ ಸಿದ್ಧವಾಯಿತು. ಅದರ ಚೆಲುವನ್ನು ಕಂಡು ಬೆಂತರವೊಂದು ಅದರೊಳಗೆ ಸೇರಿಕೊಂಡಿತು. ಯಶೋಧರ ಕೋಳಿಯನ್ನು ಬಲಿಕೊಡುವುದಕ್ಕಾಗಿ ಕುತ್ತಿಗೆಯನ್ನು ಕತ್ತರಿಸಿದಾಗ ಕೂಗಿ ಕರೆಯುವ ಪಾಪದ ಕೂಗಿನ ಹಾಗೆ ಕು... ಕ್ಕು... ಕ್ಕೂ... ಎಂದು ಕೋಳಿಯಿಂದ ಸದ್ದು ಮೂಡಿತು. ಅದರ ತಲೆ ಕೆಳಗುರುಳಿತು. ಇದರಿಂದ ತನ್ನಿಂದ ಹಿಂಸೆಯಾಯಿತೆಂದು ನೊಂದ ಯಶೋಧರ ಹೀಗೆ ಪರಿತಪಿಸುತ್ತಾನೆ.

ಅಮೃತಮತಿಯೆಂಬ ಪಾತಕಿ

ಯ ಮಾಯೆ ಬನಮಾಯ್ತು ಚಂದ್ರಮತಿ ಮಾತೆಯ ಮಾ

ತೆಮಗೆ ಬಲೆಯಾಯ್ತು ಹಿಂಸನ

ಮಮೋಘಶರಮಾಯ್ತು ಕಡೆದುದಾತ್ಮಕುರಂಗಂ

ಇದೆಲ್ಲದುದರಿಂದ ಯಶೋಧರನಿಗೆ ಜೀವನದಲ್ಲಿ ಜಿಗುಪ್ಸೆ ಉಂಟಾಯಿತು. ಮಗನಾದ ಯಶೋಮತಿಗೆ ರಾಜ್ಯವನ್ನು ಕೊಟ್ಟು ತಪಸ್ಸಿಗೆ ಹೊರಡಲು ನಿರ್ಧರಿಸುತ್ತಾನೆ. ತಾಯಿಯಾದ ಚಂದ್ರಮತಿಯು ಮಗನೊಂದಿಗೆ ಹೊರಡುತ್ತಾಳೆ. ಆಗ ಅಮೃತಮತಿ ಹೂವಿನ ಜೊತೆ ಪರಿಮಳವೂ ಹೋಗುವ ಹಾಗೆ ನಿಮ್ಮೊಡನೆ ನಾನು ಬರುತ್ತೇನೆ. ಹೋಗುವ ಮೊದಲು ನೀವು, ನಿಮ್ಮ ತಾಯಿಯು ನಮ್ಮ ಮನೆಯಲ್ಲಿ ಊಟಮಾಡಬೇಕು ಎಂದು ಒತ್ತಾಯಿಸುತ್ತಾಳೆ. ಮನಸ್ಸಿಲ್ಲದ ಮನಸ್ಸಿನಿಂದ ರಾಜ ಒಪ್ಪುತ್ತಾನೆ. ಯಶೋಧರ ಚಂದ್ರಮತಿಯರು ಊಟಕ್ಕೆ ಹೋದಾಗ ವಿಷದ ಲಡ್ಡುಗಳನ್ನು ಹಾಕಿ ಕೊಲ್ಲುತ್ತಾಳೆ. ಅರಸ ಮಾಡಿದ ಮೂದಲಿಕೆಗೆ ಹೀಗೆ ಸೇಡು ತೀರಿಸಿಕೊಳ್ಳುತ್ತಾಳೆ.

ಹೀಗೆ ದುರ್ಮರಣದಿಂದ ಸತ್ತ ತಾಯಿ ಮತ್ತು ಮಗ ತಮ್ಮ ಮಾನಸಿಕ ಹಿಂಸೆಯ ಕಾರಣಕ್ಕಾಗಿ ಏಳು ಜನ್ಮಗಳನ್ನು ಪಡೆಯುತ್ತಾರೆ.

1. ಮಗ ವಿಂಧ್ಯೆಯಲ್ಲಿ ನವಿಲಾಗುತ್ತಾನೆ. ತಾಯಿ ಕರಹಟದಲ್ಲಿ ನಾಯಿಯಾಗುತ್ತಾಳೆ.
2. ಮಗ ವಿಂಧ್ಯೆಯಲ್ಲಿ ಮುಳ್ಳುಹಂದಿಯಾಗಿಯೂ, ತಾಯಿಯು ಹಾವಾಗಿಯೂ ಹುಟ್ಟುತ್ತಾರೆ.
3. ಮಗ ಉಜ್ಜಯಿನಿಯ ಸಿಪ್ರಾ ನದಿಯಲ್ಲಿ ಮೀನಾದರೆ, ತಾಯಿ ಅಲ್ಲಿಯೇ ಮೊಸಳೆಯಾಗುತ್ತಾಳೆ.
4. ಉಜ್ಜಯಿನಿಯ ಹೊಲೆಗೇರಿಯಲ್ಲಿ ತಾಯಿ ಆಡಾಗಿ ಹುಟ್ಟಿದರೆ, ಮಗ ಆಡಿನಲ್ಲಿ ಹೋತವಾಗಿ ಹುಟ್ಟುತ್ತಾನೆ.
5. ತಾಯಿ ಕಳಿಂಗದಲ್ಲಿ ಕೋಣನಾಗಿ ಹುಟ್ಟುತ್ತಾಳೆ, ಮಗ ಆ ಜನ್ಮದಲ್ಲಿಯೂ ಹೋತವಾಗಿ ಹುಟ್ಟುತ್ತಾನೆ.
6. ಹೀಗೆ ತಾಯಿ ಮಗ ಇಬ್ಬರೂ ಉಜ್ಜಯಿನಿಯ ಹೊಲಗೇರಿಯಲ್ಲಿ ಕೋಳಿಗಳಾಗಿ ಹುಟ್ಟುತ್ತಾರೆ.

ಆ ಕೋಳಿಗಳನ್ನು ಮಾದರನು ಯಶೋಮತಿಗೆ ಕಾಣಿಕೆಯಾಗಿ ಕೊಟ್ಟು ಗೌರವಿಸುತ್ತಾನೆ.

ದಷ್ಟಪುಷ್ಟವಾದ ಕೋಳಿಗಳನ್ನು ಯಶೋಮತಿ ಚಂಡಕರ್ಮನಿಗೆ ಸಾಕಲು ಕೊಡುತ್ತಾನೆ. ಹೀಗೆ ಒಮ್ಮೆ ಚಂಡಕರ್ಮನು ಗಸ್ತಿಗಾಗಿ ವನದ ಪರಿಸರದಲ್ಲಿ ಬರುತ್ತಿರಲು ಅಕಂಪನರೆಂಬ ಮುನಿಯನ್ನು ಕಂಡು ನಿಧಿಯನ್ನು ಕಂಡ ಕುರುಡನಂತೆ ಸಂತೋಷಪಡುತ್ತಾನೆ. ಆ ಚಂಡಕರ್ಮನಿಗೆ ಗೌರವವೆಂದರೇನೆಂಬುದು ತಿಳಿಯದಿದ್ದರೂ ತಾನಾಗಿಯೇ ಮುನಿಗೆ ಎರಗುತ್ತಾನೆ. ಮುಂದೆ ಇವರ ನಡುವೆ ಆತ್ಮದ ಕುರಿತು ಚರ್ಚೆ ಉಂಟಾದಾಗ ಅಕಂಪನರು ಆತ್ಮ ಎನ್ನುವುದು ಅಂಗಿ, ಅವನು ಎಲ್ಲಾ ಅಂಗಗಳಲ್ಲೂ ತುಂಬಿದ್ದಾನೆ, ಅವನೊಬ್ಬ ಅಪರಿಮಿತ ಚೈತನ್ಯ ಸ್ವರೂಪಿ ಎಂದು ಅಕಂಪನ ಮುನಿಗಳು ಹೇಳುತ್ತಾರೆ. ಆಗ ಚಂಡಕರ್ಮನು ಆತ್ಮನು ಎಲ್ಲಾ ಅಂಗಗಳಲ್ಲೂ ತುಂಬಿಕೊಂಡಿದ್ದಾನೆ ಎಂದು ನೀವಾಡಿದ ಮಾತು ಸರಿಯಲ್ಲ. ಏಕೆಂದರೆ ನಾನು ಆತ್ಮವನ್ನು ಕಾಣುವ ಸಲುವಾಗಿ ಅನೇಕರನ್ನು ಕೊಂದೆ. ಆದರೆ ನಾನು ಅಲ್ಲಿ ದೇಹವನ್ನು ಮಾತ್ರ ಕಂಡೆನೇ ಹೊರತು ಆತ್ಮವನ್ನು ಕಾಣಲಿಲ್ಲ. ಒಮ್ಮೆ ಕಳ್ಳನನ್ನು ತಕ್ಕಡಿಯಲ್ಲಿ ತೂಕ ಮಾಡಿ ಅವನನ್ನು ಕೊಂದು ಪುನಃ ಅವನ ದೇಹವನ್ನು ತೂಕ ಮಾಡಿದೆ. ಆದರೆ ಅವನ ದೇಹದ ತೂಕ ಕಡಿಮೆಯಾಗಿರಲಿಲ್ಲ. ಆದುದರಿಂದ ದೇಹದಲ್ಲಿ ಆತ್ಮವೆಂಬ ಪ್ರತ್ಯೇಕ ವಿಭಾಗವಿಲ್ಲ. ಮತ್ತೊಮ್ಮೆ ಒಬ್ಬನನ್ನು ತುಂಡುತುಂಡಾಗಿ ಕತ್ತರಿಸಿ ಮೂಳೆಯನ್ನು ಪುಡಿ ಮಾಡಿ ಚರ್ಮ ಸುಲಿದು ಕರುಳಿನ ಸಿಕ್ಕನ್ನು ಬಿಡಿಸಿ ಚೆನ್ನಾಗಿ ನೋಡಿದೆ. ಆದರೆ ಆತ್ಮ ಒಳಗೆಲ್ಲಿ ಹುದುಗಿದ್ದಾನೆ! ದೇಹದಲ್ಲಿ ಆತ್ಮ ಇರುವುದಾದರೆ ಅವನೆಲ್ಲಿಗೆ ಹೋದ ? ದೇಹವೇ ಆತ್ಮ ಎಂದ.

ಚಂಡಕರ್ಮನ ಈ ಮಾತಿಗೆ ಅಕಂಪನ ಮುನಿಗಳು 'ಆತ್ಮನು ದೇಹದಿಂದ ಬೇರೆಯಾದವನು, ಆದಿ ಇಲ್ಲದವನು, ಅಂತ್ಯವಿಲ್ಲದವನು, ಮೀರಲಾಗದವನು, ಚಿನ್ಮಯ, ದೇಶಾತೀತ, ಸ್ವೀಕಾರ ಯೋಗ್ಯನಾದವನು. ಆತ್ಮ ದೇಹದಿಂದ ಮುಕ್ತನಾದಾಗ ಪರಮಾತ್ಮನಾಗುತ್ತಾನೆ. ಹೀಗೆ ಅವರಿಬ್ಬರಲ್ಲೂ ದೇಹ, ಆತ್ಮಗಳ ಚರ್ಚೆ ಉಂಟಾಗಿ ಅಕಂಪನ ಮುನಿಗಳು ಚಂಡಕರ್ಮನಿಗೆ ಪಂಚಾಣುವ್ರತಗಳನ್ನು ಕುರಿತು ಹೇಳುತ್ತಾ, ಇವು ಕಳೆಗುಂದದಂತೆ ಯಾರು ನಡೆದುಕೊಳ್ಳುತ್ತಾರೋ ಅಂತಹವರು ಇಹಪರ ಲೋಕಗಳಲ್ಲೂ ಸುಖಿಯಾಗಿರುತ್ತಾರೆ. ಇವು ಯಾರಲ್ಲಿ ಮಂಕಾಗಿರುತ್ತದೋ ಅವರು ಜನ್ಮ ಜನ್ಮಗಳಲ್ಲಿ ದುಃಖಿಯಾಗಿರುತ್ತಾರೆ ಎಂದು ಯಶೋಧರ, ಚಂದ್ರಮತಿಯರ ಕತೆಯನ್ನು ಕುರಿತು ಚಂಡಕರ್ಮನಿಗೆ ಹೀಗನ್ನುತ್ತಾರೆ.

ಯಶೋಧರ, ಚಂದ್ರಮತಿಯರಿಬ್ಬರು ಕೃತಕವಾದ ಕೋಳಿಯನ್ನು ಕೊಂದು ತಾವು ಹಾಳಾಗಿ ಮತ್ತೊಮ್ಮೆ ಭವಾವಳಿಗಳಲ್ಲಿ ಬಳಲಿ ಈಗ ಕೋಳಿಗಳಾಗಿದ್ದಾರೆ ಎಂದು ಕೇವಲ ಸಂಕಲ್ಪ ಮಾತ್ರದ ಹಿಂಸೆಯಿಂದ ಇವರಿಬ್ಬರಿಗಾದ ಕೆಡುಕನ್ನು ಹೇಳುತ್ತಾರೆ. ಮತ್ತು ಬೇರೆಯವರನ್ನು ತನ್ನಂತೆಯೇ ಬಗೆಯತಕ್ಕದ್ದು. ಪ್ರಾಣಿಹಿಂಸೆಯನ್ನು ಮಾಡಬೇಡ, ಧರ್ಮಕ್ಕೆ ದಯೆಯೇ ಬೇರು. ಇದು ಇಹಪರಗಳಿಗೂ ಹಿತಕರವೆಂದು ಚಂಡಕರ್ಮನಿಗೆ ಅಕಂಪನಮುನಿಯು ಅಹಿಂಸಾ ತತ್ವವನ್ನು ಕುರಿತು ಹೇಳುತ್ತಾರೆ. ಹೀಗೆ ಚಂಡಕರ್ಮನಿಗೆ ಅಕಂಪನ ಮುನಿಗಳು ಹೇಳುತ್ತಿದ್ದ ಮಾತನ್ನು ಕೇಳಿ ಅಲ್ಲೇ ಇದ್ದ ಕೋಳಿಗಳು ತಮ್ಮ ಹಿಂದಿನ ಜನ್ಮಗಳನ್ನು ನೆನೆದು, ಇನ್ನು ಮುಂದೆ ಅಹಿಂಸಾ ವ್ರತವನ್ನು ತಾಳಬೇಕೆಂದು ಹೃದಯದಲ್ಲಿ ಸಂಕಲ್ಪಿಸಿದವು. ಹೀಗೆ ತಮ್ಮ ಮನಸ್ಸಿನ ಸಂಕಲ್ಪಕ್ಕೆ ಮೆಚ್ಚಿ, ರೆಕ್ಕೆಬಡಿದು ಕೆಲೆದವು. ಚಂಡಕರ್ಮನು ಮುನಿಗಳ ಮಾತಿಗೆ ಒಪ್ಪಿ ತನ್ನಲ್ಲಿ ಅಹಿಂಸಾವ್ರತವನ್ನು ಕೈಗೊಂಡನು.

ಇದೇ ಸಂದರ್ಭದಲ್ಲಿ ಯಶೋಮತಿ ತನ್ನ ಮಡದಿ ಕುಸುಮಾವಳಿಯೊಂದಿಗೆ ವಿಹಾರಕ್ಕೆಂದು

ಬಂದಾಗ ಕೋಳಿಗಳು ಕೆಲೆದ ಸದ್ದು ಇವನ ಕಿವಿಗೆ ಬೀಳುತ್ತದೆ. ಆಗ ಯಶೋಮತಿ ರಾಣಿಗೆ ತನ್ನಲ್ಲಿನ ಸ್ವರವೇಧಿ ವಿದ್ಯೆಯನ್ನು ತೋರಿಸಬೇಕೆಂಬ ಹಂಬಲದಿಂದ ಶಬ್ದ ಬಂದ ದಿಕ್ಕಿಗೆ ಬಾಣವನ್ನು ಬಿಟ್ಟನು. ಹೀಗೆ ಕೋಳಿಗಳು ಅಹಿಂಸಾವ್ರತವನ್ನು ಕೈಗೊಂಡ ಸಂದರ್ಭದಲ್ಲಿಯೇ ಯಶೋಮತಿಯ ಬಾಣಕ್ಕೆ ತುತ್ತಾಗಿ ಅವುಗಳು ಸಮಾಧಿ ಮರಣವನ್ನು ಹೊಂದಿದವು. ಹೀಗೆ ಕೋಳಿಗಳಾಗಿ ಸತ್ತು ಯಶೋಧರ, ಅಮೃತಮತಿಯರು ಯಶೋಮತಿಯ ರಾಣಿ ಕುಸುಮಾವಳಿಯ ಹೊಟ್ಟೆಯಲ್ಲಿ ಅವಳಿ ಮಕ್ಕಳಾಗಿ ಹುಟ್ಟಿ ಮಾನವ ಜನ್ಮವನ್ನು ಪಡೆಯುತ್ತಾರೆ. ಈ ಅವಳಿ ಮಕ್ಕಳೇ ಶುಭ ಲಕ್ಷಣಗಳುಳ್ಳ, ಬಲಿಗೆ ಯೋಗ್ಯವಾಗಿ, ತಳಾರನಿಗೆ ಸೆರೆಸಿಕ್ಕಂತಹ ಅಭಯರುಚಿ ಹಾಗೂ ಅಭಯಮತಿಯರು.

ಅನಂತರದಲ್ಲಿ ಒಮ್ಮೆ ಯಶೋಮತಿ ಬೇಟೆಗೆಂದು ಕಾಡಿಗೆ ಹೋದ ಸಂದರ್ಭದಲ್ಲಿ ತನ್ನ ಬೇಟೆಗೆ ತಡೆಯಾಗಿದ್ದ ಮುನಿಯೋರ್ವನನ್ನು ಕಂಡು ಸಿಟ್ಟಿನಿಂದ ಅವನನ್ನು ಕೊಲ್ಲಲು ತನ್ನ ಐನೂರು ನಾಯಿಗಳನ್ನು ಛೂ ಬಿಟ್ಟನು. ಆದರೆ ನಾಯಿಗಳ ಅಬ್ಬರ, ಅಟ್ಟಹಾಸಕ್ಕೆ ಕದಲದ ಮುನಿ ಮೇರುಪರ್ವತದಂತೆ ತಟಸ್ಥನಾಗಿದ್ದನು. ಕೊನೆಗೆ ನಾಯಿಗಳೇ ಸೋಲಲು ಅದನ್ನು ಕಂಡ ರಾಜ ಘರ್ಜಿಸಿ, ಮುನಿಯನ್ನು ಕೊಲ್ಲಲು ತಾನೇ ಮುಂದಾದನು. ರಾಜನ ವರ್ತನೆಯನ್ನು ಕಂಡು ಕಲ್ಯಾಣಮಿತ್ರನೆಂಬ ವರ್ತಕನು "ದೇವಾ ಇವರನ್ನು ಯಾರೆಂದು ತಿಳಿದೆ. ಇವರು ಗಂಗಕುಲ ಚಕ್ರವರ್ತಿಯೂ, ಕಳಿಂಗದೊರೆಯೂ ಆಗಿದ್ದವರು. ಸಂಸಾರ ನಿಶ್ಚಯವಾಗಿ, ನಿಸ್ಸಾರವಾದುದೆಂದು ಚೆನ್ನಾಗಿ ಅರಿತು ತಪಸ್ಸು ಮಾಡಿ, ಸುದತ್ತಾಚಾರ್ಯರೆಂಬ ಹೆಸರನ್ನು ಪಡೆದು ಜೈನಮುನಿಗಳಾದವರು" ಎಂದು ಹೇಳಿದನು.

ಇದನ್ನು ಕೇಳಿ ಯಶೋಮತಿ ಆ ಮುನಿಶ್ರೇಷ್ಠರಿಗೆ ಪ್ರದಕ್ಷಿಣೆ ಹಾಕಿ, ವಂದಿಸಿ ತಾನು ಮಾಡಿದ ಕೆಟ್ಟ ಕೆಲಸಕ್ಕಾಗಿ ಕ್ಷಮೆ ಯಾಚಿಸಿದನು. ಹೀಗೆ ಕ್ಷಮೆಯಾಚಿಸಿ ತನ್ನ ಶಿರದಿಂದ ಅವರನ್ನು ಪೂಜಿಸಬೇಕೆಂದು ಮನಸ್ಸಿನಲ್ಲಿ ನಿರ್ಧರಿಸಿದ. ಆದರೆ ಆ ನಿರ್ಧಾರವನ್ನು ತಮ್ಮ ಅವಧಿ ಜ್ಞಾನದಿಂದ ತಿಳಿದ ಮುನಿ ಹಾಗೆ ಮಾಡಕೂಡದೆಂದು ತಡೆದರು. ತನ್ನ ಮನಸ್ಸಿನ ಯೋಚನೆಯನ್ನು ಅರಿತ ಮುನಿಯನ್ನು ಪ್ರಶ್ನಿಸಲು, ಮುನಿ ಹಿಂದಿನ ಜನ್ಮಗಳಲ್ಲಿ ಸತ್ತ ಅವನ ತಂದೆ - ತಾಯಿ, ಅಜ್ಜ - ಅಜ್ಜಿಯರ ಸ್ಥಿತಿಯನ್ನು ಹೇಳತೊಡಗಿದರು.

"ನಿನ್ನ ಅಜ್ಜ ಉಜ್ಜಯಿನಿಯ ರಾಜನಾಗಿ ಮೆರೆದ ಯಶೌಘ ತನ್ನ ರಾಜ್ಯಭಾರವನ್ನು ಮಗನಾದ ಯಶೋಧರನಿಗೆ ಒಪ್ಪಿಸಿ ವ್ರತಗಳನ್ನು ಆಚರಿಸಿ ತಪಸ್ವಿಯಾಗಿ ತೀರಿಕೊಂಡು ಸ್ವರ್ಗ ಸೇರಿದನು. ನಿನ್ನ ತಾಯಿ ಅಮೃತಮತಿ ಎಂಬ ರಾಣಿ ಬದಗನೆಂಬ ಅಷ್ಟಾವಂಕನಿಗೆ ಮರುಳಾಗಿ ಅವನನ್ನು ಪಡೆಯಲು ಅತ್ತೆ, ಗಂಡನನ್ನು ವಿಷವಿಕ್ಕಿ ಕೊಂದು, ಮುಂದೆ ಕುಷ್ಠ ರೋಗದಿಂದ ಬಳಲಿ ಧೂಮಪ್ರಭೆ ಎಂಬ ಐದನೆಯ ನರಕದಲ್ಲಿ ಮುಳುಗಿ ಹೋಗಿದ್ದಾಳೆ. ಇನ್ನು ನಿನ್ನ ತಂಡೆ ಮತ್ತು ಅಜ್ಜಿ ಸಂಕಲ್ಪ ಹಿಂಸೆಯ ಮಾತ್ರದಿಂದ ಹಲವಾರು ಭವಾವಳಿಗಳಲ್ಲಿ ಪ್ರಾಣಿಗಳಾಗಿ ಹುಟ್ಟಿ, ಈಗ ಮಾನವ ಜನ್ಮವನ್ನು ಪಡೆದು ನಿನ್ನ ಮಕ್ಕಳಾದ ಅಭಯರುಚಿ, ಅಭಯಮತಿಯರಾಗಿ ನಿನ್ನೊಂದಿಗಿದ್ದಾರೆ. ಆ ಮಕ್ಕಳು ತಮ್ಮ ಹಿಂದಿನ ಜನ್ಮಗಳನ್ನೆಲ್ಲ ಸ್ವತಃ ಬಲ್ಲವರು."

ಈಗ ದೊರೆಯೇ, ನೀನೂ ಹಲವಾರು ಹಿಂಸೆಗಳನ್ನು ಮಾಡಿರುವಿ. ಆ ಘೋರ ನಿನಗೂ ಗೊತ್ತಿದೆ ಎಂದನು. ಮುನಿಯ ಮಾತುಗಳನ್ನು ಕೇಳಿ ಸಂಕಲ್ಪ ಮಾತ್ರದ ಹಿಂಸೆಯಿಂದ ತನ್ನ ತಂದೆ ಮತ್ತು ಅಜ್ಜಿ ಅನುಭವಿಸಿದ ಕಷ್ಟಗಳನ್ನು ನೆನೆದು, ತನ್ನ ತಪ್ಪಿನ ಪ್ರಾಯಶ್ಚಿತ್ತಕ್ಕಾಗಿ ಮಗನಾದ ಅಭಯರುಚಿಗೆ

ರಾಜ್ಯಭಾರವನ್ನು ಒಪ್ಪಿಸಿ ತಾನು ಜೈನದೀಕ್ಷೆಯನ್ನು ಕೈಗೊಂಡನು. ಆದರೆ ಅಭಯರುಚಿ ತಂದೆ ತನಗೆ ಒಪ್ಪಿಸಿದ ರಾಜ್ಯಭಾರವನ್ನು ತಮ್ಮನಾದ ಎರಡನೆಯ ಯಶೋಧರನಿಗೆ ಒಪ್ಪಿಸಿ, ತಂಗಿ ಅಭಯಮತಿಯೊಂದಿಗೆ ಸುದತ್ತಾಚಾರ್ಯರ ಜೊತೆಗೂಡಿ ಜೈನತತ್ತ್ವ ಪರಿಣಿತನಾಗಲು ನಿರ್ಧರಿಸುತ್ತಾನೆ.

ಹೀಗೆ ತಮ್ಮ ಪೂರ್ವಜರ ಕಥೆಯನ್ನೆಲ್ಲಾ ಹೇಳಿ, ಮಾನಸಿಕ ಪಾಪಗಳಿಂದ ಹಲವು ಜನ್ಮಗಳನ್ನೆತ್ತಿದವರು ನಾವೇ ಎಂದು ಅಭಯರುಚಿಯು ಕಥೆಯನ್ನು ಮುಗಿಸಿದನು. ಮತ್ತು ರಾಜನಲ್ಲಿ ಸಂಕಲ್ಪ ಹಿಂಸೆಯೊಂದರಿಂದಲೇ ನಾನು ಜನ್ಮಜನ್ಮಾಂತರಗಳಲ್ಲಿ ನಾನು ದುಃಖವನ್ನು ಅನುಭವಿಸಿದ್ದೇನೆ. ಹೀಗಿರುವಾಗ ನೀನು ಇಷ್ಟೊಂದು ಜೀವಿಗಳನ್ನು ಕೊಲ್ಲುತ್ತಿರುವೆಯಲ್ಲಾ, ನಿನಗೆ ಪರಿಹಾರ ಸಿಗುವುದು ನರಕದಲ್ಲೇ ಎನ್ನುತ್ತಾನೆ. ಈ ಮಾತುಗಳನ್ನು ಕೇಳಿ ಮಾರಿದತ್ತನು ಭಯಗೊಂಡು ಮೂಕನಾಗುತ್ತಾನೆ. ಈ ಕಥೆ ಕೇಳಿದ ಚಂಡಮಾರಿ ದೇವತೆಯೂ ಕೂಡಾ ಪ್ರತ್ಯಕ್ಷಳಾಗಿ ಭಕ್ತ ಸಮೂಹಕ್ಕೆ ಈ ರೀತಿ ಸಂದೇಶವನ್ನು ನೀಡುತ್ತಾಳೆ.

ಪ್ರಜೆಯೆಲ್ಲಂ ಜಲಗಂಧ
ಸ್ರಜ ತಂಡಲ ಧೂಪದೀಪ ಚರು ತಾಂಬೂಲ
ವ್ರಜದಿಂ ಪೂಜಿಸುವುದು ಜೀ
ವಜಾತದಿಂದೆನಗೆ ಬಲಿಯನಿತ್ತೊಡೆ ಮುನಿವೆಂ (ಅವತಾರ ೪ ೭೩)

ಈ ರೀತಿ ಉಗ್ರದೇವತೆಯೇ ಸೌಮ್ಯಳಾದದ್ದನ್ನು ಕಂಡು, ತಾನು ಮಾಡಿದ ಹಿಂಸೆಯನ್ನು ನೆನೆದ ಮಾರಿದತ್ತನು ಪಶ್ಚಾತ್ತಾಪದಿಂದ ಮಗನಾದ ಕುಸುಮದತ್ತನಿಗೆ ರಾಜ್ಯಭಾರವನ್ನು ಒಪ್ಪಿಸಿ ತಪಸ್ಸನ್ನು ಕೈಗೊಂಡು ದೇವನಾಗುತ್ತಾನೆ. ಮಾರಿದತ್ತನದು ತಿಳಿಯದೇ ಮಾಡಿದ ಪಾಪ, ಯಶೋಧರನದು ತಿಳಿದು ಮಾಡಿದ ಪಾಪ. ಆದ್ದರಿಂದ ಮಾರಿದತ್ತನದ್ದಕ್ಕಿಂತ ಯಶೋಧರನು ಹೆಚ್ಚು ಸಂಕಷ್ಟಗಳಿಗೊಳಗಾಗುತ್ತಾನೆ. ಮಾರಿದತ್ತ ಹಿಂಸೆಯನ್ನು ಕೈಬಿಟ್ಟು ಅಹಿಂಸಾತತ್ಪರನಾಗುತ್ತಾನೆ. ಅಭಯರುಚಿ, ಅಭಯಮತಿಯರಿಬ್ಬರೂ ತಪಸ್ಸಿನ ನಂತರ ಈಶಾನಕಲ್ಪದಲ್ಲಿ ದೇವರಾಗಿ ಹುಟ್ಟುತ್ತಾರೆ.

ಮುಂದೆ ಯಶೋಮತಿಯ ಮಗನಾದ ಎರಡನೆಯ ಯಶೋಧರನು ಸುದತ್ತ ಮುನಿಗಳಿಂದ ತನ್ನ ಪೂರ್ವಜರ ವಿಷಯವನ್ನು ಕೇಳಿ ತಿಳಿದು, ಜೀವದಯೆ ಎಂಬುದು ನಮ್ಮ ಮಾವನವರಾದ ಮಾರಿದತ್ತನು ಹೆಸರಾಗಿದ್ದ ನಾಡಿನಲ್ಲಿ ಇರಲಿಲ್ಲ. ಆದರೆ ಮುಂದೆ ನಾಡಿನಲ್ಲಿ ಧರ್ಮ, ಅಹಿಂಸೆಗಳು ನೆಲೆನಿಂತು ತಪೋಬಲದಿಂದ ಮಾವನವರಿಗೂ, ನನ್ನ ಒಡಹುಟ್ಟಿದ ಅಭಯರುಚಿ, ಅಭಯಮತಿಯರಿಗೂ ದೇವಗತಿಯಾಯಿತು. ಇವೆಲ್ಲಾ ಪರಿವರ್ತನೆಗಳಾದುದು ಧರ್ಮದಿಂದ. ಎರಡನೆಯ ಯಶೋಧರನೂ ಧರ್ಮಕ್ಕೆ ಮನಸ್ಸು ಕೊಟ್ಟು ಜೈನಧರ್ಮವನ್ನು ಬೆಳೆಸಿ ಅದಕ್ಕೆ ಕೀರ್ತಿ ತಂದು ತನ್ನ ಅಜ್ಜನ ರಾಜ್ಯವಾದ ಉಜ್ಜಯಿನಿಯಲ್ಲಿ ದಕ್ಷ ರಾಜನಾಗಿ ರಾಜ್ಯವಾಳುತ್ತಿದ್ದನು.

ಹೀಗೆ ಯಶೋಧರ ಚರಿತೆ ತುಂಬಾ ಸರಳವೂ, ಸ್ವಾರಸ್ಯಕರವೂ ಆದ ವಿಶಿಷ್ಟ ಕಾವ್ಯ. ಜನರ ಮನಸ್ಸನ್ನು ನೇರವಾಗಿ ಮುಟ್ಟುವ ರೀತಿಯಲ್ಲಿ ಜನ್ನ ರಚಿಸಿದ್ದಾನೆ. ಜನ್ನನ ಅಪೂರ್ವವಾದ ದೇಶಿ ಶೈಲಿಗೆ ನಿದರ್ಶನ, ಕನ್ನಡ ಸಂಸ್ಕೃತಗಳ ಮಿಶ್ರಣ. ಆಡು ನುಡಿಗಳು, ನಾಣ್ಣುಡಿಗಳು, ನುಡಿಗಟ್ಟುಗಳು ಈ ಕಾವ್ಯದ ಸೊಗಸಾದ ಅಂಶಗಳು. ತಮ್ಮ ಕಥೆಯನ್ನು ಹೇಳಿ ಅಭಯರುಚಿ, ಮಾರಿದತ್ತನನ್ನು ಅಹಿಂಸಾತತ್ಪರನಾಗಿ

ಮಾಡುವುದೇ ಕಾವ್ಯದ ವಸ್ತು. ಒಟ್ಟಿನಲ್ಲಿ ಯಶೋಧರ ಚರಿತೆ ಒಂದು ಅತ್ಯಪೂರ್ವವಾದ ಕಾವ್ಯ. ಇದು ಧಾರ್ಮಿಕ ಕಾವ್ಯವಾದರೂ ಲೌಕಿಕ ವಿಷಯಕ್ಕೆ ಕೊರತೆ ಇಲ್ಲ.

ಅನಂತನಾಥ ಪುರಾಣ

ಇದು ಜನ್ನನ ಎರಡನೆಯ ಕೃತಿ. ೧೪ನೇ ತೀರ್ಥಂಕರನನ್ನು ಕುರಿತ ೧೪ ಆಶ್ವಾಸಗಳುಳ್ಳ ಪ್ರೌಢ ಕೃತಿ. ಗುಣಭದ್ರಾಚಾರ್ಯರ ಉತ್ತರ ಪುರಾಣ ಮತ್ತು ಚಾವುಂಡರಾಯ ಪುರಾಣ ಇದಕ್ಕೆ ಆಕರ. ಕಥೆಯೊಳಗೆ ಕಥೆ ಹೆಣೆದುಕೊಂಡು ಕೃತಿ ಜಟಿಲವಾಗಿದೆ. ಇದನ್ನು ಜನ್ನ ೧೨೩೦ರಲ್ಲಿ ಬರೆದಿದ್ದಾನೆ. ಇಮ್ಮಡಿ ನರಸಿಂಹನ (೧೨೩೦-೧೨೩೫) ಮಂತ್ರಿಯೂ, ದಂಡಾಧೀಶನೂ ಆಗಿದ್ದ ಅವಧಿಯಲ್ಲಿ ಈ ಕೃತಿ ಬರೆದಿದ್ದಾನೆ.

ಅನಂತನಾಥ ಪುರಾಣ ಇದು ೧೪ನೇ ತೀರ್ಥಂಕರನಾದ ಅನಂತನಾಥನ ಕಥೆ. ಇದರಲ್ಲಿ ಸುಪ್ರಭ ಪುರುಷೋತ್ತಮರೆಂಬ ಬಲದೇವ ವಾಸುದೇವ ಚರಿತ್ರೆಯು, ಪ್ರತಿ ವಾಸುದೇವನಾದ ಮಧುಕೈಟಭನ ಚರಿತ್ರೆಯೂ ಬಂದಿದೆ. ಅರಿಷ್ಟಪುರದ ಪದ್ಮರಥ, ಲಕ್ಷ್ಮೀಮತಿಯರೆಂಬ ರಾಜದಂಪತಿಗಳಿಗೆ ಮಗ ಮೇಘರಥ. ಒಮ್ಮೆ ಮೇಘರಥ ಉಲ್ಕಾಪಾತವನ್ನು ಕಂಡು ವೈರಾಗ್ಯ ಹೊಂದಿ ದೀಕ್ಷೆಯನ್ನು ಪಡೆದು, ದೀರ್ಘತಪಸ್ಸಿನ ನಂತರ ದೇಹತ್ಯಾಗ ಮಾಡಿ ಅಚ್ಯುತಕಲ್ಪದಲ್ಲಿ ದೇವನಾಗಿ ಹುಟ್ಟುತ್ತಾನೆ. ಅವನೇ ಮುಂದೆ ಕೋಸಲ ದೇಶದ ರಾಜದಂಪತಿಗಳಲ್ಲಿ ಅನಂತನಾಥನೆಂಬ ೧೪ನೆಯ ತೀರ್ಥಂಕರನಾಗಿ ಹುಟ್ಟುತ್ತಾನೆ. ಭವಾವಳಿಗಳ ಗೊಂದಲವಿಲ್ಲದ ಈ ಕಥೆಯನ್ನು ಜನ್ನನು ನೇರವಾಗಿ ನಿರೂಪಿಸಿದ್ದಾನೆ. ಕಾವ್ಯದೃಷ್ಟಿಯಿಂದ ಈ ಕಥೆಗೆ ಹೊಂದಿಕೊಂಡು ಬರುವ ಸುಪ್ರಭ ಪುರುಷೋತ್ತಮರ ಹಿಂದಿನ ಜನ್ಮದ ಕಥೆ ತುಂಬಾ ಸುಂದರವಾಗಿ ಮೂಡಿ ಬಂದಿದೆ.

ಪೌದನಪುರದ ಅರಸು ವಸುಶೇಣ. ಅವನ ರಾಣಿ ಸುನಂದಾ ದೇವಿ. ಇವನ ಮಿತ್ರನಾದ ಚಂಡಶಾಸನ ಒಮ್ಮೆ ಪೌದನಾಪುರದ ತನ್ನ ಅರಮನೆಗೆ ಬರುವನೆಂದು ತಿಳಿದು ರಾಜನು ಹಿಗ್ಗುತ್ತಾನೆ. ಅವನ ಆಗಮನದ ನಂತರ ಇಬ್ಬರು ನಾನಾ ವಿನೋದ ಕ್ರೀಡೆಗಳಿಂದ ಕಾಲಕಳೆಯುತ್ತಾರೆ. ಆಗ ಚಂಡಶಾಸನ ಸುನಂದೆಯ ರೂಪಕ್ಕೆ ಮರುಳಾಗುತ್ತಾನೆ. ತನ್ನ ಆಶಯವನ್ನು ಗೆಳೆಯನಾದ ಸುದರ್ಶನನಿಗೆ ತಿಳಿಸುತ್ತಾನೆ. ಆತನು ಇವನಿಗೆ ಬುದ್ಧಿ ಹೇಳುವ ಬದಲು ಸುನಂದೆಗೂ ಅವನ ಮೇಲೆ ಮೋಹ ಉಂಟಾಗಿರುವುದು ಎಂದು ಹೇಳುತ್ತಾನೆ. ಇಬ್ಬರನ್ನು ಜೊತೆ ಸೇರಿಸುವ ಉಪಾಯ ಮಾಡುತ್ತಾನೆ. ಚಂಡಶಾಸನ ಮತ್ತು ವಸುಶೇಣ ಬೇಟೆಯಾಡುತ್ತಾ ಹೋದವರು ಬೇರೆಬೇರೆಯಾಗುತ್ತಾರೆ. ರಾಜನು ಸುನಂದೆಯೊಡನೆ ಭೋಜನವನ್ನು ತರುವಂತೆ ಹೇಳಿರುತ್ತಾನೆ. ಸುನಂದೆ ಬರುವ ದಾರಿಯಲ್ಲಿ ಚಂಡಶಾಸನನು ಕಾದಿದ್ದು, ಅವಳನ್ನು ಬಲಾತ್ಕಾರದಿಂದ ತನ್ನ ರಥದಲ್ಲಿ ಕುಳ್ಳಿರಿಸಿಕೊಂಡು ಮನೋವೇಗದಿಂದ ಹೋಗುತ್ತಾನೆ. ಸುನಂದೆ ಪತಿಯನ್ನು ಕರೆದು ಗೋಳಾಡಿ ಚಂಡಶಾಸನನ್ನು ನಿಂದಿಸುತ್ತಾಳೆ.

ಸುರಮ್ಯ ದೇಶದ ಗಡಿಯಲ್ಲಿದ್ದ ಸಿಂಹಚೂಡನು ಆತನನ್ನು ತಡೆದು ನಿಲ್ಲಿಸಿದಾಗ, ಸಿಂಹಚೂಡನನ್ನು ಕೊಂದು ತನ್ನ ರಥವೇರಿ ಚಂಡಶಾಸನನು ತನ್ನ ಕೋಟೆಯನ್ನು ತಲುಪುತ್ತಾನೆ. ಮಹಾಪತಿವ್ರತೆಯಾದ ಸುನಂದೆ ಏನಾದರೂ ತನ್ನನ್ನು ಒಲಿಯುವುದಿಲ್ಲ ಎಂಬುದನ್ನು ತಿಳಿದ ಚಂಡಶಾಸನ "ನಿನ್ನನ್ನು ಬಿಡುವುದಿಲ್ಲ, ನೀನು ಸತ್ತರೆ ನಾನು ಸಾಯುತ್ತೇನೆ" ಎನ್ನುತ್ತಾನೆ. ಇತ್ತ ವಸುಶೇಣ ಸಂಗತಿಯನ್ನು ತಿಳಿದು ಚಂಡಶಾಸನನ ಕೋಟೆಯನ್ನು ದಾಳಿ ಮಾಡುತ್ತಾನೆ. ಚಂಡಶಾಸನನು ಐಂದ್ರಜಾಲಿಕ ಸಹಾಯದಿಂದ ವಸುಶೇಣನನ್ನೇ

ಹೋಲುವ ತಲೆಯನ್ನು ಮಾಡಿಸಿ ಇಗೋ ನಿನ್ನ ಗಂಡನ ತಲೆ ಎಂದು ಅವಳ ಮುಂದೆ ಎಸೆದಾಗ ಅದನ್ನು ಕಂಡ ಕೂಡಲೇ ಸುನಂದೆಯು ಪ್ರಾಣ ಹಾರಿ ಹೋಗುತ್ತದೆ. ಚಂಡಶಾಸನ ದುಃಖಿತನಾಗಿ ಆಕೆಯು ದೇಹವನ್ನಪ್ಪಿಕೊಂಡು ಮುಂದಿನ ಜನ್ಮದಲ್ಲಾದರೂ ನಿನ್ನನ್ನು ಕೂಡುತ್ತೇನೆ ಎಂದು ನಿರ್ಧರಿಸಿ ಚಂಡಶಾಸನನು ಅವಳೊಡನೆ ಸಹಗಮನ ಮಾಡುತ್ತಾನೆ. ವಸುಶೇಣ ಅತ್ಯಂತ ದುಃಖಿತನಾಗಿ ದೀಕ್ಷೆ ಪಡೆದು ತಪಸ್ಸಿನಿಂದ ದೇಹತ್ಯಾಗ ಮಾಡುತ್ತಾನೆ.

ರಾಮಾಯಣದ ಕಥೆಯನ್ನು ಹೋಲುವ ಈ ಕಥೆಯಲ್ಲಿ ಕವಿ, ಸುನಂದೆ ಸೀತೆಗಿಂತ ಮಿಗಿಲು ಎಂಬುದನ್ನು ತೋರಿಸಿದ್ದಾನೆ. ಗಂಡ ಸತ್ತಾಗ ಹೆಂಡತಿ ಸಹಗಮನ ಮಾಡುವುದು ಸಾಮಾನ್ಯ. ಆದರೆ ಪ್ರೀತಿಸಿದ ಹೆಣ್ಣಿನೊಡನೆ ಸಹಗಮನ ಮಾಡಿದವನು ಚಂಡಶಾಸನ ಒಬ್ಬನೇ.

ಯಶೋಧರ ಚರಿತೆಯಲ್ಲಿ ಹೆಣ್ಣಿನ ಧರ್ಮ ವಿರುದ್ಧ ಪ್ರೇಮದ ಚಿತ್ರವನ್ನು ನೀಡಿದ ಜನ್ನನು ಅನಂತನಾಥ ಪುರಾಣದಲ್ಲಿ ಚಂಡಶಾಸನ ಪ್ರಸಂಗದ ಮೂಲಕ ಗಂಡಿನ ವಿಕೃತ ಪ್ರಣಯದ ಚಿತ್ರಣವನ್ನು ನೀಡಿದ್ದಾನೆ. ಚಂಡಶಾಸನನು ಸ್ನೇಹಿತನ ಹೆಂಡತಿಯನ್ನು ಮೋಹಿಸಿದ್ದು ಸರಿಯಲ್ಲವಾದರೂ ಅವಳಿಗಾಗಿ ಪ್ರಾಣವನ್ನೇ ತೆರುವಷ್ಟು ಅಧಿಕವಾದ ಪ್ರೀತಿ ಅವನದ್ದು ಎಂದು ತಿಳಿದಾಗ ನಮಗೆ ಆಶ್ಚರ್ಯ, ಕನಿಕರಗಳು ಉಂಟಾಗುತ್ತವೆ. ಚಂಡಶಾಸನನ ವರ್ತನೆ ಕೇವಲ ಮೋಹದಿಂದ ಪ್ರೇರಿತವಾದದ್ದು ಎಂದು ಹೇಳುವಂತಿಲ್ಲ. ಮನುಷ್ಯ ಜೀವನದಲ್ಲಿ ಅತ್ಯಂತ ಮೂಲಭೂತವಾದ ಕಾಮ ಮತ್ತು ಪ್ರೇಮ ಇವುಗಳ ವೈಚಿತ್ರ್ಯ ಜನ್ನನನ್ನು ಚಕಿತಗೊಳಿಸಿ ಅದರ ಬಗ್ಗೆ ಆಲೋಚಿಸುವಂತೆ ಮಾಡಿರಬೇಕು.

ಆದ್ದರಿಂದಲೇ ಅಮೃತಮತಿ ಮತ್ತು ಚಂಡಶಾಸನರ ಪಾತ್ರಗಳಲ್ಲಿ ಕಾಮ, ಮೋಹಗಳ ಎರಡು ಚಿತ್ರಣಗಳನ್ನು ತನ್ಮಯವಾಗಿ ಅವನು ರೂಪಿಸಿದ್ದಾನೆ. ತುಂಬಾ ಗಂಭೀರವಾಗಿ ಈ ವಿಚಾರವನ್ನು ಕಾವ್ಯದಲ್ಲಿ ತಂದಿರುವ ಜನ್ನನು ಅದರಲ್ಲಿ ಯಶಸ್ವಿಯಾಗಿದ್ದಾನೆ. ಕಾಮ ಪ್ರೇಮಗಳನ್ನು ಇಷ್ಟು ವಿಶಿಷ್ಟ ರೀತಿಯಲ್ಲಿ ಕಾವ್ಯದಲ್ಲಿ ನಿರೂಪಿಸಿರುವುದು ನಮ್ಮ ಹಳೆಯ ಸಾಹಿತ್ಯದಲ್ಲಿಯೇ ಬೇರೆಡೆ ಕಂಡುಬರುವುದಿಲ್ಲ. ಯಶೋಧರ ಚರಿತೆಯಲ್ಲಿ ಕೇವಲ ಕಂದಪದ್ಯಗಳಿಂದ ಅತ್ಯಂತ ಸರಳವೂ, ನೇರವೂ, ಹೃದಯಸ್ಪರ್ಶಿಯೂ ಆದ ಶೈಲಿಯಲ್ಲಿ ಜನ್ನ ಕಾವ್ಯ ರಚನೆ ಮಾಡಿ ಸಂಕಲ್ಪಹಿಂಸೆಯ ಘೋರ ಪರಿಣಾಮವನ್ನು ಚಿತ್ರಿಸಿದರೆ, ಅನಂತನಾಥ ಪುರಾಣದಲ್ಲಿ ಸಾಂಪ್ರದಾಯಿಕವಾದ ಕಥಾವಸ್ತು ಕೊಟ್ಟರೂ ಅಲ್ಲಿಯ ಮೂಲಸಮಸ್ಯೆಯ ಬಗ್ಗೆ ವಿಶ್ಲೇಷಣೆ ಮಾಡಿ ಜನರ ಮನಸ್ಸನ್ನು ಗೆಲ್ಲುತ್ತಾನೆ. ಒಟ್ಟಿನಲ್ಲಿ ಈ ಎರಡೂ ಕಾವ್ಯಗಳಲ್ಲಿ ಧಾರ್ಮಿಕ ವಸ್ತುಗಳ ನಿರೂಪಣೆ ಇದೆ. ಹಾಗೂ ಎರಡೂ ಕೃತಿಗಳಲ್ಲಿ ದಾಂಪತ್ಯ ಮತ್ತು ವಿಷಮಪ್ರೇಮ ವಸ್ತುವನ್ನು ಚಿತ್ರಿಸಲಾಗಿದೆ. ಈತನ ಇನ್ನೊಂದು ಕೃತಿ ಅನುಭವ ಮುಕುರ, ಕಾಮಶಾಸ್ತ್ರಕ್ಕೆ ಸಂಬಂಧಪಟ್ಟ ಕೃತಿಯಾಗಿದೆ. ಮನುಷ್ಯನ ಬಿಕ್ಕಟ್ಟನ್ನು ಚಿತ್ರಿಸುವ ಜನ್ನ ಕನ್ನಡದ ಅಪರೂಪದ ಕವಿ. ಆದ್ದರಿಂದಲೇ ಜನ್ನನಿಗೆ ಕನ್ನಡ ಸಾಹಿತ್ಯದಲ್ಲಿ ವಿಶಿಷ್ಟವಾದ ಸ್ಥಾನ ದೊರೆತಿದೆ.

ರತ್ನಾಕರವರ್ಣಿ - ಕವಿ - ಕೃತಿ - ಪರಿಚಯ

೧೬ನೆಯ ಶತಮಾನತದ ಜೈನ ಕವಿಗಳಲ್ಲಿ ರತ್ನಾಕರವರ್ಣಿ ಅದ್ವಿತೀಯನಾದವನು. ಕನ್ನಡ ಸಾಂಗತ್ಯ ಕವಿಗಳಲ್ಲಿ ಅಗ್ರಗಣ್ಯನಾದವನು. ಈತನ ಮಾಹಿತಿ ಅಪೂರ್ಣ. (ಈತ ತನ್ನ ತಂದೆ-ತಾಯಿಗಳ ಬಗ್ಗೆ ಹೇಳದೇ ಗುರುಗಳ ಮಾಹಿತಿ ಹೇಳುತ್ತಾನೆ) ಮೂಡಬಿದಿರೆಯಲ್ಲಿ ದೇವರಾಜನೆಂಬ ಸೂರ್ಯವಂಶ ಕ್ಷತ್ರಿಯನಿದ್ದನು.

ಆತನ ಮಗನೇ ರತ್ನಾಕರವರ್ಣಿ ಎಂಬ ಅಭಿಪ್ರಾಯವಿದೆ.

ರತ್ನಾಕರನು ಬಾಲ್ಯದಲ್ಲಿಯೇ ಕಾವ್ಯಾಲಂಕಾರ ಲಕ್ಷಣ ಶಾಸ್ತ್ರದಲ್ಲಿ ಅತೀ ನಿಪುಣನಾಗಿ ಸಾರತ್ರಯಕ್ಕೆ, ಕೇಶವಯ್ಯರು ರಚಿಸಿದ ವ್ಯಾಖ್ಯಾನವನ್ನು ಕುಂದ ಕುಂದಾಚಾರ್ಯರು ಬರೆದ ಆಧ್ಯಾತ್ಮ ಸಿದ್ಧಾಂತಕ್ಕೆ ಪ್ರಬೇಂದುಗಳು ಮಾಡಿದ ಟೀಕೆಯನ್ನು ಪೂಜ್ಯಪಾದರ ಸಮಾಧಿ ಶತಕವನ್ನು ಅಮೃತ ಚಂದ್ರಮ ಸೂರಿಕೃತ ಸಮಯ ಸಾರಾಂಕ ಸಾಟಕ, ಯೋಗರತ್ನಾಕರ, ನಿಯಮಸಾರ, ಆಧ್ಯಾತ್ಮಸಾರ, ಪದ್ಮನಂದಿಕೃತ, ಸ್ವರೂಪ, ಸಂಭೋದನೆ, ಇಷ್ಟೋಪದೇಶ, ಆಧ್ಯಾತ್ಮ ನಾಟಕ ಮುಂತಾದ ಗ್ರಂಥಗಳು ಹೃದ್ಗತವಾಗಿ ತಿಳಿದು ಕವೀಶ್ವರನಾಗಿ ಆ ದೇಶದರಸು ಬೈರಸ ಒಡೆಯರ ಆಸ್ಥಾನದಲ್ಲಿ ಶೃಂಗಾರ ಕವಿಯೆಂದು ಹೆಸರ್ಗೊಂಡು ವಿದ್ವಾಂಸನಾಗಿದ್ದನು. ಆತನಿಗೆ ನಿರಂಜನ ಸಿದ್ಧನೆಂಬ ಬಿರುದಿದ್ದೆತೆಂದು ಕವಿ ಚರಿತ್ರೆಕಾರರು ಅಭಿಪ್ರಾಯ ಪಟ್ಟಿರುವರಾದರೂ ನಿರಂಜನ ಸಿದ್ಧ ಮತ್ತು ಚಿದಂಬರ ಪುರುಷ ಎಂಬುದು ಆತನ ಮೆಚ್ಚಿನ ದೇವರ ಅಂಕಿತಗಳೆಂದು ಅನೇಕ ಕಡೆ ಗುರುವೆ ನಿರಂಜನಸಿದ್ಧ, ಗುರುವೆ ಚಿದಂಬರ ಪುರುಷ ಎಂದು ಬರೆದಿರುವುದರಿಂದ ಸ್ಪಷ್ಟವಾಗುತ್ತದೆ. ಕವಿಗೆ ಶೃಂಗಾರ ಕವಿ ಹಂಸರಾಜನೆಂಬ ಬಿರುದಿದ್ದೆತೆಂದು ಆ ಬಿರುದು ಭರತೇಶ ವೈಭವ ಕಾವ್ಯದಿಂದಲೇ ಆತನಿಗೆ ದೊರಕಿತೆಂದು ಕೆಲವರು ಅಭಿಪ್ರಾಯ ಪಡುತ್ತಾರೆ.

ಈತನು ಭರತೇಶ ವೈಭವವೆಂಬ ಉದ್ದಾಮ ಕಾವ್ಯವನ್ನು, ತ್ರಿಲೋಕ ಶತಕ, ರತ್ನಾಕರಾಧೀಶ್ವರ ಶತಕ, ಅಪರಾಜಿತೇಶ್ವರ ಶತಕ ಎಂಬ ಮೂರು ಶತಕಗಳನ್ನು ಮತ್ತು ೨೦೦೦ ಗ್ರಂಥಗಳಷ್ಟು ಆಧ್ಯಾತ್ಮ ಗೀತ ಎಂಬ ಇನ್ನೊಂದು ಕೃತಿಯನ್ನು ರಚಿಸಿದ್ದಾನೆ. ಕೀರ್ತಿ ಆಚಾರ್ಯ ಇವನ ದೀಕ್ಷಾಗುರು. ಹಂಸನಾಥ ಮೋಕ್ಷ ಗುರು. ಕಾರ್ಕಳದ ಅರಸು ಆಚಾರ್ಯ ಭೈರವರಾಜನ ಆಸ್ಥಾನ ಕವಿಯಾಗಿ "ಶೃಂಗಾರ ಕವಿ" ಎಂಬ ಬಿರುದನ್ನು ರತ್ನಾಕರ ಪಡೆದಿದ್ದ. ಈತನ ಸಮಕಾಲೀನನಾದ ವಿಜಯಣ್ಣ ಕವಿಯ ದ್ವಾದಶಾನುಪ್ರೇಕ್ಷೆಗೆ ದೊರೆತ ಮರ್ಯಾದೆ, ಪ್ರಭಾವನೆಯನ್ನು ತಿಳಿದು ತನ್ನ ಭರತೇಶ ವೈಭವಕ್ಕೂ ಆ ಮರ್‍ಯಾದೆ ಸಲ್ಲಬೇಕೆಂದು ಹಟಹಿಡಿದ ಕಾರಣದಿಂದ ಗುರುಗಳ ಆಗ್ರಹಕ್ಕೆ ಒಳಗಾಗಿ ಬಹಿಷ್ಕೃತನಾದ. ಕುಪಿತನಾದ ಕವಿ ಜೈನಧರ್ಮಕ್ಕೆ ತಿಲಾಂಜಲಿಯಿತ್ತು ವೀರಶೈವ ಮತವನ್ನು ಸ್ವೀಕರಿಸಿದರೂ ಕೊನೆಗೆ ಜೈನಮತಕ್ಕೆ ಹಿಂದಿರುಗಿದ ನಂತರ ಶತಕ ಹಾಗೂ ಎರಡು ಸಹಸ್ರ ಆಧ್ಯಾತ್ಮಗೀತೆಗಳನ್ನು ಬರೆದನು ಎಂದು ದೇವಚಂದ್ರನು ತನ್ನ ರಾಜಾವಳಿ ಕಥೆಯಲ್ಲಿ ಹೇಳಿದ್ದಾನೆ.

ಕನ್ನಡ ಭಾಷೆಯನ್ನು ಸಮರ್ಥವಾಗಿ ಬಳಸಿ, ಕನ್ನಡ ಸಾಹಿತ್ಯಕ್ಕೆ ಅಪೂರ್ವ ಗೌರವವನ್ನು ತಂದು ಕೊಟ್ಟ ಪ್ರಾಚೀನ ಮಹಾಕವಿಗಳಲ್ಲಿ ಶಿಖರಪ್ರಾಯರಾದವರಲ್ಲಿ ರತ್ನಾಕರ ವರ್ಣಿಗೆ ಕೆಲವು ಪರ್ಯಾಯ ಹೆಸರಿದೆ. ರತ್ನಾಕರ ಸಿದ್ಧ, ರತ್ನಾಕರ ಅಣ್ಣ. ರತ್ನಾಕರ ಸಿದ್ಧ ಈತನ ನೆಚ್ಚಿನ ಹೆಸರು. "ಸಿದ್ಧಪದಕೆ ಸೋತೆನಾಗಿ ರತ್ನಾಕರ । ಸಿದ್ಧನೆಂದೆಲೊಲ್ವೆ.... ". ಎಂದು ಹೇಳಿಕೊಂಡಿದ್ದಾನೆ. ಈತನ ವೈಯಕ್ತಿಕತೆಯ ಬಗ್ಗೆ ಎರಡು ದಂತಕಥೆಗಳು ದೊರೆಯುತ್ತದೆ.

೧. ದೇವಚಂದ್ರನ ರಾಜಾವಳಿ ಕಥೆಯಲ್ಲಿ (೧೭೭೦-೧೮೪೧) : ರತ್ನಾಕರನು ಸೂರ್ಯವಂಶದ ರಾಜಕುಲದವನೂ ಹಾಗೂ ದೇವರಾಜನ ಮಗ. ಬಾಲ್ಯದಲ್ಲಿ ಕವಿತ್ವದ ಶಕ್ತಿಯನ್ನು ಹೊಂದಿದ ಈತ ಸೋಮವಂಶದ ಭೈರಸ ಒಡೆಯರ ಆಸ್ಥಾನದಲ್ಲಿ, ಪ್ರಸಿದ್ಧವಾದ ಕವಿಯಾಗಿದ್ದು ಶೃಂಗಾರಕವಿಯೆಂದು ಪ್ರಖ್ಯಾತಿ ಪಡೆದಿದ್ದನು. ಯೋಗ ರತ್ನಾಕರ ಶಾಸ್ತ್ರಾಭ್ಯಾಸದಿಂದ ದಶವಾಯುಗಳನ್ನು ಸಾಧಿಸಿದ್ದ ಈತನನ್ನು ಕಂಡು ಭೈರಸ ಒಡೆಯರ ಮಗಳು

ಮೋಹಪರವಶಳಾದಳು. ರತ್ನಾಕರನು ತನ್ನ ಯೋಗಾಭ್ಯಾಸ ಬಲದಿಂದ ಸೌಧಾಗ್ರವನ್ನು ಏರಿ ಗವಾಕ್ಷಿಯಿಂದ ಒಳಗೆ ಇಳಿದು, 'ಅವಳೊಳೆ ನೇಹಂ ಮಾಡುತ್ತಿದ್ದನು' ರಾಜನಿಗೆ ಇದು ತಿಳಿದು, ರತ್ನಾಕರನನ್ನು ಓಡಿದು ಶಿಕ್ಷಿಸಬೇಕೆಂಬ ಪ್ರಯತ್ನದಲ್ಲಿರಲು, ಇದನ್ನರಿತ ರತ್ನಾಕರವರ್ಣಿ ಆ ರಾತ್ರಿಯೇ ತನ್ನ ಗುರುವಾದ ಮಹೇಂದ್ರ ಕೀರ್ತಿಯ ಬಳಿಗೆ ಹೋಗಿ, ಅಣುವ್ರತ ದೀಕ್ಷೆಯನ್ನು ಕೈಗೊಂಡು (ಜೈನಧರ್ಮದ ಮೋಕ್ಷವನ್ನು ಪಡೆಯುತ್ತಾನೆ) ಆಧ್ಯಾತ್ಮತತ್ವ ತತ್ಪರನಾದನು. ಅಲ್ಲಿ ವಿಜಯ ಕೀರ್ತಿಗಳ ಶಿಷ್ಯ ವಿಜಯಣ್ಣ ದ್ವಾದಶಾನುಪ್ರೇಕ್ಷೆಗಳನ್ನು ಕನ್ನಡದಲ್ಲಿ ರಚಿಸಿ ಆನೆಯ ಮೇಲೆ ಪ್ರಭಾವನೆಯನ್ನು ಮಾಡಿದಾಗ ರತ್ನಾಕರನು ಭರತೇಶ ವೈಭವವನ್ನು ರಚಿಸಿ ಆನೆಯ ಮೇಲೆ ಮೆರೆಯಿಸಬೇಕೆಂದು ಭಿನ್ನೈಸಿದನು. ಆದರೆ ವಿಜಯಕೀರ್ತಿಗಳು ಅದರಲ್ಲಿ ೩-೪ ವಾಕ್ಯಗಳು ಪುರಾಣಕ್ಕೆ ವಿರುದ್ಧವಾಗಿವೆಯೆಂದು ಆಕ್ಷೇಪಿಸಿದರು. ಇದರಿಂದ ಇವರೊಳಗೆ ವಾದ ಬೆಳೆದು ಚರ್ಚೆಯಾಯಿತು. ಪರಿಣಾಮವಾಗಿ ರತ್ನಾಕರನಿಗೆ ಏಳುನೂರು ಶ್ರಾವಕರಲ್ಲಿ ಭಿಕ್ಷೆ ದೊರೆಯದಂತಾಯಿತು. ಆಗ ರತ್ನಾಕರನು ತನ್ನ ತಂಗಿಯ ಮನೆಯಲ್ಲಿಯೇ ಊಟಕ್ಕಿದ್ದು, ಜಿನಧರ್ಮವನ್ನು ದ್ವೇಷಿಸಿ ವೀರಶೈವನಾದನು. ಆದರೆ ಕೆಲವು ದಿನಗಳಲ್ಲಿಯೇ ಕೋಪವು ಉಪಶಮಿಸಿ ಪುನಃ ಜೈನಮತಾವಲಂಬಿಯಾಗಿ ಸನ್ಮಾರ್ಗದಲ್ಲಿ ನಂಬಿ ನಡೆದನು. ರಾಜ ಒಡೆಯರ ಕಾಲವಾದ ಮೇಲೆ ಚಾಮರಾಜನ ಕಾಲದಲ್ಲಿ ಭರತೇಶ್ವರ ಚರಿತೆ ೮೪ ಸಂಧಿಯನ್ನು ಓದಿದನು. ಈ ಕೃತಿಯು ಆಶಯ, ಹೋರಾಟ, ಪ್ರತಿಭಟನೆಯನ್ನು ಹೇಳುತ್ತದೆ.

೨. ಶ್ರೀಮಾನ್ ಉಗ್ರಾಣ ಮಂಗೇಶರಾಯರು : ಚಾರುಕೀರ್ತಿಯೋಗಿಯಿಂದ ಎಳೆವರೆಯದಲ್ಲಿಯೇ ದೀಕ್ಷೆ ಪಡೆದ ರತ್ನಾಕರನು ದಿನದಿನಕ್ಕೂ ಕೀರ್ತಿಶಾಲಿಯಾಗುತ್ತಾ ತನ್ನ ಶಿಷ್ಯ ಸಮುದಾಯದಿಂದ ಪರಿವೇಷ್ಟಿತನಾಗಿರಲು ಕೆಲವು ಕುಹಕಿಗಳು ಮಾತ್ಸರ್ಯದಿಂದ ಆತನು ಮಲಗುವ ಮಂಚದ ಕೆಳಗೆ ಒಬ್ಬ ವೇಶ್ಯೆಯನ್ನು ಬಚ್ಚಿಟ್ಟರು. ಆಕೆ ಸಮಯವನ್ನರಿತು ಬಳೆಗಳನ್ನಾಡಿಸಿದಳು. ಈತನ ಹೆಸರಿಗೆ ಕಳಂಕವನ್ನು ತಂದೊಡ್ಡಲು ಪ್ರಯತ್ನಿಸಿದರು. ಅವಮಾನಿತನಾದ ರತ್ನಾಕರನು ಅವರನ್ನು ತೊರೆದು ನೆಟ್ಟಗೆ ನಡೆದು ಹೊಳೆಯನ್ನು ಸೇರಿ, ಜಿನಧರ್ಮಕ್ಕೆ ಜಲಾಂಬಲಿಯಿತ್ತು ಅವನು ಘಟ್ಟದ ಮೇಲಕ್ಕೆ ಹೋದಾಗ ಅಲ್ಲಿ ಶೈವಗ್ರಂಥವೊಂದನ್ನು ಮೆರೆಯಿಸುತ್ತಿದ್ದರು. ಆ ಗ್ರಂಥವನ್ನು ನೋಡಿದಾಗ ಅದರಲ್ಲಿ ರಸವೇ ಕಂಡು ಬರಲಿಲ್ಲ. ರತ್ನಾಕರನು ೯ ತಿಂಗಳ ಅವಧಿಯಲ್ಲಿ ಭರತೇಶ ವೈಭವವನ್ನು ರಚಿಸಿ ಮರ್ಯಾದೆಯನ್ನು ಪಡೆದನು. ಅನಂತರ ರಾಜನ ಬೇಡಿಕೆಯಂತೆ ವೀರಶೈವ ಮತವನ್ನವಲಂಬಿಸಿದನು. ಆದರೂ ತನ್ನ ಮರಣಾನಂತರ ಉತ್ತರಕ್ರಿಯೆಗಳನ್ನು ಜೈನರೇ ನಡೆಸಬೇಕೆಂದು ತಿಳಿಸಿದುದಲ್ಲದೆ, ಸಾಯುವ ಮುನ್ನ ತಾನು ಮನಸಾ ಜೈನನಾಗಿಯೇ ಇದ್ದನೆಂಬುದನ್ನೂ, ತಾನು ಕೊರಳಲ್ಲಿ ಕಟ್ಟಿಕೊಂಡಿದ್ದು ಕೇವಲ ಒಂದು ಗೋಟಡಿಕೆಯೇ ಹೊರತು ಲಿಂಗವಲ್ಲವೆಂಬುದನ್ನು ಎಲ್ಲರಿಗೂ ಪ್ರತ್ಯಕ್ಷ ಪ್ರಮಾಣ ಮಾಡಿಕೊಟ್ಟನು.

ಈತನ ಕಾಲದ ಬಗ್ಗೆ ಹಲವಾರು ವಿದ್ವಾಂಸರು ತಮ್ಮ ತಮ್ಮ ಅಭಿಪ್ರಾಯವನ್ನು ವ್ಯಕ್ತಪಡಿಸಿದ್ದಾರೆ.

೧. ಶ್ರೀ ಎಸ್. ಜಿ. ನರಸಿಂಹಾಚಾರ್ ಮತ್ತು ಎಂ. ಎ. ರಾಮಾನುಜಯ್ಯಂಗಾರ್ ೧೫ನೆಯ ಶತಮಾನದ ಅಂತ್ಯ ಮತ್ತು ೧೬ನೆಯ ಶತಮಾನದ ಆದಿಭಾಗ ಎಂದು ನಿರ್ಧರಿಸಿದ್ದಾರೆ.

೨. ಮೂಡಬಿದಿರೆಯ ಹಸ್ತಪ್ರತಿಯಲ್ಲಿ ಕ್ರಿ.ಶ. ೧೬೬೦ (೧೭ನೇ ಶತಮಾನ) ಎಂದೂ,

೩. ದಿ। ಆರ್. ನರಸಿಂಹಾಚಾರ್ಯರು ತನ್ನ ಕವಿಚರಿತ್ರೆಯಲ್ಲಿ ತ್ರಿಲೋಕ ಶತಕದಲ್ಲಿ ಬರುವ ಶಬ್ದದ ಆಧಾರದಿಂದ ಕವಿಯ ಕಾಲ ಕ್ರಿ.ಶ. ೧೫೫೭ ಎಂದು ನಿರ್ಧರಿಸಿದ್ದಾರೆ.

೪. ಶ್ರೀ ತಾ.ಸು. ಶಾಮರಾಯ ೧೫ನೇ ಶತಮಾನದ ಮಧ್ಯಭಾಗ ಎಂದು ಅಭಿಪ್ರಾಯ ಪಡುತ್ತಾರೆ.

ಈತನ ಹುಟ್ಟಿದ ಊರು ವೇಣುಪುರ (ಮೂಡಬಿದಿರೆ) ಎಂದು ಹಲವಾರು ವಿದ್ವಾಂಸರು ಅಭಿಪ್ರಾಯ ಪಡುತ್ತಾರೆ.

ಭರತೇಶ ವೈಭವ : ರತ್ನಾಕರನ ಭರತೇಶ ವೈಭವ ಸಾಂಗತ್ಯದಲ್ಲಿ ರಚಿತವಾದ ಕನ್ನಡದ ಮಹಾಕಾವ್ಯಗಳಲ್ಲಿ ಒಂದು. ಈ ಮಹಾಕೃತಿಯು ಸುಮಾರು ಕ್ರಿ.ಶ. ೧೫೫೭ರಲ್ಲಿ ರಚಿತವಾಗಿದೆ ಎಂದು ಶ್ರೀ ಎಂ.ವಿ. ಸೀತಾರಾಮಯ್ಯ ಇತರ ಮೂರು ಶತಕಗಳಲ್ಲಿ ದಾಖಲಿಸಿದ್ದಾರೆ.

ಕವಿಯು ತನ್ನ ಗ್ರಂಥವನ್ನು ಭೋಗ ವಿಜಯ, ದಿಗ್ವಿಜಯ, ಯೋಗವಿಜಯ, ಮೋಕ್ಷವಿಜಯ, ಅರ್ಕಕೀರ್ತಿವಿಜಯಗಳೆಂಬ ೫ ಕಲ್ಯಾಣಗಳಾಗಿ ವಿಭಾಗಿಸಿದ್ದಾನೆ. ಈ ೫ ಭಾಗಗಳು ಕೂಡಿ ಈ ಬೃಹದ್ಗ್ರಂಥದಲ್ಲಿ ೮೦ ಸಂಧಿಗಳೂ ೯,೯೬೯ ಪದ್ಯಗಳೂ ಇವೆ.

ರತ್ನಾಕರನು ಜೈನ ಕವಿಯಾದರೂ ಉಳಿದ ಜೈನ ಕವಿಗಳಂತೆ ಒಂದು ಸಂಪ್ರದಾಯಕ್ಕೆ ಶರಣು ಹೋಗಿ ತನ್ನ ಕೃತಿಗಳನ್ನು ರಚಿಸಲಿಲ್ಲ. ಆದಿಕವಿ ಪಂಪನನ್ನು ಅನುಸರಿಸಿ ಅವನ ಹಾದಿಯಲ್ಲಿಯೇ ನಡೆದು ಬಂದವರು ಅನೇಕ ಕವಿಗಳು. ಆದರೆ ರತ್ನಾಕರನು ನಡೆದುದು ತನ್ನದೇ ಆದ ಒಂದು ಮಾರ್ಗ ಸ್ವತಂತ್ರಮಾರ್ಗ.

ಲೌಕಿಕ ಕಾವ್ಯದಲ್ಲೂ ಜೈನಕವಿಗಳು ತಮ್ಮ ಆಳ್ವರಸನನ್ನು ನಾಯಕನ ಪಾತ್ರದಲ್ಲಿಟ್ಟುಕೊಂಡು ಆತನಲ್ಲಿ ಸಕಲ ಸದ್ಗುಣಗಳನ್ನು ಸೇರಿಸಿ ವರ್ಣಿಸುತ್ತಾರೆ. ಆದರೆ ರತ್ನಾಕರನು ಸಂಪೂರ್ಣ ವಿರೋಧಿ "ಹೊಲ್ಲದ ನೃಪರಿಗಿಲ್ಲದ ಗುಣಗಳನ್ನಿಟ್ಟು । ಸೊಲ್ಲಿಪ ಕೃತಿ ಮಾರ್ಗವಲ್ಲ ॥ ಉಳ್ಳ ಸದ್ಗುಣಗಳ ಕಡೆಗಂಡು ಬಣ್ಣಿಸ । ಬಲ್ಲವನಾ ನೃಪನಾ । ರತ್ನಾಕರನು ತನ್ನ ಕೃತಿಗೆ ಅಂತಿಂತಹ ಅರಸನನ್ನು ನಾಯಕನನ್ನಾಗಿ ಆರಿಸಿಕೊಳ್ಳದೆ, ೧೬ನೆಯ ಮನುವೂ, ಪ್ರಥಮ ಚಕ್ರೇಶ್ವರನೂ, ಸುದತಿ ಜನಕ್ಕೆ ರಾಜಮದನನೂ ಆದ ತ್ರಿಷಷ್ಠಿ ಶಲಕಾ ಪುರುಷರಲ್ಲಿ ಒಬ್ಬನಾದ ಭರತೇಶನನ್ನು ಆರಿಸಿಕೊಂಡಿದ್ದಾನೆ. ಜೈನ ಸಾಹಿತ್ಯದಲ್ಲಿ ಹೆಸರು ಪಡೆದ ಭರತ-ಬಾಹುಬಲಿಯರ ಜೀವನವೇ ಈ ಕಾವ್ಯದ ವಸ್ತು. ರತ್ನಾಕರನ ಅಭಿಪ್ರಾಯದಲ್ಲಿ ಭರತೇಶನು ಭೋಗಿಯೂ, ಯೋಗಿಯೂ ಆಗಬಹುದು. ಆತನು ಸಕಲ ಸದ್ಗುಣಗಳ ಆಗರ, ಶೂರ, ಧೀರ. ಆತನನ್ನು ಯಾವುದರಲ್ಲಿಯೂ ಯಾವ ರೀತಿಯಿಂದಲೂ ಮೀರವವರು ಯಾರೂ ಇಲ್ಲ. ಈ ರೀತಿಯಾಗಿ ಭರತನ ಚಿತ್ರವನ್ನು ಚಿತ್ರಿಸ ಹೊರಟ ರತ್ನಾಕರನು ಪೂರ್ವಕೃತಿಯಲ್ಲಿ ಉಕ್ತವಾದ ಕಥೆಯನ್ನು ಕೆಲವೊಂದು ಸಂದರ್ಭದಲ್ಲಿ ಮಾರ್ಪಡಿಸಿಕೊಳ್ಳುವುದು ಅನಿವಾರ್ಯವಾಯಿತು. ಹೀಗೆ ಮಾರ್ಪಡಿಸಿಕೊಂಡದ್ದರಿಂದ ಆತನ ಈ ಉತ್ತಮ ಕೃತಿ "ಭರತೇಶ ವೈಭವ"ವು ಆಗಿನ ಕಾಲದ ಮಠಾಚಾರ್ಯರಿಂದ ಮನ್ನಣೆ ಹೊಂದಲಿಲ್ಲ. ರತ್ನಾಕರನು ತಾನಿದ್ದ ಜೈನಮಠ, ಜೈನಮತವನ್ನು ಬಿಟ್ಟು ಹೋದನೇ ಹೊರತು ತನ್ನ ಅಭಿಪ್ರಾಯವನ್ನು ಬದಲಿಸಲಿಲ್ಲ. ತಾನು ಚಿತ್ರಿಸಿದ ಭರತನ ಚಿತ್ರವನ್ನು ಮಾರ್ಪಡಿಸಲಿಲ್ಲ.

ಭರತೇಶ ವೈಭವವನ್ನು ಮತ್ಸರ ಬುದ್ಧಿಯಿಂದಲೇ ಬರೆದನೆಂದು ಕಂಡರೂ ಆತನು ನಾನೊಬ್ಬರೊಡನೆ ಮತ್ಸರಕೆ ಪೇಳ್ದವನಲ್ಲ ಎಂದು ಒತ್ತಿ ಹೇಳಿರುವನು. ಮಾತ್ರವಲ್ಲ ತಾನು ಗುರು ಹಂಸನಾಥನಾಜ್ಞೆಯೊಳು ಆತ್ಮಲೀಲಾರ್ಥವಾಗಿ ಬರೆದೆನೆಂದು ತಿಳಿಸಿರುವನು. ಪುಷ್ಪವು ಹೇಗೆ ತನ್ನ ಲೀಲಾರ್ಥವಾಗಿ ಅರಳಿ ತನ್ನ ಪರಿಮಳವನ್ನು ಗಾಳಿಯಲ್ಲಿ ಹರಡಿ ನಿಮ್ಮಿಂದ ಬೇರೆ ಮುದ್ದಿಸಲ್ಪಡಬೇಕೆಂದು ಬಯಸುತ್ತಿಲ್ಲವೋ ಹಾಗೆಯೇ ತನ್ನ ಆತ್ಮಸಂತೋಷಕ್ಕಾಗಿ ಕಾವ್ಯವನ್ನು ರಚಿಸಿ ಬೇಕಾದರಾಲಿಸುವುದು, ಬೇಡದಾಗೆ ಪರಾಕು

ಮಾಡುವುದೆನಗೆಲ್ಲಿ ವ್ಯಾಕುಲವಿಲ್ಲ, ಸಂತಸವಿಲ್ಲ. ನಾನು ನಿರಾಕಾಂಕ್ಷಿ ಎಂದು ಅದನ್ನು ಲೋಕಕ್ಕೆ ಸಮರ್ಪಿಸಿರುವನು. ಮನುಷ್ಯನು ಯಾವುದನ್ನು ಅಧಿಕವಾಗಿ ಆಕಾಂಕ್ಷಿಸುವನೋ ಅದೇ ಅವನಿಂದ ದೂರವಾಗುವುದು. ಯಾವುದನ್ನು ಅಲಕ್ಷಿಸುವನೋ ಅದೇ ಅವನಿಗೆ ಅಧಿಕವಾಗಿ ಲಭಿಸುವುದು ವಿಧಿ ವಿಲಾಸವಾಗಿರುವಂತೆ ಕಾಣಿಸುವುದು. ಕವಿಯ ಅನುಭವವೂ ಅದೇ ಆಯಿತು. ಕೀರ್ತಿಯ ಬಯಸಿ ನಾನು ಸರಿಲೆಲ್ಲೆನಗೆ ಸತ್ಕೀರ್ತಿ ತಾನೇ ಬರುತಿಹುದು ಎಂದು ಆತನೇ ತಿಳಿಸಿರುವನು.

ಹೀಗೆ ರತ್ನಾಕರನ ಭರತೇಶ "ಉಂಡುಪವಾಸಿ ಬಳಸಿ ಬ್ರಹ್ಮಚಾರಿ". ರತ್ನಾಕರ ಸಂಪ್ರದಾಯಗಳಿಗೆ ಶರಣಾದವನಲ್ಲ. ಸಂಸಾರ ಸುಖವನ್ನು ನಿರಾಕರಿಸಬೇಕೆಂದವನಲ್ಲ. ವಸ್ತುವಿನ ಆಯ್ಕೆಯಲ್ಲಿ, ನಿರ್ವಹಣೆಯಲ್ಲಿ, ಛಂದಸ್ಸಿನಲ್ಲಿ, ನಿರೂಪಣೆಯಲ್ಲಿ ಯಾದೃಚ್ಛಿಕವಾಗಿ ನಡೆದವನು. ನೀತಿ, ರೂಢಿ, ರಿವಾಜುಗಳಲ್ಲಿ ಅರ್ಥಹೀನತೆಯಿದ್ದಾಗ ಮುಲಾಜಿಲ್ಲದೆ ಕಿತ್ತೆಸೆದು, ಸರಿಕಂಡ ದಾರಿಯಲ್ಲಿ ಹೆಜ್ಜೆ ಹಾಕಿದವನು. ಈತನ ಭರತೇಶ ವೈಭವವು ಇಂಗ್ಲಿಷ್, ಹಿಂದಿ, ಮರಾಠಿ, ಗುಜರಾತ್ ಭಾಷೆಗಳಿಗೆ ಅನುವಾದಗೊಂಡಿರುವುದು ಆ ಕಾವ್ಯದ ಜನಪ್ರಿಯತೆಯನ್ನು ತೋರಿಸುತ್ತದೆ. ಹೀಗೆ ಭರತೇಶ ವೈಭವವೆಂಬ ಈ ಬೃಹದ್ಗ್ರಂಥದಲ್ಲಿ ಬರುವ ಕಥೆ ಚಿಕ್ಕದಾದರೂ ರತ್ನಾಕರನು ಸೊಗಸಾಗಿ ಚಿತ್ರಿಸಿದ್ದಾನೆ. ಇದೊಂದು ಹಾಡುಗಬ್ಬ. ಇದರಲ್ಲಿ ಸಾಂಗತ್ಯವೆಂಬ ದೇಶೀಯ ಛಂದಸ್ಸಿನ ಪದ್ಯಗಳಿವೆ. ಇದು ಸುಲಭವಾದ ಭಾಷಾ ಪ್ರಯೋಗ, ಪಾತ್ರಸೃಷ್ಟಿ ಕುಶಲತೆ, ಉಚಿತವಾದ ಉಪಮೆಗಳು, ಆಧ್ಯಾತ್ಮ ವಿಚಾರ ಭಾವನೆ ಇವುಗಳಿಂದ ಕೂಡಿದ ಅಪೂರ್ವಕಾವ್ಯ. ಕನ್ನಡ ಸಾಹಿತ್ಯಕ್ಕೆ ಇದೊಂದು ಅದ್ವಿತೀಯ ಕೊಡುಗೆಯಾಗಿದೆ.

ಭರತೇಶ ವೈಭವದ ಕಥಾಸಾರ :

ವೃಷಭನಾಥನ ಮಕ್ಕಳಲ್ಲಿ ಹಿರಿಯನೂ, ಹದಿನಾರನೆಯ ಮನುವೂ ಪ್ರಥಮ ಚಕ್ರಿಯೂ ಆದ ಭರತನು ಅಯೋಧ್ಯಾಪುರದಲ್ಲಿ ರಾಜ್ಯಭಾರವನ್ನು ಮಾಡುತ್ತಿದ್ದನು. ಉದಯದಲ್ಲಿ ಎದ್ದು ದೇವತಾರ್ಚನೆಯನ್ನು ನೆರವೇರಿಸಿ, ಒಡ್ಡೋಲಗವನ್ನು ನೆರವೇರಿಸಿ, ನಂತರ ಕವಿಗಾಯಕರ ಗೋಷ್ಠಿಯಲ್ಲಿದ್ದು, ಅನಂತರ ಮುನಿಭಕ್ತಿ ನಿಯಮವನ್ನು ಪಾಲಿಸಿದ ಮೇಲೆ ತನ್ನ ಸಹಸ್ರಾರು ರಾಣಿಯರೊಂದಿಗೆ ಸುಖ ಸಂಕಥನಾ ವಿನೋದಗಳಲ್ಲಿ ಕಾಲಕಳೆಯುತ್ತಿದ್ದನು. ಒಮ್ಮೆ ಆಯುಧಾಗಾರದಲ್ಲಿ ದಿಗ್ವಿಜಯ ಸೂಚಕವಾದ ಚಕ್ರರತ್ನ ಉದಯಿಸಿತು. ಮಂತ್ರಿಗಳು ಇದನ್ನು ನಿವೇದಿಸಿ ಸಾಧಿಸಲು ಸಮಯವೆಂದು ಸೂಚಿಸಲು, ಭರತನು ಜಿನನ ಪೂಜೆಯನ್ನು ನೆರವೇರಿಸಿ ವಿಜಯದಶಮಿಯ ದಿನ ದಿಗ್ವಿಜಯ ಪ್ರಯಾಣವನ್ನು ಬೆಳೆಸಿದನು. ಹೀಗೆ ಭರತ ಮತ್ತು ಆತನ ಸಹಸ್ರಾರು ಸಂಖ್ಯೆಯ ರಾಣಿಯರು ತಮ್ಮ ಅತ್ತೆಯಾದ ಯಶಸ್ವೀದೇವಿಯಿಂದ ಆಶೀರ್ವಾದವನ್ನು ಪಡೆದು ರಾಜನೊಂದಿಗೆ ಹಿಂಬಾಲಿಸಿದರು.

ಭರತನು ಪರಿವಾರದೊಡನೆ ಪಯಣದ ಮೇಲೆ ಪಯಣವನ್ನು ಬೆಳೆಸಿ ಪೂರ್ವಸಾಗರ ತಡಿಯಲ್ಲಿ ಬೀಡುಬಿಡುತ್ತಾನೆ. ಸ್ವಲ್ಪವೂ ರಕ್ತಪಾತವಿಲ್ಲದೆ ಪೂರ್ವ ಸಾಗರ ಪರ್ಯಂತ ರಾಜ್ಯವು ಆತನ ಅಧೀನವಾಗುತ್ತದೆ. ರಾಜನು ಯುದ್ಧದ ಜೊತೆಗೆ ತನ್ನ ಮಡದಿಯರೊಂದಿಗೆ ಸರಸ ಸಲ್ಲಾಪ, ಮಗನ ಬಾಲಲೀಲೆಗಳಲ್ಲಿ ಪಾಲ್ಗೊಳ್ಳುವುದು, ಮದುವೆ ಸಂಭ್ರಮ, ಹೆರಿಗೆ, ಜಾತಕರ್ಮ ಮೊದಲಾದ ಕ್ರಿಯೆಗಳಲ್ಲಿ ಪಾಲ್ಗೊಂಡು ಸಾಮರಸ್ಯದಿಂದಿದ್ದು ಕಾಪಾಡುತ್ತಾನೆ. ಯುದ್ಧದ ಸಮಯದಲ್ಲಿ ತನ್ನೊಂದಿಗೆ ಬಂದ ಹೆಂಡತಿಯರಿಗೆ

ನೋವಾಗದಂತೆ ಎಚ್ಚರವಹಿಸುತ್ತಾನೆ. ಯೋಗಭೋಗದಲ್ಲಿ ಸಮನ್ವಯನಾಗಿ ಚಿತ್ರಿತನಾಗಿದ್ದಾನೆ. ಬೀಡುಬಿಟ್ಟ ಸಮಯದಲ್ಲಿ ವ್ರತವನ್ನು ತಪ್ಪದೇ ಆಚರಿಸುತ್ತಾನೆ.

ಸುತ್ತಮುತ್ತಲಿನ ರಾಜರೆಲ್ಲರೂ ಕಪ್ಪಕಾಣಿಕೆಗಳನ್ನು ಕೊಟ್ಟು ಅಧೀನರಾದರೂ ಸಮುದ್ರ ಮಧ್ಯದ ದ್ವೀಪವಾಸಿಯಾದ ಮಗಧನೆಂಬ ರಾಜ ಮಾತ್ರ ಬರದೇ ಇದ್ದುದನ್ನು ತಿಳಿದು ಕೋಪಗೊಂಡು "ಮಗಧ ನನಗೊಬ್ಬ ಹಗೆಯೆ? ಸೂರ್ಯನಿಗೆ ದೊಡ್ಡ ಗೂಗೆಯ ಯೋಚನೆಯೇಕೆ?" ಎಂದುಕೊಂಡು ಆತನ ನಗರಿಯತ್ತ ಬಾಣ ಪ್ರಯೋಗಿಸುತ್ತಾನೆ. ಈ ಬಾಣ ಕಂಬಕ್ಕೆ ಬರಸಿಡಿಲು ಬಡಿದಂತೆ ಬಡಿಯಲು, ಅದನ್ನು ಕಂಡು ಹುಲಿಯನ್ನು ಕಂಡ ಜಿಂಕೆ ಹಿಂಡಿನಂತೆ ಸಭೆಯೆಲ್ಲವೂ ಚಲ್ಲಾಪಿಲ್ಲಿಯಾದವು. ಕೋಪಗೊಂಡ ಮಗಧನಿಗೆ ಮಂತ್ರಿಗಳು ಹಿತವಚನಗಳಿಂದ ಅವನನ್ನು ಸಂತೈಸಿ 'ಭರತ ಚಕ್ರೇಶ್ವರ ಸಾಮಾನ್ಯನಲ್ಲ. ದೇವರ ದೇವನ ಆತ್ಮಜ; ಅದ್ಭುತ ಸಂಪತ್ತಿಗೆ ಅಧಿಪತಿ ; ಕಿಂಚಿತ್ತೂ ಭಯವಿಲ್ಲದ ನಿಶ್ಶಂಕ. ಆದುದರಿಂದ ಕಾಳಗ ತರವಲ್ಲ. ಸಮಾನನೊಡನೆ ಯುದ್ಧ ಮಾಡುವುದು ಸರಿಯೇ ಹೊರತು ಅಧಿಕನೊಡನೆ ಹೋರಾಡುವುದು ತನ್ನನ್ನು ತಾನು ಇರಿದುಕೊಂಡಂತೆ" ಎಂಬ ಹಿತನುಡಿಯಿಂದ ಕೋಪ ಇಳಿದುಹೋಯಿತು. ನಂತರ ಕಪ್ಪಕಾಣಿಕೆಗಳೊಡನೆ ಭರತನಿಗೆ ಸಾಮಂತನಾದನು. ಇದೇ ಸಮಯದಲ್ಲಿ ಕುಸುಮಾಜಿ ಸುಕುಮಾರನಿಗೆ ಜನ್ಮ ನೀಡುತ್ತಾಳೆ. ಹರ್ಷಚಿತ್ತನಾದ ಭರತನು ಮಗನ ಜಾತಕರ್ಮಾದಿಗಳನ್ನು ವೈಭವದಿಂದ ನೆರವೇರಿಸಿದನು. ನಂತರ ದಕ್ಷಿಣ ದಿಕ್ಕಿಗೆ ಪ್ರಯಾಣ ಬೆಳೆಸಿ ದಕ್ಷಿಣ ಸಮುದ್ರದವರೆಗೆ ಇರುವ ರಾಜ್ಯವೆಲ್ಲಾ ಭರತನ ವಶವಾದುದಲ್ಲದೆ, ಆ ಸಮುದ್ರ ಮಧ್ಯದಲ್ಲಿದ್ದ ಭರತನೂ ಮಾಗಧನಂತೆ ಮೊದಲು ಎದುರು ನಿಂತರೂ ಕಡೆಗೆ ಭರತ ಚಕ್ರವರ್ತಿತ್ವವನ್ನು ಒಪ್ಪಿಕೊಂಡು ಕಪ್ಪ ಕಾಣಿಕೆಗಳನ್ನರ್ಪಿಸಿದನು. ಅನಂತರ ಪಶ್ಚಿಮಕ್ಕೆ ಪಯಣ ಬೆಳೆಸುತ್ತಾನೆ. ಆ ಕಡಲ ಮಧ್ಯದ ಒಡೆಯನಾದ ಪ್ರಭಾಸಾಮರ ವ್ಯಂತರನನ್ನು ಗೆದ್ದು ಕಪ್ಪಕಾಣಿಕೆಗಳನ್ನು ಪಡೆದ ನಂತರ ಸಿಂಧುನದಿಯ ದಕ್ಷಿಣ ತಡಿಯನ್ನು ಹಿಡಿದು ಮ್ಲೇಚ್ಛ ರಾಜ್ಯಗಳ ಮೇಲೆ ದಂಡೆತ್ತಿ ನಡೆದನು. ದಾರಿಯಲ್ಲಿ ವಿಜಯಾರ್ಧ ಪರ್ವತವಿದ್ದು, ಅದರ ಮಧ್ಯದಲ್ಲಿ ಒಂದು ವಜ್ರಕವಾಟವಿದೆ. ಭರತನು ತನ್ನ ದಂಡರತ್ನದಿಂದ ವಜ್ರಕವಾಟವನ್ನು ಒಡೆದು ಹಾಕಿದನು. ಅದರ ಆರ್ಭಟಕ್ಕೆ ವಿಜಯಗಿರಿ ನಡುಗಿ ಗಿರಿಯ ಒಡೆಯನಾದ ವಿಜಯಾರ್ಧ ದೇವನು ಭರತನಲ್ಲಿ ಕಪ್ಪಕಾಣಿಕೆಯನ್ನಿತ್ತು ಶರಣಾದನು.

ವಿಜಯಾರ್ಧ ಪರ್ವತದ ತಪ್ಪಲಿನಲ್ಲಿ ಗಗನವಲ್ಲಭ ಪಟ್ಟಣವನ್ನು ನಮಿ ಎಂಬ ರಾಜನೂ, ರಥ ಚಕ್ರವಾಳಪುರ ಪಟ್ಟಣವನ್ನು ವಿನಮಿ ಎಂಬ ರಾಜ ಸಹೋದರರು ಭರತನು ವಜ್ರಕವಾಟವನ್ನು ಭೇದಿಸಿದುದನ್ನು ಕೇಳಿ ವಿನಮಿಗೆ ಸಂತೋಷವಾದರೂ ಹಿರಿಯನಾದ ನಮಿಗೆ ಚಿಂತೆ ಕಾಡುತ್ತದೆ. ಕೊನೆಗೆ ತಂಗಿಯಾದ ಸುಭದ್ರೆಯನ್ನು ವಿವಾಹ ಮಾಡಿಕೊಡುವುದರ ಮೂಲಕ ಭರತನ ಅಧಿಪತ್ಯವನ್ನು ಒಪ್ಪಿಕೊಳ್ಳುತ್ತಾನೆ. ನಂತರ ಉತ್ತರಖಂಡದ ಚಿಲಾತ, ಆವರ್ತರೆಂಬ ರಾಜರಿಬ್ಬರು ಭರತನ ಬರವನ್ನು ಕಂಡು ಭಯದಿಂದ ಕುಲವೈರಿಗಳಾದ ಕಾಲಮುಖ, ಮೇಘಮುಖರನ್ನು ಪ್ರಾರ್ಥಿಸಿದರು. ಮಳೆ ಬಂದರೂ ಕೊನೆಗೆ ಈ ದೈವಗಳು ಭರತನಿಗೆ ಸಹಾಯವಾಗುವುದರ ಮೂಲಕ ಚಿಲಾತ, ಆವರ್ತಕರನ್ನು ಕೋಪದಿಂದ ಮುಕುಟವನ್ನು ಎಡಗಾಲಿನಿಂದ ಒದ್ದು ಕೆಡಹುವಂತೆ ಆಜ್ಞಾಪಿಸಲು, ಹೆದರಿದ ವ್ಯಂತರಾಜರೆಲ್ಲರೂ ಭರತನಿಗೆ ಕಪ್ಪಕಾಣಿಕೆಗಳನ್ನು ಅರ್ಪಿಸಿ ತಮ್ಮ ಕೈಂಕರ್ಯವನ್ನು ಸ್ವೀಕರಿಸಿದರು. ನಂತರ ಪೂರ್ವ ಪಶ್ಚಿಮ ಖಂಡಗಳನ್ನು ಜಯಿಸಿ ನಡುವಣ ಖಂಡದ ನಟ್ಟನಡುವೆ ವೃಷಭಾದ್ರಿಗೆ ಬಂದನು. ಹಿಂದಿನ ಚಕ್ರವರ್ತಿಗಳ ಅಂಕಮಾಲೆಯಿಂದ

ತುಂಬಿಹೋದುದನ್ನು ಕಂಡು ಕೋಪಗೊಂಡು ದಂಡರತ್ನದಿಂದ ಒಂದು ಶಾಸನವನ್ನು ಅಳಿಸಿ ಕಾಕಿಣೀರತ್ನದಿಂದ ತನ್ನ ಶಾಸನವನ್ನು ಕೆತ್ತಿದನು. ಹೀಗೆ ಮಗಧ, ವರತ, ಪ್ರಭಾಸ, ನಮಿರಾಜ ಮುಂತಾದವರನ್ನು ಹಲವು ಕಾಲ ದಿಗ್ವಿಜಯ ಪ್ರಯಾಣದಲ್ಲಿ ಸಾಮೋಪಾಯದಿಂದ ಸಾಧಿಸಿ, ರಾಜಧಾನಿಯ ಕಡೆಗೆ ಹಿಂದಿರುಗುತ್ತಾನೆ. ಊರಿಗೆ ಹಿಂದಿರುಗಿ ಬರುತ್ತಿದ್ದಾಗ ಪೌದಾನಪುರದಲ್ಲಿ ಚಕ್ರರತ್ನ ಮುಂದುವರೆಯದೆ ನಿಲ್ಲುತ್ತದೆ.

ದಿಗ್ವಿಜಯದಿಂದ ಮರಳಿ ಬಂದು ಪಯಣ ಬೆಳೆಸಬೇಕೆನ್ನುವಾಗ ಚಕ್ರರತ್ನವು ಮುನ್ನಡೆಯುವುದಿಲ್ಲ. ಭರತನ ತಮ್ಮನಾದ ಬಾಹುಬಲಿ ಈ ಪುರಕ್ಕೆ ಅಧಿಪತಿ. ಭರತನು ತನ್ನ ತಮ್ಮಂದಿರಿಗೆಲ್ಲಾ ಓಲೆಗಳನ್ನಟ್ಟಿದನು.

ಅದನ್ನು ಓದಿದ ತಮ್ಮಂದಿರು ತಂದೆ ಕೊಟ್ಟ ಉಂಬಳಿಯೊಳಗಿರುವ ತಾವು ಈತನಿಗೇಕೆ ಅಧೀನರಾಗಿ ಬಾಳಬೇಕೆಂದು ತಂದೆಯ ಬಳಿ ದೀಕ್ಷೆಯನ್ನು ತಾಳಿ ತಪೋನಿರತರಾಗುತ್ತಾರೆ. ಆದರೆ ಬಾಹುಬಲಿ ಮಾತ್ರ ಅಣ್ಣನ ಮೇಲೆ ಸೆಡೆದು ನಿಲ್ಲುತ್ತಾನೆ. ಇದನ್ನು ಅರಿತ ಭರತ ವಚನಚತುರನಾದ ದಕ್ಷಿಣಾಂಕನನ್ನು ಸಂಧಾನಕ್ಕಾಗಿ ಕಳುಹಿಸುತ್ತಾನೆ. ಬಾಹುಬಲಿಯ ಮನಸ್ಸು ತಿರುಗಿಸಬೇಕೆಂದು ಮಂತ್ರಿಗಳು ಪ್ರಯತ್ನ ಪಟ್ಟರೂ ಅದು ನಿಷ್ಫಲವಾಗುತ್ತದೆ.

ಅದೇ ದಿನ ರಾತ್ರಿ ಭರತನು ನಿದ್ರೆಯಿಲ್ಲದೆ ಕುಳಿತಿದ್ದಾಗ ಇಬ್ಬರು ಪಡೆಯವರು ಮಾತನಾಡುತ್ತಿರುವ ಸದ್ದು ರಾಜನ ಕಿವಿಗೆ ಬಿತ್ತು. ಒಬ್ಬ "ಪಡೆಯ ಸಹಾಯದಿಂದ ಚಕ್ರಿಗೆ ಘನತೆಯೇ ಹೊರತು ಅದಿಲ್ಲದಿದ್ದರೆ ಇವನು ನಮ್ಮಂತೆ ಮನುಷ್ಯ ಮಾತ್ರ" ಎಂದರೆ ಇನ್ನೊಬ್ಬ "ಹನಿಗೂಡಿ ಹಳ್ಳ, ನಾರೊಡಗೂಡಿ ಹಗ್ಗ" ಎಂದನು. ಈ ಮಾತನ್ನು ಕೇಳಿ ಚಕ್ರವರ್ತಿಗೆ ತನ್ನ ಪರಾಕ್ರಮವನ್ನು ತೋರಿಸಬೇಕೆಂಬ ಮನಸ್ಸಾಯಿತು. ಇತ್ತ ಕಡೆ ಬಾಹುಬಲಿ ಸರ್ವ ಸನ್ನಾಹದೊಡನೆ ದಂಡೆತ್ತಿ ಬರುತ್ತಾನೆ. ಈ ಸಹೋದರರ ಕಾದಾಟದಿಂದ ಅಕಾಲ ಪ್ರಳಯವಾಗುವುದೆಂದು ಮಂತ್ರಿಗಳು ಯೋಚಿಸಿ ಜಲಯುದ್ಧ, ದೃಷ್ಟಿಯುದ್ಧ, ಮಲ್ಲಯುದ್ಧಗಳಿಂದ ಗೆಲುವನ್ನು ನಿಶ್ಚಯಿಸುವಂತೆ ಪ್ರಾರ್ಥಿಸುತ್ತಾರೆ. ಆದರೆ ಕಾದಾಡುವ ಮುನ್ನ ತಮ್ಮನನ್ನು ಕುರಿತು "ಅಣ್ಣಯ್ಯಾ! ನಾವಿಬ್ಬರೂ ಒಡಹುಟ್ಟಿದವರು, ಜಿನಪುತ್ರರು, ಪರಸ್ಪರ ದ್ವೇಷಕ್ಕೆ ಯಾವುದೊಂದು ಕಾರಣವೂ ಕಾಣುತ್ತಿಲ್ಲ. ನಾನು ಮಾಡಿದ ಅಂತಹ ಅಪರಾಧವಾದರೂ ಏನು, ನಿನಗಿಷ್ಟು ಕೋಪವುಕ್ಕಿದುದೇತಕ್ಕೆ ? ಪರಸ್ಪರ ಒಬ್ಬರನ್ನೊಬ್ಬರು ಗೆದ್ದು ಸಾಧಿಸಬೇಕಾಗಿರುವ ಕೀರ್ತಿ ಏನಿದೆ, ಇಗೋ ನಾನು ಸೋತಿದ್ದೇನೆ, ನಿನ್ನದೇ ಗೆಲುವು " ಎಂದು ಒಪ್ಪಿಕೊಳ್ಳುತ್ತಾನೆ. ನಿನಗೆ ನನ್ನಲ್ಲಿ ಅಣ್ಣನೆಂಬ ಅಕ್ಕರೆ ಇಲ್ಲದಿದ್ದರೂ ನನಗೆ ತಮ್ಮನೆಂಬ ಅಕ್ಕರೆ ಇದೆ. ನೀನು ಚಕ್ರವರ್ತಿತ್ವವನ್ನು ಕೈಗೊಂಡು ಅದನ್ನು ನಾನು ಕಣ್ತುಂಬಾ ನೋಡಿ ಸಂತೋಷಿಸುತ್ತೇನೆ. ನನಗೊಂದು ಚಿಕ್ಕ ರಾಜ್ಯವನ್ನು ಕೊಡು, ಅದನ್ನು ಸಂತೋಷದಿಂದ ಸ್ವೀಕರಿಸಿ ತೃಪ್ತನಾಗುತ್ತೇನೆ. ಇಂತಹ ಅಣ್ಣನ ಮಾತಿನಿಂದ ಕೋಪ ಇಳಿದು ಹೋಯಿತು. ಅಣ್ಣನೊಡನೆ ಸ್ಪರ್ಧಿಸಿದ ಪಾಪಕ್ಕೆ ಜಿನದೀಕ್ಷೆಯೇ ತಕ್ಕದ್ದೆಂದು ನಿಶ್ಚಯಿಸಿ ತಪಸ್ಸಿಗೆ ತೆರಳುತ್ತಾನೆ. ಇತ್ತ ಭರತನು ಅಯೋಧ್ಯಾ ನಗರಿಯನ್ನು ಪ್ರವೇಶಿಸಿ ವೈಭವದಿಂದ ಚಕ್ರವರ್ತಿ ಪಟ್ಟವನ್ನು ವಹಿಸಿದನು.

ಶತಕತ್ರಯಿ : ರತ್ನಾಕರನು ಭರತೇಶ ವೈಭವ ಕೃತಿಯಲ್ಲದೆ ಅಪರಾಜಿತೇಶ್ವರ ಶತಕ, ರತ್ನಾಕರಾಧೀಶ್ವರ ಶತಕ, ತ್ರಿಲೋಕ ಶತಕ ಎಂದು ೩ ಶತಕಗಳನ್ನೂ, ೨೦೦೦ ಗ್ರಂಥಗಳಷ್ಟು ಆಧ್ಯಾತ್ಮಗೀತಗಳನ್ನು ರಚಿಸಿರುವನು.

ಕವಿಗೆ ಜೈನಾಗಮಗಳು ಕರತಲಾಮಲಕವಾಗಿದ್ದವು ಎನ್ನುವುದಕ್ಕೆ ಆತನ ಶತಕತ್ರಯವೇ ದೊಡ್ಡ

ಸಾಕ್ಷಿಯಾಗಿದೆ. ಇವುಗಳಲ್ಲಿ ಒಂದೊಂದರಲ್ಲಿಯೇ ೧೨೮ ಪದ್ಯಗಳಿವೆ. ಇವುಗಳಲ್ಲಿ ಒಂದಾದ 'ತ್ರಿಲೋಕ ಶತಕ'ವು ಜೈನಮತಾನುಸಾರವಾದ ಲೋಕಸ್ಥಿತಿಯನ್ನು ವರ್ಣಿಸುವುದಾಗಿದೆ. ಹಾಗೂ ಕಂದಪದ್ಯಗಳಿಂದ ರಚಿಸಲ್ಪಟ್ಟಿದೆ. 'ಅಪರಾಜಿತೇಶ್ವರ ಶತಕ'ವು ಉತ್ಪಲ, ಚಂಪಕಮಾಲೆಗಳಿಂದ ರಚಿಸಲ್ಪಟ್ಟಿದೆ. ಇದರ ವಿಷಯ ನಿರೂಪಣಾ ಸರಣಿಯಲ್ಲಿ ಹೆಚ್ಚು ಜಾಣ್ಮೆಯಿಲ್ಲ, ನವೀನತೆಯಿಲ್ಲ. ಬರಿಯ ಮಾತುಗಳ ಜೋಡಣೆ. ಕಲಿಕೆಯ ಕೈಯೇ ಹೊರತು ನುರಿತ ಕೈಯಲ್ಲ. ಹೇಳು ನೀತಿ ಕಠಿಣವಾಗಿದೆ ಅನುಸರಣೆಗೆ. ಸ್ವಾನುಭವದ ಕುಲುಮೆಯಲ್ಲಿ ಕಾದು, ಸುಖದುಃಖಗಳ ಸುತ್ತಿಗೆ ಏಟು ತಿಂದು, ಕಠಿಣತೆಯ ತಾಳಿಕೆಯನ್ನು ಕಳೆದುಕೊಂಡು, ಸಿದ್ಧಿಗಂಡ ಸಾಧಕನ ಮಾತುಗಳಲ್ಲ ನಾವಿಲ್ಲಿ ಕಾಣುವುದು. ಉಚ್ಚಧ್ಯೇಯವನ್ನು ಸಾಧಿಸಹೊರಡುವ ಮುನ್ನ ನಿಶ್ಚಯಿಸಿಕೊಂಡಿರುವ ನಿಯಮ ಕಾಠಿಣ್ಯತೆಯನ್ನು.

'ರತ್ನಾಕರಾಧೀಶ್ವರ ಶತಕ' ಶಾರ್ದೂಲ, ಮತ್ತೇಭ ವಿಕ್ರೀಡಿತ ವೃತ್ತಗಳಿಂದ ರಚಿಸಲ್ಪಟ್ಟಿದೆ. ಅಪರಾಜಿತೇಶ್ವರ ಶತಕ ಮತ್ತು ರತ್ನಾಕರಾಧೀಶ್ವರ ಶತಕಗಳು ವೈರಾಗ್ಯಪರವಾದ ಒಂದೇ ವಸ್ತುವನ್ನು ಹೊಂದಿವೆ. ಅಪರಾಜಿತೇಶ್ವರದಲ್ಲಿ ವಸ್ತು ನಿರೂಪಣೆಯೇ ಮುಖ್ಯವಾದ ಗುರಿಯಾಗಿದ್ದರೆ, ನೀತಿ ನಿರೂಪಣೆಯೇ ಪ್ರಮುಖವಾಗಿದ್ದರೆ, ರತ್ನಾಕರಾಧೀಶ್ವರ ಶತಕದಲ್ಲಿ ಮಾತುಗಳಲ್ಲಿ ಚಮತ್ಕಾರವು ನಿಶಿತವಾಗಿ ಇದೆ.

ಹೀಗೆ ರತ್ನಾಕರ ಶತಕವು ಜೈನರಿಗೆ ಮಾತ್ರವಲ್ಲದೆ ಎಲ್ಲರಿಗೂ ಆದರ. ಕವಿಯ ಆತ್ಮಶೋಧನವನ್ನು ಹೃದಯಂಗಮವಾಗಿ ಚಿತ್ರಿಸಿರುವ ಈ ಕಾವ್ಯ ಜೈನೇತರರೂ ಬಳಸಬಹುದಾದ ಕೃತಿ.

ಇವು ಶತಕಗಳೆಂದು ಕರೆಯಲ್ಪಟ್ಟರೂ ಸಪಾದಶಕಗಳಾಗಿವೆ. ಅಪರಾಜಿತೇಶ್ವರ ಶತಕ, ರತ್ನಾಕರಾಧೀಶ್ವರ ಶತಕವು ವೈರಾಗ್ಯ ಪರವಾಗಿಯೂ, ತ್ರಿಲೋಕ ಶತಕವು ತ್ರಿಲೋಕಗಳನ್ನು ಕುರಿತಾಗಿಯೂ ಇವೆ.

ರತ್ನಾಕರನು ತನ್ನ ತ್ರಿಲೋಕ ಶತಕವನ್ನು ಮಣಿಶೈಲಂಗತಿಯಿಂದು ಶಾಲಿಶಕದಲ್ಲಿ ರಚಿಸಿದನೆಂದು ನುಡಿಯುವುದರಿಂದ ಆತನ ಕಾಲವೂ ಶಾಲಿವಾಹನ ಶಕ (ಕ್ರಿ.ಶ. ೧೫೫೭) ಎಂದು ದೇವಚಂದ್ರನೇ ತಿಳಿಸಿರುವನು.

ರತ್ನಾಕರ ಶತಕವು ಶೃಂಗಾರಕವಿ ಹಂಸರಾಜನೆಂದು ಬಿರುದುಳ್ಳ ಬೇರೊಬ್ಬ ಕವಿಯಿಂದ ರಚಿತವಾದುದೆಂದೂ ಕವಿಚರಿತ್ರಕಾರರು ಅಭಿಪ್ರಾಯ ಪಟ್ಟಿರುವರು. ರತ್ನಾಕರ ಕವಿಯ ಗ್ರಂಥಗಳಲ್ಲಿರುವ ನಿರಂಜನಸಿದ್ಧ, ಚಿದಂಬರ ಪುರುಷ, ಅಪರಾಜಿತೇಶ್ವರ ಎಂಬ ಅಂಕಿತಗಳು ರತ್ನಾಕರಾಧೀಶ್ವರ ಶತಕದಲ್ಲಿ ದೊರೆಯದಿರುವುದರಿಂದಲೂ ಶೃಂಗಾರ ಕವಿ ಹಂಸರಾಜನ ಗುರು ದೇವೇಂದ್ರಕೀರ್ತಿಯಾಗಿಯೂ ರತ್ನಾಕರನ ಗುರು ಚಾರುಕೀರ್ತಿಯಾಗಿಯೂ ಇರುವುದರಿಂದಲೂ, ಇವರಿಬ್ಬರೂ ಪ್ರತ್ಯೇಕ ಕವಿಗಳೆಂದೂ ರತ್ನಾಕರಾಧೀಶ್ವರ ಶತಕವನ್ನು ರಚಿಸಿದ ಕವಿ ರತ್ನಾಕರನಲ್ಲವೆಂದೂ ಅವರು ನಿರ್ಧರಿಸಿರುವರು.

ಒಟ್ಟಿನಲ್ಲಿ ಈತನ ಶತಕಗಳು ಅಚ್ಚಗನ್ನಡದ ಸೊಬಗು ಲಾಲಿತ್ಯಗಳಿಂದ, ಭಾವಗೀತೆಯಾಗಿ ಹರಿದ ವೃತ್ತಗಳಾಗಿ ಹೃದಯಸ್ಪರ್ಶಿಯಾಗಿದೆ. ರತ್ನಾಕರನ ಹಾಡುಗಳಲ್ಲಿ ಕಾವ್ಯಕ್ಕಿಂತ ದೈವಭಕ್ತಿಯದೇ ಮೇಲುಗೈ.

ರತ್ನಾಕರನ ಧರ್ಮಪ್ರತಿಪಾದನೆಯಲ್ಲಿ, ಆತನ ತತ್ವ ಜಿಜ್ಞಾಸೆಯಲ್ಲಿ ಒಂದು ಅಲೌಕಿಕವಾದ ಔದಾರ್ಯವಿದೆ, ಸ್ವತಂತ್ರ ಮನೋವೃತ್ತಿಯಿದೆ. ಮನಗಂಡುದನ್ನು ನಿರ್ದಾಕ್ಷಿಣ್ಯವಾಗಿ ನುಡಿಯಬಲ್ಲ ಕೆಚ್ಚಿದೆ. ತನು, ರೂಪ, ಯೌವನ, ಸೌಭಾಗ್ಯ, ಧನ ಕ್ಷಣಿಕವಾದರೂ ಅದು ಭೋಗಕ್ಕೆ ಅಯೋಗ್ಯವಲ್ಲ. ಕ್ಷಣಿಕವೆಂಬುದನ್ನು ಅರಿತು, ಭೋಗವಿಮುಖನಾಗದೆಯೇ ಶಾಶ್ವತ ಸುಖವನ್ನು ಅರಸುತ್ತಾ ಹೋಗಬೇಕೆಂಬುದು ಆತನ ಸಂದೇಶ.

ಅಧ್ಯಾಯ ೪

ಜನ್ನನ ಯಶೋಧರ ಚರಿತ್ರೆಯಲ್ಲಿ ಪ್ರತಿಪಾದಿತವಾದ ಅಹಿಂಸೆ

ಜನ್ನನು ತನ್ನ ಯಶೋಧರ ಚರಿತೆಯಲ್ಲಿ ಪ್ರತಿಪಾದಿಸಿದ ಅಹಿಂಸಾ ತತ್ವವನ್ನು ಪ್ರಮುಖವಾಗಿ ಆರು ನೆಲೆಗಳಲ್ಲಿ ಗುರುತಿಸುವ ಪ್ರಯತ್ನ ಮಾಡಲಾಗಿದೆ.

ಜೈನ ಧರ್ಮದ ಅಹಿಂಸಾ ತತ್ವವನ್ನು ಲೋಕಕ್ಕೆಲ್ಲಾ ಸಾರುವುದು ಈ ಕೃತಿಯ ಉದ್ದೇಶ. ಈ ಕಾರಣಕ್ಕಾಗಿ ಕೃತಿಯಲ್ಲಿ ಬೇರೆ ಬೇರೆ ಪಾತ್ರಗಳ ಮತ್ತು ಘಟನೆಗಳ ಮೂಲಕ ಈ ತತ್ವವನ್ನು ಸಾರುವ ಪ್ರಯತ್ನ ಮಾಡಲಾಗಿದೆ.

೧. ಜೀವದಯೆ ಮತ್ತು ಜೈನಧರ್ಮ

೨. ಚಂದ್ರಮತಿ ಮತ್ತು ಯಶೋಧರ ಬಲಿ ಸಂದರ್ಭದ ಕ್ರಿಯ ಮತ್ತು ಪ್ರತಿಕ್ರಿಯೆ

೩. ಚಂಡಮಾರಿ ಮತ್ತು ಮಾರಿದತ್ತರ ಪ್ರಸಂಗ - ಹಿಂಸೆಯಿಂದ ಅಹಿಂಸೆಯೆಡೆಗೆ

೪. ಅಮೃತಮತಿ ಮತ್ತು ಅಷ್ಟಾವಂಕರ ಪ್ರಣಯ ಪ್ರಸಂಗ - ಯಶೋಧರ ನಡೆದುಕೊಂಡ ರೀತಿ

೫. ಅಮೃತಮತಿಯ ವಿಕೃತ ರೂಪ

೬. ವಸಂತಋತುವಿನ ವರ್ಣನೆ - ಹಿಂಸೆಯಿಂದ ಅಹಿಂಸೆಯೆಡೆಗೆ

ಕರ್ಮತತ್ವದ ಹಿನ್ನೆಲೆಯಲ್ಲಿ ಹಿಂಸೆಯ ದುರಂತ, ಘೋರ ಪರಿಣಾಮಗಳನ್ನು ಬಿತ್ತರಿಸಿ ತನ್ಮೂಲಕ ಅಹಿಂಸೆಯ ಮಹತ್ವವನ್ನು ಎತ್ತಿ ಹಿಡಿಯುವುದೇ ಈ ಕೃತಿಯ ಉದ್ದೇಶವಾಗಿದೆ[೩] ಈ ಮಾತನ್ನು ಒಪ್ಪಬಹುದು.

೧. ಜೀವದಯೆ ಮತ್ತು ಜೈನಧರ್ಮ :

"ಅಹಿಂಸಾ ಪರಮೋ ಧರ್ಮ, ಜೀವದಯೆಯೇ ಜೈನಧರ್ಮ" ಎಂಬುದು ಜೈನಧರ್ಮದ ಧ್ಯೇಯವಾಕ್ಯವಾಗಿದೆ. ಜೈನಧರ್ಮೀಯರು ಕೈಗೊಳ್ಳುವ ಪಂಚಾಣುವ್ರತಗಳಲ್ಲಿ ಅಹಿಂಸೆಯೂ ಒಂದು. ಅಹಿಂಸೆಯೇ ಜೈನಧರ್ಮದ ಅಡಿಗಲ್ಲು. ಆದುದರಿಂದ ಈ ಕೃತಿಯ ಪ್ರತಿಯೊಂದು ಅವತಾರದ ಅಂತ್ಯದಲ್ಲೂ ಮಾರಿದತ್ತನ ಜೀವಬಲಿ ಆಚರಣೆಗೆ ಬಲಿಗಳಾಗಿ ಬಂದಿರುವ ಅಭಯರುಚಿ, ಅಭಯಮತಿಯರ ಸಂಭಾಷಣೆಯಲ್ಲಿ ಮತ್ಸ್ಯದ "ಅಭಯರುಚಿ ಕುಮಾರಂ ಮಾರಿದತ್ತಂಗೆ ಹಿಂಸಾ ರಭಸಮತಿಗೆ ಸಯ್ಪಂ ಪೇಲ್ದು ಧರ್ಮಕ್ಕೆ ತಂದೀ ಶುಭಕಥನಂ" ಎಂದು ಯಶೋಧರನ ಕತೆಯನ್ನು ಕೇಳಿದವರ ಪಾಪ ಅಳಿಯುವುದೆಂದು ಜೈನಧರ್ಮಕ್ಕೆ ತಂದ ಈ ಶುಭ ಕಥನವನ್ನು ಆನಂದದಿಂದ ಕೇಳುವ ಧಾರ್ಮಿಕ ರಾಜಸಭೆಗೆ ಮಂಗಳವೂ, ಸಂಪತ್ತೂ ಉಂಟಾಗುತ್ತದೆ. ಇದೊಂದು ಧಾರ್ಮಿಕ ಕಾವ್ಯ, ಇಲ್ಲಿ ಜೈನಧರ್ಮದ ಶ್ರೇಷ್ಠತೆಯನ್ನು ತಿಳಿಸುವ ಪ್ರಯತ್ನವಿದೆ. ಹಾಗೂ ಜೈನಧರ್ಮದ ಅಹಿಂಸಾತತ್ವದ ಪ್ರತಿಪಾದನೆಯಿದೆ. "ಹಿಂಸೆಯ ದುಷ್ಫಲ, ಅಹಿಂಸೆಯ ಸತ್ಫಲವನ್ನು ಎತ್ತಿ ತೋರಿ ಜೀವದಯೆಯ ಮಹತ್ವವನ್ನು ತಿಳಿಸುವ ಧಾರ್ಮಿಕ ಕಥೆ, ಮತ ಪರಂಪರೆಯ ರೂಢವಾದ ಈ ಕಥೆಯನ್ನು ಜನ್ನನ್ನು ಇದ್ದಂತೆ ಸ್ವೀಕರಿಸಿದ್ದಾನೆ"[೪].

ಜೈನಧರ್ಮದಲ್ಲಿ ಅಹಿಂಸೆಗೆ ಪರಮಪ್ರಾಶಸ್ತ್ಯ. ಇದನ್ನು ಘೋಷಿಸಲು ಹೊರಟ ಕೃತಿ ಯಶೋಧರ ಚರಿತೆ. ಅಹಿಂಸೆಯ ಮುಂದೆ ಹಿಂಸೆಯ ಪರಾಭವ ಅನಿವಾರ್ಯ ಎಂಬುದನ್ನು ಈ ವಾಕ್ಯ ಮನಗಾಣಿಸುತ್ತದೆ. ಅಂದರೆ ಜೀವದಯಾಷ್ಟಮಿಯ ದಿವಸ ಜೈನಗೃಹಸ್ಥರು ಉಪವಾಸ ಮಾಡುತ್ತಾರೆ. ಈ ಇತಿಹಾಸ ಕಥೆಯಿಂದ ಅವರ ಕಿವಿಗೆ ಪಾರಣೆಯಾಗುವಂತೆ ಜನ್ನ ಈ ಕಾವ್ಯವನ್ನು ರಚಿಸಿದನು. ವೈದಿಕ ಮೊದಲಾದವರು

ದುರ್ಗಾಷ್ಟಮಿಯನ್ನು ಹಿಂಸಾತ್ಮಕವಾಗಿ ಆಚರಿಸುವಾಗ ಜೈನರು ಅಹಿಂಸಾತ್ಮಕವಾದ ಜೀವದಯಾಷ್ಟಮಿ ವ್ರತವನ್ನು ಆಚರಿಸುತ್ತಾರೆ. ಅಂದರೆ ಸರ್ವರೂ ಅಹಿಂಸಾ ತತ್ವವನ್ನು ಅನುಸರಿಸಲಿ ಎಂದರ್ಥ.

ಅಭಯರುಚಿ, ಅಭಯಮತಿಯರನ್ನು ಚಂಡಕರ್ಮ ಬಲಿಗಾಗಿ ಕರೆತರುತ್ತಾನೆ. ಬಲಿಗಾಗಿ ಬಂದ ಮಕ್ಕಳೊಡನೆ ಜನರು ರಾಜಶ್ರೇಷ್ಠನನ್ನು ಆಶೀರ್ವದಿಸುವಂತೆ ಕೇಳಿಕೊಂಡಾಗ ಮಂದರ ಪರ್ವತದಂತೆ ಧೈರ್ಯಶಾಲಿಯಾದ ಅಭಯರುಚಿ ಹೀಗೆನ್ನುತ್ತಾನೆ: "ರಾಜಶ್ರೇಷ್ಠನೇ, ನಿರ್ಮಲ ಧರ್ಮದಿಂದೆ ಪಾಲಿಸು ಧರೆಯಂ" ಎಂದು ಹರಸಿದನು. ಇದನ್ನು ಕೇಳಿದ ದೊರೆ "ಧೀರರಕಟ ಕುಮಾರರ್" ಎಂದು ವಿಸ್ಮಯ ಪಟ್ಟು ಮಾರಿಗೂ ಹೆದರದೆ ನಿಂತ ನಿಮ್ಮ ಕುಲ ಯಾವುದು ಎಂದಾಗ,

"ಧರ್ಮಪರರಿಗಲ್ಲದೆಮ್ಮಯ
ನಿರ್ಮಲ ಚಾರಿತ್ರಮಿಂಬುಕಯ್ಯದು ನಿಮಗಾ
ಧರ್ಮದ ಪೋದ ಪೊಲಂಬದು
ನರ್ಮದೆಯಿಂ ಗೆಂಟದೇಕೆ ಕೇಳ್ವಪೆಯಮ್ಮಂ" (೧ನೇ ಅವತಾರ ೬೪)

ನಿನಗೆ ಯೋಗ್ಯವಾದುದನ್ನು ನೀನು ಮಾಡು ಎಂದಾಗ ದೊರೆಯ ಪಾಪದ ಕತ್ತಲೆಯು ತೊಲಗಿತು. ಅವನ ಕರಕಮಲ ಮುಚ್ಚಿಕೊಂಡವು.

ತನ್ನ ಮಾತಿನಿಂದ ಮಾರಿದತ್ತನ ಮನಸ್ಸಿನಲ್ಲಾದ ಪರಿವರ್ತನೆಯನ್ನು ಗಮನಿಸಿ ಅಭಯರುಚಿ ಸಂತೋಷದಿಂದ ಹೀಗೆನ್ನುತ್ತಾನೆ :

ಭಲರೆ ನೃಪೇಂದ್ರಾ ದಯೆಯೊಳ್
ನೆಲೆಗೊಳಿಸಿದೆ ಮನಮನಮಮ ನೀಂ ಕೇಳ್ದುದು ಸ
ತ್ಫಲಮಾಯ್ತು ಧರ್ಮಪಥದೊಳ್
ಸಲೆ ಸಂದಪೆ ಕಾಲಲಲ್ಲಿ ಪೊಲಗಿಡಿಸುವುದೇ (೧ನೇ ಅವತಾರ ೬೯)

ಜನ್ನ ಈ ಕಥೆಯಲ್ಲಿ ಒಂದೆಡೆ ಯಶೋಧರನ ಕಥೆಯನ್ನು ಹೇಳುತ್ತಾ, ಅದಕ್ಕೆ ಪೂರಕವಾಗಿ ಮಾರಿದತ್ತನ ಪರಿವರ್ತನೆಯ ಕಥೆಯನ್ನು ಚಿತ್ರಿಸುವುದರ ಮೂಲಕ ತನ್ನ ಧರ್ಮದ ಮೂಲವಾದ ಅಹಿಂಸೆ, ಜೀವ ದಯೆಯನ್ನು ಪ್ರತಿಬಿಂಬಿಸಿ ಜಗತ್ತಿಗೆ ಸಾರುವುದನ್ನು ಗಮನಿಸಬಹುದು.

ಯಶೋಧರನ ತಾಯಿ ಚಂದ್ರಮತಿ ಕೆಟ್ಟ ಕನಸಿನ ಪರಿಹಾರಕ್ಕಾಗಿ ಜೀವಬಲಿ ಕೊಡಬೇಕೆಂದು ಹೇಳಿದಾಗ ರಾಜ ಹಿಂಸೆಗೆ ಹೇಸಿಕೊಳ್ಳುತ್ತಾನೆ. ಆಗ ಯಶೋಧರ

"ಜೀವ ದಯೆ ಜೈನಧರ್ಮಂ
ಜೀವರಹಿತಂ ನಂಬುವವರ್ಗೆ ಹಿಂಸೆಯಮೋಘಂ ಭಾವಿತಮೇ" ಎಂದು ತಾಯಿಗೆ ತನ್ನ ಧರ್ಮವನ್ನು ನೆನಪಿಸುತ್ತಾನೆ. ಜನ್ನನು ರಚಿಸಿದ ಈ ಸಾಲುಗಳು ಧರ್ಮ, ಅಹಿಂಸೆಯನ್ನು ಕುರಿತಂತೆ ಜೈನಧರ್ಮದ ನಿಲುವುಗಳೇನು ? ಜೈನಧರ್ಮಿಯರು ಅದನ್ನು ಬದುಕಿನಲ್ಲಿ ಅಳವಡಿಸುವುದರಲ್ಲಿ ಇರುವ ಸತ್ಯಾಂಶ, ಉದ್ದೇಶವನ್ನು ಗಮನಿಸಬಹುದು. ಇಲ್ಲಿ ಧರ್ಮ, ಅಹಿಂಸೆಯ ಬಗೆಗಿನ ಹಿರಿಯರ ಆಶಯ, ಅಭಿಮಾನ, ನಂಬಿಕೆಗಳನ್ನು ಹಿರಿಯರ ಪರವಾಗಿ ಕವಿಯೇ ಈ ಸಾಲಿನ ಮೂಲಕ ಹೇಳುವುದನ್ನು ಗಮನಿಸಬಹುದು.

ಈ ಮೂಲಕವಾದರೂ ಜೀವಿಗಳು ಹಿಂಸಾಭಾವವನ್ನು, ಕ್ರಿಯೆಯನ್ನು ಸಂಪೂರ್ಣವಾಗಿ

ನಿಲ್ಲಿಸುವಂತಾಗಬೇಕು ಎಂಬ ಜೈನಧರ್ಮದ ಶ್ರೇಷ್ಠತೆಯನ್ನು ಗುರುತಿಸಬಹುದು.

"ಜನ್ನನ ಮನೋಧರ್ಮ ಕಾವ್ಯಧರ್ಮವನ್ನು ಉಳಿಸಿಕೊಳ್ಳುವುದಾಗಿತ್ತೇ ಹೊರತು ತಾನು ಒಪ್ಪಿಕೊಂಡ ಜೈನಧರ್ಮವನ್ನಲ್ಲ. ಧರ್ಮದ ಅಭಿಮಾನ ಕೃತಿ ರಚನೆಗೆ ಕೇವಲ ಪ್ರಚೋದನೆ ಮಾತ್ರವಾಗಿ ಬರುತ್ತದೆ."[5] ಎಂಬ ಮಾತಿಗಿಂತ ಜೈನಧರ್ಮವನ್ನು ಉಳಿಸುವ ದೃಷ್ಟಿಯಿಂದ ಕವಿ ಕೃತಿ ರಚನೆ ಮಾಡಿದನೆಂದು ಹೇಳಬಹುದು. ಏಕೆಂದರೆ ಜೀವದಯೆಯನ್ನು ಕುರಿತಂತೆ ಧರ್ಮದ ನಿಲುವನ್ನು ಪದ್ಯದ ಮೂಲಕ ಕೊಡುತ್ತಾನೆ. ಅದು ಜನ್ನನ ಮಾತಾದರೂ ಅದನ್ನು ಯಶೋಧರನ ಪಾತ್ರದ ಮೂಲಕ ಹೇಳಿಸಿದ್ದಾನೆ.

ಯಶೋಧರ, ಅಮೃತಮತಿ ಮತ್ತು ಅಷ್ಟಾವಂಕನನ್ನು ಕೊಲ್ಲಲು ಹೋಗಿ ಕೊನೆಗೆ ಕೊಲೆ ಎಂಬ ಹಿಂಸೆ, ಪಾಪದ ಬಗ್ಗೆ ಹೇಸಿಕೊಳ್ಳುತ್ತಾನೆ. ಜೊತೆಗೆ ತನ್ನ ಸಮಸ್ಯೆಯ ಪರಿಹಾರಕ್ಕಾಗಿ ತಾಯಿ ಸೂಚಿಸಿದ ಪರಿಹಾರವು ಹಿಂಸೆಯ ರೂಪದ್ದೇ ಆಗಿದ್ದುದರಿಂದ ಅದಕ್ಕೂ ಹೇಸಿಗೆ ಪಟ್ಟುಕೊಳ್ಳುತ್ತಾನೆ. ಅದಕ್ಕಾಗಿ ಅವನು ಹಿಂಸೆಯಿಂದ ಪಾರಾಗಬೇಕೆಂದು ಧರ್ಮ, ಧರ್ಮದಲ್ಲಿನ ಅಹಿಂಸೆಯ ಮೊರೆ ಹೋಗುತ್ತಾನೆ. ಇಲ್ಲಿ ಯಶೋಧರನಿಗಿದ್ದ ಧರ್ಮದ ಬಗೆಗಿನ ಪ್ರಕ್ರಿಯೆಗಳನ್ನು ಗಮನಿಸಬಹುದು. ಆದರೆ ಇಲ್ಲಿಯೂ ನಡೆಯುವ ಪ್ರಮಾದವೇನೆಂದರೆ ಯಾವ ಕಾರಣಕ್ಕಾಗಿ ಹಿಂಸೆಯನ್ನು ಮಾಡಲು ಹೆದರಿ, ಅಹಿಂಸಾ ಮಾರ್ಗದಲ್ಲಿ ಹಿಟ್ಟಿನ ಕೋಳಿಯನ್ನು ಬಲಿ ಕೊಡಲು ಒಪ್ಪಿದರೆ ಕೊನೆಗೆ ಅಲ್ಲಿಯೂ ನಡೆದದ್ದು ಹಿಂಸೆಯೇ.

ಕಾವ್ಯದಲ್ಲಿ ಜೈನಧರ್ಮದ ಪ್ರತಿಪಾದನೆಯ ರೀತಿಯು ವಿಶಿಷ್ಟವಾದ ಒಂದು ವಿನ್ಯಾಸವನ್ನು ಪಡೆದುಕೊಂಡಿದೆ. ತನಗೆ ಎದುರಾದ ಅನುಭವದಿಂದ ದಿಗ್ಭ್ರಾಂತನಾದ ಯಶೋಧರನಿಗೆ ಆವರಣಗಳ ಪ್ರತೀಕವಾಗಿ ಬರುವವಳು ಅವನ ತಾಯಿ ಚಂದ್ರಮತಿ. ಯಶೋಧರ ಜೈನಮತಸ್ಥ. ಅಮೃತಮತಿ ಅಷ್ಟಾವಂಕರ ಪಾಪಕ್ಕೆ ತಕ್ಕ ಪ್ರಾಯಶ್ಚಿತ್ತವಾಗಬೇಕು. ಆದರೆ ಆ ಪ್ರಾಯಶ್ಚಿತ್ತದ ಹಿಂಸೆಯನ್ನು ಒಪ್ಪಿಕೊಳ್ಳಲಾರ. ರಾಜಮಾತೆ ಧರ್ಮದ ಹೆಸರಿನಲ್ಲಿ ಬಲಿಕೊಡಬೇಕು, ಅದು ಅಲಂಘನೀಯವಾದ ಗುರುವಚನ ಎಂದು ಮಗನನ್ನು ಒತ್ತಾಯಿಸುತ್ತಾಳೆ. ತಾಯಿ ಸೂಚಿಸುವ ಧರ್ಮವೆಂದು ಬಗೆದರೂ ಬಲಿ ಕೊಡುವುದರಿಂದ ಜೀವದಯೆಯೇ ಪರಮ ಮೌಲ್ಯವಾದ ಜೈನಧರ್ಮಕ್ಕೆ ಕೇಡು ಬಗೆದಂತೆ ಎಂದು ತಾಯಿಯನ್ನು ಪ್ರಶ್ನಿಸುವಲ್ಲಿ 'ಧರ್ಮ'ದ ಬಗ್ಗೆ ಇರುವ ಸ್ಪಷ್ಟತೆ ಅರ್ಥಗರ್ಭಿತವಾಗಿದೆ.

ಯಶೋಧರ ಜೈನಧರ್ಮದ ಹೆಸರಿನಲ್ಲಿ ಬಲಿಕೊಡುವಂತಹ ಹಿಂಸಾಕಾರ್ಯವನ್ನು ಒಪ್ಪಲಾರೆ ಎಂದಾಗ ರಾಜಮಾತೆ ಬಲಿ ಕೊಡಲೇಬೇಕೆಂದು ಪಟ್ಟು ಹಿಡಿಯುತ್ತಾಳೆ. ಬಲಿ ಕೊಡದಿದ್ದರೆ ತನ್ನನ್ನು ತಾನು ಆತ್ಮಬಲಿ ಮಾಡಿಕೊಳ್ಳುವುದಾಗಿ ರಾಜನನ್ನು ಇಕ್ಕಟ್ಟಿಗೆ ಸಿಕ್ಕಿಸುತ್ತಾಳೆ. ತಾನು ಸೂಚಿಸುತ್ತಿರುವುದು ಧರ್ಮ, ಗುರುವಚನಗಳಿಗೆ ಅನುಗುಣವಾಗಿ ಎಂದು ಹೇಳುತ್ತಾಳೆ. ಇಲ್ಲಿ ಚಂದ್ರಮತಿ ಬಲಿ ಕೊಡಬೇಕೆಂದು ನಿರ್ಧರಿಸುವುದು ಮುಂದೆ ಮಗನಿಗೆ ಯಾವುದೇ ತೊಂದರೆ ಬಾರದಿರಲೆಂದು. ಆದರೆ ಯಶೋಧರ ಬಲಿ ಕೊಡುವುದನ್ನು, ಹಿಂಸೆ ಮಾಡುವುದನ್ನು ಒಪ್ಪದಿರುವುದು ಮುಂದೆ ತನಗೆ ಯಾವುದೇ ಪಾಪದ ಹೊರೆ ಸಿಗಬಾರದೆಂದು. ಇಲ್ಲಿ ಹಿಂಸೆಯ ಪರಿಕಲ್ಪನೆ ಇಬ್ಬರ ಮನಸ್ಸಿನಲ್ಲಿ ಎರಡು ಭಿನ್ನರೀತಿಯಲ್ಲಿ ಇರುವುದನ್ನು ಗಮನಿಸಬಹುದು. ಹೇಗೆಂದರೆ ಚಂದ್ರಮತಿ ತಾನು ಮಾರಿದೇವತೆಗೆ ಪ್ರಾಣಬಲಿ ಕೊಡುವುದರಿಂದ ಮಗನ ಅನಿಷ್ಟಗಳೇನಿದ್ದರೂ ಆ ಬಲಿಯ ಮೂಲಕ ತೊಲಗಿ ಅವನಿಗೆ ಮಂಗಳವುಂಟಾಗಲೆಂದು. ಇಲ್ಲಿ ಕೆಟ್ಟದ್ದರಿಂದ ಒಳಿತಿನ ಕಡೆಗೆ ಚಲನೆ ಇದ್ದರೆ, ಯಶೋಧರ ಬಲಿ ಕೊಡುವುದರಿಂದ ಮುಂದಿನ ಜನ್ಮದಲ್ಲಿ ತನಗೆ ಪಾಪ

ಸುತ್ತಿಕೊಳ್ಳಬಾರದೆಂಬ ಭಯದಿಂದ ಬಲಿಗೆ ಒಪ್ಪುವುದಿಲ್ಲ. ಇಲ್ಲಿ ಒಳಿತಿನಿಂದ ಕೆಡುಕಿನ ಕಡೆಗೆ ಹೋಗಬಾರದೆಂಬ ಅರಿವು ಕೆಲಸ ಮಾಡುವುದನ್ನು ಗಮನಿಸಬಹುದು.

ಹಲವಾರು ಜನ್ಮಗಳನ್ನು ಪಡೆದ ನಂತರ ಯಶೋಧರ ಚಂದ್ರಮತಿಯರು ಹೊಲಗೇರಿಯಲ್ಲಿ ಕೋಳಿಗಳಾಗಿ ಹುಟ್ಟುತ್ತಾರೆ. ಅಕಂಪನ ಮುನಿಗಳ ಉಪದೇಶವನ್ನು ಕೇಳುತ್ತಾರೆ. "ಪ್ರಾಣಿಹಿಂಸೆ ಮಾಡಕೂಡದು, ತನ್ನಂತೆಯೇ ಬೇರೆಯವರನ್ನು ಕಾಣಬೇಕು, ದಯೆಯೇ ಧರ್ಮದ ಮೂಲ" ಎಂಬುದನ್ನು ಮನಸ್ಸಿನಲ್ಲಿ ವ್ರತವಾಗಿ ಸ್ವೀಕರಿಸುವ ಸಂಕಲ್ಪ ಮಾಡಿದ್ದರೂ ಯಶೋಮತಿಯ ಬಾಣಕ್ಕೆ ತುತ್ತಾಗಿ ಇವರು ಮತ್ತೆ ಶುಭಲಕ್ಷಣಗಳನ್ನು ಹೊಂದಿದ ಮಾನಜನ್ಮವನ್ನು ಪಡೆಯುತ್ತಾರೆ. ಇಲ್ಲಿ ಧರ್ಮಕ್ಕೆ ಎರಡು ಬಗೆದವರಲ್ಲ, ಧರ್ಮಕ್ಕೆ ಬೆಲೆ ಕೊಟ್ಟದ್ದರಿಂದ ಮುಂದೆ ಮಾನವ ಜನ್ಮ ತಾಳಿ ದೇವಗತಿಯನ್ನು ಪಡೆಯುವಂತಾಗುತ್ತದೆ.

ಮತ್ತೊಂದೆಡೆ ಬೇಟೆಯಲ್ಲಿ ಮಾಂಸ ದೊರಕದೇ ಬರುತ್ತಿದ್ದ ಯಶೋಮತಿ ಎದುರಿನಲ್ಲಿ ಬಸಿರಾಡನ್ನು ಕಂಡು ಬಾಣದಿಂದ ಹೊಡೆದನು. ತಾಯಿಯ ಜೀವಹೋಗಿ ಕರುಣೆಯಿಂದ ಅರಸ ಮರಿಯನ್ನು ಸಾಕಲು ಮಾದರನಿಗೆ ಕೊಡುತ್ತಾನೆ. ಇಲ್ಲಿ ಯಶೋಮತಿ ಆಡನ್ನು ಕೊಂದು ಹಿಂಸೆ ಮಾಡಿದರೂ ಮರಿಯ ಜೀವವನ್ನು ಉಳಿಸುವಲ್ಲಿ ಪ್ರಾಣಿದಯೆ ತೋರುವ ಮೂಲಕ ಅಹಿಂಸೆಯ ಪ್ರತಿಪಾದನೆಯನ್ನು ಗುರುತಿಸಬಹುದು.

ಅನಂತರದಲ್ಲಿ ಬರುವ ಎರಡನೆಯ ಯಶೋಧರನು ಜೀವದಯೆ ಎಂಬುದು ನಮ್ಮ ಮಾವನಾದ ಮಾರಿದತ್ತನು ಹೆಸರಾಗಿದ್ದ ನಾಡಿನಲ್ಲಿ ಇರಲಿಲ್ಲ. ಆದರೆ ತಪದಿಂದ ಅವರಿಗೂ ದೇವಗತಿಯಾಯಿತು. ಮುಂದೆ ಅಭಯರುಚಿ, ಅಭಯಮತಿಯರಿಗೂ ದೇವಗತಿಯಾಯಿತು ಎಂದು ಅರಿಯುತ್ತಾನೆ. ಇವೆಲ್ಲವೂ ಸಾಧ್ಯವಾದುದು ಕೇವಲ ಧರ್ಮದ ಕಾರಣದಿಂದಲೇ ಎಂದು ತಿಳಿದ ಮೇಲೆ ತಾನು ಆ ಧರ್ಮವನ್ನು ಮತ್ತೂ ಉನ್ನತ ಸ್ಥಿತಿಗೆ ಏರಿಸುವಲ್ಲಿ ನಿರ್ಧರಿಸುತ್ತಾನೆ.

ಇಡೀ ಕಾವ್ಯದಲ್ಲಿ ಜನ್ನನು ಧರ್ಮಪ್ರಜ್ಞೆಯನ್ನು ಮೂಡಿಸಲು ಉತ್ಪ್ರೇಕ್ಷೆ ತಂತ್ರವನ್ನು ಬಳಸಿಕೊಂಡಿದ್ದಾನೆ.

'ಎನಿತೊಳವಪಾಯ ಕೋಟಗಳನಿತರ್ಕಂ ಗೇಹಮಲ್ತೆದೇಹಂ, ಸಂಕಲ್ಪ ವಧೆಗಿನಿತಾಯ್ತು ದಿಟದಿನೇನೇನಾಗರ್, ಕೊಲಲುಂ ಪುಸಿಯಲು ಮಾಗದು, ದಯಾ ಮೂಲಂ ಧರ್ಮಂ, ನಿಟ್ಟೆಯೇ ಮಾನಸವಾಳ್, ನೋಡ ಪಾಪದ ಫಲಮಂ, ತನುವಿಂ ಜೀವಂ ಬೇರೆಂದು ಮಗನೆ ಭಾವಿಸಿ ನೋಡಾ, ತನ್ನಂತಿರೆ ಬಗೆವುದು ಪೆರರಂ ಜೀವದಯೆ ಧರ್ಮಮೆಂಬೀ ಭಾವನೆಯಂ ನೆರೆಯೆ ನಂಬುವುದೆ ಸಮ್ಯಕ್ತ್ವಂ'- ಮುಂತಾದ ವಾಕ್ಯಗಳಲ್ಲಿ ಕವಿ ಧರ್ಮರಹಸ್ಯವನ್ನು ಸಂಕ್ಷಿಪ್ತವಾಗಿ ಮನಮುಟ್ಟುವಂತೆ ಆತ್ಮೀಯ ಧಾಟಿಯಲ್ಲಿ ತಿಳಿಸಿಕೊಡುತ್ತಾನೆ.

೨. ಚಂದ್ರಮತಿ ಮತ್ತು ಯಶೋಧರರ ಬಲಿಯ ಸಂದರ್ಭದ ಕ್ರಿಯೆ ಮತ್ತು ಪ್ರತಿಕ್ರಿಯೆ :

ಜನ್ನ ರಚಿಸಿರುವ ಯಶೋಧರ ಚರಿತೆಯಲ್ಲಿ ಜೀವಹಿಂಸೆ ಮಾಡಲು ಸಂಕಲ್ಪ ಮಾಡಿದರೆ ಅನುಭವಿಸ ಬಹುದಾದ ಪಾಪ ಏನೆಂಬುದನ್ನು ಇಲ್ಲಿ ಗುರುತಿಸಬಹುದು. ಹಿಂಸೆಯನ್ನು ೪ ಬಗೆಗಳಾಗಿ ವರ್ಗೀಕರಿಸಲಾಗಿದೆ.

೧. ಸಂಕಲ್ಪ ೨. ವಿರೋಧಿ ೩. ಆರಂಭೀ ೪. ಉದ್ಯೋಗಿ

ಯಶೋಧರನಲ್ಲಿ ಸಂಕಲ್ಪ ಹಿಂಸೆಯನ್ನು ಗುರುತಿಸಬಹುದು.

ಯಶೋಧರ ಮಾಡಿದ್ದು ನಿಜವಾದ ಹಿಂಸೆಯಲ್ಲ. ಮುಂದೆ ಯಾವ ಅವಘಡ ಸಂಭವಿಸುತ್ತದೆ

ಎಂದು ತಿಳಿದು ಮಾಡಿದ ಕೇವಲ ಸಂಕಲ್ಪ ಹಿಂಸೆ. ಸಂಕಲ್ಪ ಹಿಂಸೆಯೂ ಮಹಾಪಾಪವೆಂದು ಜೈನಧರ್ಮ ತಿಳಿಸುತ್ತದೆ. ಸಂಕಲ್ಪ ಪಾಪಕ್ಕೂ ಇಲ್ಲಿ ಪ್ರಾಯಶ್ಚಿತ್ತ ಮಾಡಿಕೊಂಡ ಜೀವ ಉದ್ಧಾರದ ಗತಿಯನ್ನು ಕಾಣಬಹುದು. ಹೇಗೆಂದರೆ :

ತನ್ನ ಮಡದಿ ಅಮೃತಮತಿ ಅಷ್ಟಾವಂಕನಲ್ಲಿ ಅನುರಕ್ತಳಾದುದನ್ನು ಕಣ್ಣಾರೆ ಕಂಡ ಯಶೋಧರ ಮಾನಸಿಕ ನೋವನ್ನು ತಡೆಯಲಾರದೆ ಅಪರೋಕ್ಷವಾಗಿ ತಾಯಿಯ ಮುಂದೆ "ಪೊಂದಾವರೆಗೊಳದಂಚೆ ಕಟುಲ್ತಾವಲ್ಗೊಳದೊಳಗೆ ನಲಿವ" ಕನಸನ್ನು ಕಂಡುದಾಗಿ ಹೇಳಿ ತನ್ನ ಯಾತನೆಯನ್ನು ಸೂಚಿಸಿದರೆ, ಈ ಕೆಟ್ಟ ಕನಸಿನ ದೋಷ ಪರಿಹಾರಕ್ಕೆಂದು ದೇವಿಯ ಮುಂದೆ ದಾವಣಿ ಕುರಿಯನ್ನು ಬಲಿಕೊಡಬೇಕೆಂದು ಹೇಳಿದಾಗ ಶಾಂತಮನಸ್ಕನಾದ ರಾಜ ಹೇಸಿ 'ಶಾಂತಂ ಪಾಪಂ' ಎಂದು ಕಿವಿಮುಚ್ಚಿಕೊಂಡ. ಅಂದರೆ ಇಲ್ಲಿ ಯಶೋಧರನಿಗೆ ಹಿಂಸಾಚಾರ ಇಷ್ಟವಿರಲಿಲ್ಲ.

ಜೀವದಯೆ ಜೈನಧರ್ಮ
ಜೀವಹಿತಂ ನಂಬುವವರ್ಗೆ ಹಿಂಸೆಯಮೋಘಂ
ಭಾವಿತಮೆ ತಪ್ಪಿ ನುಡಿದಿರ್
ಕಾವರೆ ಕಣೆಗೊಳ್ಳೊಡಚ್ಚೆ ಬಾರಿಪರೊಳರೇ (೩ನೇ ಅವತಾರ ೧೯)

ಇಲ್ಲಿ ಯಶೋಧರ ಜೈನಧರ್ಮದ ಮಹತ್ವವನ್ನು ಹೇಳುತ್ತಾನೆ. ಹಾಗೂ ಹಿಟ್ಟಿನ ಕೋಳಿಯನ್ನಾದರೂ ಬಲಿಕೊಡಬೇಕೆಂದು ತಾಯಿ ಒತ್ತಾಯ ಮಾಡುತ್ತಾಳೆ. ನನ್ನ ಮಾತನ್ನು ಮೀರಿದ ಪಕ್ಷದಲ್ಲಿ ಆ ದೇವಿಗೆ ಇಂದು ನನ್ನನ್ನೇ ಬಲಿಕೊಟ್ಟಾದರೂ ಈ ಕೇಡನ್ನು ನಿವಾರಿಸದೆ ಬಿಡುವುದಿಲ್ಲ ಎಂದು ಹೇಳುತ್ತಾಳೆ. "ಚಂದ್ರಮತಿ ಮೂಢನಂಬಿಕೆಗಳಲ್ಲಿ ಮುಳುಗಿದ ಸಾಮಾನ್ಯ ಸ್ತ್ರೀ. ಭಾವೀ ದುರಂತ ನಾಟಕದ ರಂಗಪೂಜೆ ಅವಳಿಂದಲೇ. ತಾಯಿ ಮಗ ತಮ್ಮ ಪಾಪಕ್ಕೆ ತಕ್ಕ ದೀರ್ಘ ತೀವ್ರ ಪ್ರಾಯಶ್ಚಿತ್ತವನ್ನನುಭವಿಸಿ ಕಡೆಗೆ ಉದ್ಧಾರವನ್ನು ಕಂಡುಕೊಂಡರು."[೬]

ಕೊನೆಗೂ ತಾಯಿಯ ಮೇಲಿನ ಪ್ರೀತಿಯಿಂದ ಒಲ್ಲದ ಮನಸ್ಸಿನಿಂದ
"ಭಾವನೆಯಿಂದ ಮಪ್ಪುದಾಸ್ರವ
ಮೆನಗಿನ್ನೆಂತಪ ಪಾಪಮಿದಿರ್ವಂದಪ್ಪುದೋ" ಎಂದುಕೊಳ್ಳುತ್ತಾನೆ.

ಇಲ್ಲಿ ಕವಿ, ಯಶೋಧರನ ಮನಸ್ಸಿನ ಆಂದೋಳನವನ್ನು ವರ್ಣಿಸುತ್ತಾನೆ. ಅಷ್ಟಾವಂಕ ಅಮೃತಮತಿಯರ ಕೊಲೆ, ತಾಯಿ ಮೊದಲು ಸೂಚಿಸಿದ ನೂರು ಕುರಿಗಳ ಬಲಿಗಳ ವ್ಯಕ್ತ ಹಿಂಸೆಗೆ ಹೇಸಿದ ರಾಜ ಈ ಅವ್ಯಕ್ತ ಬಲಿಗೆ ಒಪ್ಪಿಕೊಳ್ಳಬೇಕಾಗುತ್ತದೆ. ಹಿಟ್ಟಿನ ಕೋಳಿಯು ಜಡವೆಂದು ಭಾವಿಸಿ ಬಲಿ ಕೊಟ್ಟಾಗ ಪಾಪಗಳನ್ನು ಕೂಗಿ ಕರೆಯುವಂತೆ ಅದರಲ್ಲಿ ಸೇರಿಕೊಂಡಿದ್ದ ಬೆಂತರವೊಂದು ಏಟಿಗೆ ಸಿಲುಕಿ ಕೂಗಿ ಪ್ರಾಣಬಿಟ್ಟಿತು. ಜೀವಹಿಂಸೆಯಾಯಿತೆಂದು ಯಶೋಧರ ದುಃಖಿಸಿ ಪಶ್ಚಾತ್ತಾಪ ಪಟ್ಟು ವಧೆ ಮಾಡಬಾರದೆಂಬ ನಿರ್ಣಯವೇ ಮುಂದೆ ಯಶೋಧರನ ಸಂಕಲ್ಪ ವ್ಯರ್ಥವಾಯಿತು.

"ಏಕೆ ಕನಸೆಂದು ನುಡಿದೆನಿ
ದೇಕಂಬಿಕೆ ಬಲಿಯನೊಡ್ಡಿಯೊಳ್ ಕೂಗಿದುದೇ
ಕೀ ಕೃತಕಾಮಚೂಡನಿ

ದೇಕಂದಾರಱಿವರಯ್ಯ ವಿಧಿವಿಳಸನಮಂ" (೩ನೇ ಅವತಾರ ೨೭)

ಯಶೋಧರನು ವಿಧಿವಿಲಾಸದಿಂದಲೇ ಈ ರೀತಿಯಾಯಿತೆಂದು ವ್ಯಥೆಪಟ್ಟನು. ಮುಂದೆ

ಅಮೃತಮತಿಯೆಂಬ ಪಾತಕಿ

ಯ ಮಾಯೆ ಬನಮಾಯ್ತು ಚಂದ್ರಮತಿ ಮಾತೆಯ ಮಾ

ತೆಮಗೆ ಬಲೆಯಾಯ್ತು ಹಿಂಸನ

ಮಮೋಘಶರಮಾಯ್ತು ಕೆಡೆದುದಾತ್ಮಕುರಂಗಂ

ಹೀಗೆ ಸಂಕಲ್ಪ ಹಿಂಸೆಯಿಂದ ಪಶ್ಚಾತ್ತಾಪ ಪಟ್ಟು, ವೈರಾಗ್ಯ ಹೊಂದಿ ತಪೋವನಕ್ಕೆ ಹೋಗಲು ನಿರ್ಧರಿಸಿದ ಯಶೋಧರ ಮತ್ತು ಚಂದ್ರಮತಿಯರಿಗೆ ಅಮೃತಮತಿಯು ಆರೋಗಣೆಯ ನೆಪವೊಡ್ಡಿ ಅಲ್ಲಿ ವಿಷದ ಲಡ್ಡುಗೆಯನ್ನು ಕೊಟ್ಟು ಸಾಯಿಸುತ್ತಾಳೆ. ಯಶೋಧರ ಮತ್ತು ಚಂದ್ರಮತಿಯರು ಹಿಂಸೆ ಮಾಡಲು ಸಂಕಲ್ಪಿಸಿದ ನಿಮಿತ್ತ ಏಳು ಜನ್ಮಗಳಲ್ಲಿ ಪ್ರಾಣಿಗಳಾಗಿ ಹುಟ್ಟುತ್ತಾರೆ. ಯಶೋಧರ ತನ್ನ ಜೀವದ ಹತಾಶೆಯನ್ನು ಕನಸಿನ ಚಿತ್ರಣದ ಮೂಲಕ ತಾಯಿಗೆ ಹೇಳುವಲ್ಲಿ ಯಶೋಧರ ಮತ್ತು ಅವನ ತಾಯಿ ಹಿಟ್ಟಿನ ಕೋಳಿಯನ್ನು ಬಲಿ ಕೊಡುವ ಕ್ರಿಯೆಯು ಮಾನಸಿಕ ಹಿಂಸೆಗೆ ದಾರಿ ಮಾಡಿಕೊಟ್ಟದ್ದಲ್ಲದೇ ಇದರ ಪ್ರಕ್ರಿಯೆಯು ಮುಂದೆ ಏಳು ಜನ್ಮಗಳಲ್ಲಿ ನಾನಾ ಕಷ್ಟ, ಹಿಂಸೆಗಳನ್ನನುಭವಿಸಿ ಮುಂದೆ ಹಿಂಸೆಯಿಂದ ಮುಕ್ತಿ ಪಡೆದು ಮಾನವರಾಗಿ ಹುಟ್ಟುವುದಕ್ಕೆ ಕಾರಣವಾಗುತ್ತದೆ.

ಮೊದಲನೇ ಜನ್ಮದಲ್ಲಿ ಮಗ ವಿಂಧ್ಯೆಯಲ್ಲಿ ನವಿಲಾಗಿ, ತಾಯಿ ಕರಹಟದಲ್ಲಿ ನಾಯಿಯಾಗಿ ಹುಟ್ಟಿ, ನಂತರ ತಮ್ಮ ಅರಮನೆಯನ್ನೇ ಸೇರುತ್ತಾರೆ. ಹಿಂದೆ ಯಾವ ಅರಮನೆಯ ಅರಸೊತ್ತಿಗೆಯಲ್ಲಿ ಮೆರೆದಿದ್ದರೋ ಮತ್ತೆ ಅದೇ ಅರಮನೆಯಲ್ಲಿ ಎಂಜಲನ್ನು ತಿಂದು ಬದುಕುವಂತಾಯಿತು. 'ಇದೊಂದು ಪಾಪದ ಫಲ' ಎಂದು ಗಿರಡ್ಡಿ ಗೋವಿಂದ ಅಭಿಪ್ರಾಯಪಟ್ಟಿದ್ದಾರೆ.[೭] ಯಶೋಧರ ನವಿಲಾಗಿ, ಅಮೃತಮತಿ ಬದಗನೊಡನೆ ಇರುವುದನ್ನು ಕಂಡು ರೋಷದಿಂದ, ಪೂರ್ವಜನ್ಮದ ಕೋಪದಿಂದ ಅಷ್ಟಾವಂಕನ ಕಣ್ಣನ್ನು ಕುಕ್ಕುತ್ತಾನೆ. ಪಗಡೆಯಾಡುತ್ತಿದ್ದ ಯಶೋಮತಿ ನಾಯಿಗೆ 'ಕೊಳ್' ಎಂದಾಗ ನಾಯಿ ನವಿಲನ್ನು ತಿಂದಿತೆಂದು ಅರಸ ಅದರ ನೆತ್ತಿಯನ್ನು ಪಗಡೆಮಣೆಯಿಂದ ಹೊಡೆಯುತ್ತಾನೆ. ಹೀಗೆ ನಾಯಿ ನವಿಲುಗಳೆರಡೂ ಸಾಯುತ್ತವೆ. ತಾವು ಮಾಡಿದ ಹಿಟ್ಟಿನ ಕೋಳಿಯ ಬಲಿಯ ಪ್ರಭಾವದಿಂದ ಇಬ್ಬರೂ ಹಿಂಸೆಯನ್ನು ಅನುಭವಿಸುತ್ತಾರೆ.

ಎರಡನೇ ಜನ್ಮದಲ್ಲಿ ತಾಯಿ ಮಗ ಹಾವು - ಹಂದಿಯಾಗಿ ಹುಟ್ಟಿ, ಹಂದಿ ಹಾವನ್ನು ತಿಂದು ಸೇಡನ್ನು ತೀರಿಸಿಕೊಂಡಿತು.

ಮೂರನೇ ಜನ್ಮದಲ್ಲಿ ಯಶೋಧರ ಮೀನಾಗಿ, ಚಂದ್ರಮತಿ ಮೊಸಳೆಯಾಗಿ ಹುಟ್ಟುತ್ತಾರೆ. ಯಶೋಮತಿ ಅವೆರಡನ್ನೂ ಕೊಂದು ಮೀನಿನ ರೂಪದಲ್ಲಿರುವ ಯಶೋಧರನ ಮಾಂಸದಿಂದ ಅವನಿಗೇನೇ ಜೀವಶ್ರಾದ್ಧವನ್ನು ಮಾಡುತ್ತಾನೆ. ಇದು ವಿಧಿಯ ವಿಕಟ ವ್ಯಂಗ್ಯ ಎಂದು ಗಿರಡ್ಡಿ ಗೋವಿಂದ ಅಭಿಪ್ರಾಯ ಪಡುತ್ತಾರೆ.[೮] ಇಲ್ಲಿ ಯಶೋಧರ ಮಾಡಿದ ಹಿಂಸೆಗೆ ಆತನೇ ನೋವನ್ನು ಅನುಭವಿಸುವ ಪ್ರಕ್ರಿಯೆಯನ್ನು ಗುರುತಿಸಬಹುದು.

ನಾಲ್ಕನೇ ಜನ್ಮದಲ್ಲಿ ಹೊಲಗೇರಿಯಲ್ಲಿ ತಾಯಿ ಆಡಾಗಿ, ಮಗ ಆಡಿನಲ್ಲಿ ಹೋತವಾಗಿ ಹುಟ್ಟುತ್ತಾರೆ.

ಇಲ್ಲಿ ತಾಯಿ ಮಗನ ಜನ್ಮಜನ್ಮಾಂತರಗಳ ಸಂಬಂಧದ ಜೀವಂತಿಕೆಯ ಕುರುಹನ್ನು ಗುರುತಿಸಬಹುದು. ಹೇಗೆಂದರೆ ಅದುವರೆಗೆ ಇದುವರೆಗೆ ಇವರು ಪ್ರಾಣಿಗಳಲ್ಲಿ ಬೇರೆ ಬೇರೆ ಪ್ರಾಣಿಗಳಾಗಿ ಜನಿಸಿ ನಂತರ ಒಟ್ಟೊಟ್ಟಿಗಿರುತ್ತಾರೆ. ಆದರೆ ಐದನೇ ಜನ್ಮದಲ್ಲಿ ಒಂದೇ ಜಾತಿಗೆ ಸೇರಿದ ಪ್ರಾಣಿಗಳಾಗಿ ಹುಟ್ಟುತ್ತಾರೆ. ಆದರೆ ಪುನಃ ಅವರು ಬೇರೆ ಬೇರೆ ವರ್ಗಗಳಿಗೆ ಸೇರಿದ ಪ್ರಾಣಿಗಳಾಗಿ ಜನಿಸುವ ಕ್ರಿಯೆ ಪರಿವರ್ತನೆಯಾಗಿ ಮತ್ತೆ ಕೊನೆಯ ಜನ್ಮದಲ್ಲಿ ಪುನಃ ಮಾನವ ಜನ್ಮವನ್ನು ಪಡೆದು ಒಟ್ಟಿಗಿರುವುದನ್ನು ಗಮನಿಸಬಹುದು.

ಐದನೇ ಜನ್ಮದಲ್ಲಿ ತಾಯಿ ಕಳಿಂಗದಲ್ಲಿ ಕೋಣವಾಗಿ, ಮಗ ಹೋತವಾಗಿಯೇ ಹುಟ್ಟುತ್ತಾನೆ. ಬಾಯಾರಿದ ಕೋಣ ಸಿಂಪ್ರಾ ನದಿಯಲ್ಲಿ ನೀರನ್ನು ಕುಡಿದು ವಿಶ್ರಾಂತಿ ಪಡೆಯುತ್ತಿದ್ದ ಸಂದರ್ಭದಲ್ಲಿ ರಾಜನ ಕುದುರೆ ನೀರು ಕುಡಿಯಲು ಬಂದಿತು. ಈ ಸಂದರ್ಭದಲ್ಲಿ ಕೋಣ ಕುದುರೆಯನ್ನು ತನ್ನ ಎರಡೂ ಕೊಂಬುಗಳಿಗೆ ಸಿಕ್ಕಿಸಿ ಸೆಳೆದು ಕೊಂದು ಹಾಕಿತು. 'ಕೋಣಗಳ ಹೋರಾಟ ಕಡೆಯಲ್ಲಿ ಗಿಡಕ್ಕೆ ಮೃತ್ಯು' ಎಂಬಂತೆ ರಾಜ ಕೋಣವನ್ನು ಹಿಡಿತರಿಸಿ ನಾನಾ ಬಗೆಯ ಚಿತ್ರಹಿಂಸೆಯಿಂದ ಕೊಲ್ಲಿಸಿದನು.

ಸೋಣರಿಂ ಮುಡುಪಿಂದಂ ಪಿಂ
ತಣ ಮುಂತಣ ಕಾಲ್ಗಳಲ್ಲಿ ಬಿಟ್ಟಿಸಿ ದಸಿಯಂ
ನೆಣಮುರ್ಚೆ ಬೆಂಕಿಯಿಂ ಕೆಳ
ಗಣ ಮೆಯ್ಯಿಂದುರುಪಿ ಬರಿಯ ಬಾಡಂ ತೆಗೆದಂ (೨ನೇ ಅವತಾರ ೬೯)

ಅಂದರೆ ಹಿಂದಣ ಮುಂದಣ ಕಾಲುಗಳಿಗೆ ಗೂಟವನ್ನು ನಾಟಿಸಿ ಅಡಿಮೇಲಾಗಿ ತೂಗಾಡಿಸಿ, ಕೆಳಬದಿಯಿಂದ ಬೆಂಕಿಯನ್ನು ಕೋಣದ ಹೆಗಲಿನ ಭಾಗಕ್ಕೆ ಹಿಡಿದು ಅಷ್ಟು ಭಾಗದಿಂದ ಮಾತ್ರ ಮಾಂಸವನ್ನು ತೆಗೆಯಲಾಯಿತು. ಅದರ ಹಿಂಬದಿಯಿಂದಲೂ ಮುಂಬದಿಯಿಂದಲೂ ಸಾಸಿವೆ, ಮೆಣಸು, ಉಪ್ಪು ತುರುಕಿ ಅದನ್ನು ಬೇಯಿಸಿ ಆ ಬೆಂದ ಮಾಂಸವನ್ನು ಯಶೋಮತಿ ಅಮೃತಮತಿಗೆ ಕಳುಹಿಸಿದನು. ಈ ಸಂದರ್ಭದಲ್ಲಿ ಉಗ್ರಹಿಂಸೆಗೆ ಗುರಿಯಾದ ಚಂದ್ರಮತಿಯು ಹಿಂದೆ ಮಾಡಿದ ಪಾಪದ ಕಾರಣದ ಜೊತೆಗೆ ಮಗನ ಪಾಪಕ್ಕೂ ಪ್ರೇರಣೆ ನೀಡಿದ್ದರ ಫಲವಾಗಿ ಈ ರೀತಿಯ ಚಿತ್ರಹಿಂಸೆಗೆ ತುತ್ತಾಗುತ್ತಾಳೆ.

ಆರನೇ ಜನ್ಮದಲ್ಲಿ ಇಬ್ಬರೂ ಉಜ್ಜಯಿನಿಯ ಹೊಲಗೇರಿಯಲ್ಲಿ ಕೋಳಿಗಳಾಗುತ್ತಾರೆ.

" ಅದಱಿಂ ತನ್ನಂತಿರೆ ಬಗೆ
ವುದು ಪೆಱರಂ, ಪ್ರಾಣಹಿಂಸೆಯಂ ಮಾಡಲ್ವೇ
ಡ, ದಯಾಮೂಲಂ ಧರ್ಮಂ" (೪ನೇ ಅವತಾರ ೩೫)

ಪ್ರಾಣಿಹಿಂಸೆ ಮಾಡಕೂಡದು ತನ್ನಂತೆ ಬೇರೆಯವರನ್ನು ಕಾಣಬೇಕು, ದಯವೇ ಧರ್ಮದ ಮೂಲ ಎಂಬ ಅಕಂಪನ ಮುನಿಗಳ ಉಪದೇಶವನ್ನು ಕೇಳುತ್ತಾರೆ. ಇದನ್ನು ಕೇಳಿದ ಕೋಳಿಗಳು ಹಿಂದಿನ ಜನ್ಮವನ್ನು ನೆನೆದುಕೊಂಡು, ಪರಮ ಸಂತೋಷದಿಂದ ಅಹಿಂಸಾವ್ರತವನ್ನು ಹೃದಯದಲ್ಲೇ ತಾಳಿದವು.

ಕಱಲೆ ನಿಜಹರ್ಷಭಾಷ್ಪದ
ಮಱೆವನಿ ಧರ್ಮಾನುರಾಗ ಮೇಘಧ್ವನಿವೊಲ್
ಮೊಱಗುವಿನಮೆಱಂಕೆಯ ಪೊಯ್
ಘುಱಿಲನೆ ಕೂಗಿದುವು ಕೇಳ್ದನಿತ್ತ ನೃಪಾಲಂ (೪ನೇ ಅವತಾರ ೩೭)

ಅಂದರೆ ಆನಂದ ಭಾಷ್ಪದ ಮಳೆಹನಿ ಉದುರಲು, ಧರ್ಮಪ್ರೀತಿಯೆಂಬ ಮೋಡ ಮೊಳಗಿದಂತೆ ರೆಕ್ಕೆಗಳು ಬಡಿಯಲು, ಕೋಳಿಗಳು ಕಲೆದುವು.

ಇಲ್ಲಿ ಅವುಗಳು ತಾವು ಹಿಂಸೆಯಿಂದ ಮುಕ್ತಿ ಪಡೆದೆವು ಎಂಬ ಸಂದೇಶವನ್ನು ಸಾರುತ್ತವೆ. ಮನಸ್ಸಿನಲ್ಲಿ ಅಹಿಂಸೆಯನ್ನು ವ್ರತವಾಗಿ ಸ್ವೀಕರಿಸುವ ಸಂಕಲ್ಪ ಮಾಡಿದ್ದರಿಂದಲೇ ಯಶೋಮತಿಯ ಬಾಣಕ್ಕೆ ತುತ್ತಾಗಿ, ತಮ್ಮ ಭವಾವಳಿಯ ಬಂಧದಿಂದ ಮುಕ್ತರಾದರು.

ಹೀಗೆ ಹಿಟ್ಟಿನ ಹುಂಜವನ್ನು ಬಲಿ ಕೊಡುವ ಸಂಕಲ್ಪ ಮಾತ್ರದ ಪಾಪದ ಫಲವಾಗಿ ಯಶೋಧರ ಮತ್ತು ಚಂದ್ರಮತಿಯರಲ್ಲಿ ಯಶೋಧರ ಸತ್ತು ಮುಂದಿನ ಭವಾವಳಿಗಳಲ್ಲಿ ನವಿಲು, ಮುಳ್ಳುಹಂದಿ, ಮೀನು, ಹೋತ, ಕೋಳಿಗಳಾಗಿ ನಂತರ ಏಳನೇ ಜನ್ಮದಲ್ಲಿ ಗುರುವಚನದ ಕೃಪೆಯಿಂದ ಅಭಯರುಚಿಯಾಗಿ ಹುಟ್ಟಿದರೆ ; ಚಂದ್ರಮತಿ ನಾಯಿ, ಸರ್ಪ, ಮೊಸಳೆ, ಆಡು, ಕೋಣ, ಕೋಳಿಗಳಾಗಿ ನಂತರ ಏಳನೇ ಜನ್ಮದಲ್ಲಿ ಅಭಯಮತಿಯಾಗಿ ಹುಟ್ಟುತ್ತಾಳೆ. ಹೀಗೆ ಗುರುವಚನದ ಪ್ರಭಾವದಿಂದ ಎಳೆಯ ವಯಸ್ಸಿನಲ್ಲಿ ದೀಕ್ಷೆ ಪಡೆದು ಸುದತ್ತಾಚಾರ್ಯರ ಶಿಷ್ಯರಾಗುತ್ತಾರೆ. ಹೀಗೆ ಕೇವಲ ಸಂಕಲ್ಪ ವಧೆಯಿಂದ ನೀಚಜನ್ಮಗಳನ್ನು ತಾಳಬೇಕಾದ ಇವರು ನಂತರ, ವ್ರತ ಸಂಕಲ್ಪದಿಂದ ಮಾನವರಾಗಿ ಹುಟ್ಟಿದರು.

ಯಶೋಧರನಿಗೆ ಹಿಟ್ಟಿನ ಕೋಳಿ ಬಲಿಕೊಡಲು ರಾಜಮಾತೆ ಸೂಚಿಸಿದಾಗ "ಏಳು ಭವದ ಕೇಡಡಸುವ ಕಿಟ್ಟುಡಿಯಂ ನುಡಿದಳು : ಭವಾಂತರದಲ್ಲಿ ನರಳಿದ ಯಶೋಧರ 'ಸಂಕಲ್ಪ ಹಿಂಸೆಯೊಂದಱೊಳಾಂ ಕಂಡೆಂ ಭವದ ದುಃಖಮುಂಡೆಂ' ಎಂದು ಹೇಳುತ್ತಾನೆ.

ಯಶೋಧರ, ಚಂದ್ರಮತಿ ಪಾತ್ರಗಳ ಮೂಲಕ ಕೊಲೆ, ಬಲಿ, ಹಿಂಸೆಯನ್ನು ಮಾಡಿದರೆ ಏಳು ಜನ್ಮಗಳಲ್ಲಿ ನಾನಾ ಬಗೆಯ ಕಷ್ಟಗಳನ್ನನುಭವಿಸಿ, ಅದರಿಂದಾಗುವ ಕಷ್ಟ ಏನೆಂಬುದನ್ನು ಕಲ್ಪಿಸಿಕೊಂಡು ಹಿಂಸಾಭಾವವನ್ನು ನಿಲ್ಲಿಸುವ ಪ್ರಯತ್ನವನ್ನು, ಆಶಯವನ್ನು ಕಾಣಬಹುದು.

ಹೀಗೆ ಯಶೋಧರ, ಚಂದ್ರಮತಿ ಭವಾವಳಿಯಲ್ಲಿ ದುಃಖ ನೋವುಗಳನ್ನು ಅನುಭವಿಸಿ, ಪ್ರಾಯಶ್ಚಿತ್ತವನ್ನು ಹೊಂದಿ ಮತ್ತೆ ಹಿಂಸೆಯಿಂದ ದೂರವಾಗಿ ಶುದ್ಧ ಮನಸ್ಸನ್ನು, ಧಾರ್ಮಿಕ ಬುದ್ಧಿಯುಳ್ಳ ಮನಸ್ಸನ್ನು ಪಡೆದರು.

ಮಾನವರು ಅಹಿಂಸೆಯ ನಿಯಮಾನುಸಾರ ನಡೆದುಕೊಂಡರೆ ಅವರು ಇಹಲೋಕ, ಪರಲೋಕಗಳಲ್ಲಿ ಚಿರಸುಖಿಗಳಾಗುತ್ತಾರೆ. ಇವು ಯಾರಲ್ಲಿ ಮಂಕಾಗುತ್ತದೋ ಅವರು ಜನ್ಮಜನ್ಮದಲ್ಲೂ ದುಃಖಿಗಳಾಗುತ್ತಾರೆ ಎಂದು ಕವಿ ಸ್ವತಃ ಹೇಳುತ್ತಾರೆ.

ಇಲ್ಲಿ ಜನ್ನ ನಿರ್ಮಿಸಿದ ಪ್ರತಿಮೆಗಳೆಲ್ಲವೂ ಪ್ರಾಣಿ ಪ್ರಪಂಚದಿಂದ ಆರಿಸಲಾಗಿದೆ. ಇಲ್ಲಿ ಮಾನವ ಜೀವಿಗಳೆಲ್ಲ ಪ್ರಾಣಿಗಳಂತೆ ನಿಸ್ಸಹಾಯಕವಾಗಿ ದೈವದ ಆಟದಲ್ಲಿ ಬೇಟೆಯ ಬಲಿಗಳಾಗಿವೆ.[6]

೩. ಚಂಡಮಾರಿ ಮತ್ತು ಮಾರಿದತ್ತರ ಪ್ರಸಂಗ : ಹಿಂಸೆಯಿಂದ - ಅಹಿಂಸೆಯೆಡೆಗೆ

ಅಯೋಧ್ಯೆ ದೇಶಕ್ಕೆ ರಾಜಪುರ ಎಂಬ ರಾಜಧಾನಿ. ಈ ಪಟ್ಟಣ ದೊಡ್ಡ ಸಂಪತ್ತಿನ ಆಧಾರ, ತ್ಯಾಗಭೋಗಗಳ ಆಗರ, ಎಲ್ಲ ಸುಖದ ತವರು ಎನಿಸಿದ್ದ ಇದನ್ನು ಮಾರಿದತ್ತ ಎಂಬ ದೊರೆ ಆಳುತ್ತಿದ್ದ. ಈ ನಗರದ ದಕ್ಷಿಣ ದಿಕ್ಕಿನಲ್ಲಿ

"ಆ ಪೊತ್ತುಮನೇಕ ಜೀವಹತಿ ತನಗೆ ಸುಖೋ

ದ್ವೀಪನಮೆನಿಸುವ ಪಾಪಕ

ಳಾ ಪಂಡಿತೆ ಚಂಡಮಾರಿ ದೇವತೆಯಿರ್ಪಳ್ (೧ನೇ ಅವತಾರ) ಹೀಗೆ ಈ ಊರಲ್ಲಿ ಒಂದು ಕಡೆ ಜನರು ಸುಖಜೀವನವನ್ನು ನಡೆಸುತ್ತಿದ್ದರೆ, ಇನ್ನೊಂದು ಕಡೆ ಇದಕ್ಕೆ ವಿರುದ್ಧವಾಗಿ ಮಾರಿದೇವತೆಯು ಮಾರಿ ಜಾತ್ರೆ ಹಿಂಸೆಯ ಮೂಲಕ ಜನರನ್ನು ಸುಖವಾಗಿರಿಸುವ ಜವಾಬ್ದಾರಿಯನ್ನು ಹೊಂದಿದಳು.

ವಸಂತ ಮಾಸದಲ್ಲಿ ಮಾರಿದತ್ತನೂ, ಪುರಜನರೂ ತಮಗೆ ಹಾಗೂ ಚಂಡಮಾರಿಗೆ ಸಂತೋಷ ವನ್ನುಂಟು ಮಾಡುವುದಕ್ಕಾಗಿ ಜಾತ್ರೆ ಸೇರುತ್ತಾರೆ.

ಇತ್ತ ಮಾರಿದತ್ತ ತಳಾರನಿಗೆ ಈ ರೀತಿ ಹೇಳುತ್ತಾನೆ :

ಗೆಂದಂ ನೀಂ ಬರಿಸು ಮನುಜಯುಗಮಂ ಮುನ್ನಂ

ಕೊಂದರ್ಚಿಸುವೆಂ ಪೂಜೆಯೊ

ಳೆಂದಿನ ಪರಿ ತಪ್ಪೆ ದೇವಿ ತಪ್ಪದೆ ಮಾಣಳ್ (೧ನೇ ಅವತಾರ ೪೧)

ಅಂದರೆ ಮನುಷ್ಯ ಜೋಡಿಯನ್ನು ನೀನು ಬರಮಾಡು. ಮೊದಲು ಅವರನ್ನು ನಾನು ಬಲಿಕೊಟ್ಟು, ದೇವಿಯನ್ನು ಅರ್ಚಿಸುತ್ತೇನೆ. ಪೂಜೆಯ ಪದ್ಧತಿ ತಪ್ಪಿದರೆ ದೇವಿ ಕೆಡುಕು ಮಾಡುತ್ತಾಳೆ ಎಂದು ಹೇಳಿ, ಮಾರಿದತ್ತ ಮಾರಿ ಜಾತ್ರೆಗೆ ಸಿದ್ಧತೆಯನ್ನು ನಡೆಸಿದರೆ, ಇತ್ತ ಸುದಾಚಾರ್ಯರೆಂಬ ಜೈನಮುನಿಗಳಿಂದ ಅಪ್ಪಣೆ ಪಡೆದು ಅವರ ಶಿಷ್ಯರಾದ ಅಭಯರುಚಿ, ಅಭಯಮತಿಯರೆಂಬ ಚಿಕ್ಕವಯಸ್ಸಿನ ಅಣ್ಣತಂಗಿಯರು ಚರಿಗೆಗೆಂದು ಹೋಗುತ್ತಿರುತ್ತಾರೆ. ಅವರನ್ನು

"ತರುಣ ವನಹರಿಣಯುಗಮಂ

ತರಕ್ಷು ಪಿಡಿವಂತೆ ಚಂಡಕರ್ಮಂ ಪಿಡಿದಂ" (೧ನೇ ಅವತಾರ ೪೭)

ಮಾರಿಜಾತ್ರೆ ನಡೆಯುತ್ತಿರುವ ಚಂಡಮಾರಿ ದೇವತೆಯ ಗುಡಿಯ ಆವರಣದಲ್ಲಿ ಅತೀ ಭೀಭತ್ಸವಾದ ಹಿಂಸಾಚರಣೆ ಕಂಡು ಇವರಿಬ್ಬರೂ ನಿರ್ವಿಕಾರ ಚಿತ್ತರಾಗುತ್ತಾರೆ. ತಮಗೆ ಸಾವು ಈ ಬಲಿಯ ರೂಪದಲ್ಲೇ ಬರುವುದಾದರೆ ಬರಲಿ, "ನಿಯತಿಯನಾರ್ ಮೀರಿದಪರ್" ಎಂದು ಅಭಯರುಚಿ ತನ್ನ ತಂಗಿಗೆ ಹೇಳುತ್ತಾನೆ.

ಆಗ ತಂಗಿ ಅಣ್ಣನ ಮಾತನ್ನು ಮನಸ್ಸಿನಲ್ಲಿ ಗ್ರಹಿಸಿ ಹೀಗೆ ನುಡಿಯುತ್ತಾಳೆ."ಮಾಡಿದುದಂ ನಾವುಣ್ಣದೆ ಪೋಕುಮೆ ಭಯಮೇಕಣ್ಣ" - ಹೀಗೆ ಒಬ್ಬರನ್ನೊಬ್ಬರು ಸಮಾಧಾನಗೊಳಿಸುತ್ತಾ ಮಾರಿಯ ಮನೆಯನ್ನು ಹೊಕ್ಕರು. ಆಗ ಮಕ್ಕಳಿಗೆ, ಒಂದು ಕಡೆ ಅನ್ನವನ್ನು ಬೇಯಿಸುವ ವೀರರು ಹಿಂಸಾತ್ಮಕರಾಗಿ ಕಂಡುಬಂದರೆ, ಇನ್ನೊಂದು ಕಡೆ ಬಲಿಗಾಗಿ ತಂದಂತಹ ಪ್ರಾಣಿಗಳು ಹೆದರಿ ಅರಚುತ್ತಿರಲು, ಆ ಬೊಬ್ಬೆಯ ಧ್ವನಿಗೆ ಕಾಡೇ ಅಳುತ್ತಿರುವಂತೆ ಭಾಸವಾಗುತ್ತದೆ. ಅಂದರೆ ಇಲ್ಲಿ ಇವುಗಳ ವೇದನೆಯಲ್ಲಿ ಹಿಂಸೆಯನ್ನು ನಿಲ್ಲಿಸಿ ಎಂಬ ಪ್ರತ್ಯುತ್ತರವಿರುವಂತಿತ್ತು.

ಬಲಿಕೊಡುವುದನ್ನು ನೋಡಲು ಜನರು ಹೇಗೆ ಕಾತರರಾಗಿದ್ದರೆಂದರೆ, ಮಾರಿದೇವತೆಯೇ ಮಾಂಸದ ಅತಿಯಾಸೆಯಿಂದ ಹೊರಗಿನ ಜೀವ ಸಮೂಹವನ್ನು ಹಲವು ಮುಖಗಳಿಂದ ನೋಡುತ್ತಿದ್ದಾಳೆ ಎಂಬಂತೆ ಕಂಡುಬಂದರು.

ಇತ್ತ ಮಾರಿದತ್ತ,

ಭೈರವನ ಜವನ ಮಾರಿಯ

ಮೂರಿಯ ವೊಲ್ ನಿಂದ ಮಾರಿದತ್ತಂ ಲಲಿತಾ

ಕಾರರ ಧೀರರ ಬಂದ ಕು

ಮಾರರ ರೂಪಿಂಗೆ ಠಕ್ಕುಗೊಂಡಂತಿರ್ದಂ (೧ನೇ ಅವತಾರ ೫೮)

ಬಲಿಕೊಡುವ ಮುಂಚೆ ತಮ್ಮ ರಾಜರನ್ನು ಹರಸಿ ಎಂದು ಜನರು ಮಕ್ಕಳನ್ನು ಕೇಳಿದಾಗ ಅವರು "ನೃಪವರ ನಿರ್ಮಲ ಧರ್ಮದಿಂದೇ ಪಾಲಿಸು ಧರೆಯಂ" ಎಂದು ಹರಸುತ್ತಾರೆ. ಇದನ್ನು ಕೇಳಿ ಎಲ್ಲರಿಗೂ ಆಶ್ಚರ್ಯವಾದರೆ ರಾಜನಿಗೆ ಅವರಲ್ಲಿ ಒಂದು ಬಗೆಯ ಆತ್ಮೀಯತೆ ಮೂಡುತ್ತದೆ. ಇತ್ತ ಮಾರಿದೇವತೆಗೆ ಹೆದರದೆ ನಿಂತ ಅವರನ್ನು ಕುರಿತು, ರಾಜ ಮಾರಿದತ್ತನು "ನಿಮ್ಮ ಕುಲ ಯಾವುದು ? ಯಾರ ಮಕ್ಕಳು ನೀವು ? ಎಲ್ಲಿಂದ ಬಂದಿರಿ ? ಎಳವೆಯಲ್ಲಿಯೇ ಏಕೆ ಈ ಭಿಕ್ಷಾ ವೃತ್ತಿ?" ಎಂದು ಕೇಳಲು, ತಮ್ಮ ಕಥೆಯನ್ನು ಹಿಂಸೆಯ ಜಾತ್ರೆ ನಡೆಸುತ್ತಿರುವ ಮಾರಿದತ್ತನಿಗೂ, ಚಂಡಮಾರಿ ದೇವತೆಗಳಿಗೂ ಹೇಳುವುದರಿಂದ ಎಲ್ಲರೂ ಅಹಿಂಸಾವೃತ್ತಿಗಳಾಗಿ ಸನ್ಮಾರ್ಗದಲ್ಲಿ ನಡೆಯುತ್ತಾರೆಂಬ ಸದುದ್ದೇಶದಿಂದ ಅಭಯರುಚಿ ತಮ್ಮ ಕಥೆ ಹೇಳಲು ಪ್ರಾರಂಭಿಸುತ್ತಾನೆ.

ಅಮೃತಮತಿಯ ಪತನದ ಕಥೆಯನ್ನು ಕೇಳಿ ಮಾರಿದತ್ತನೂ ಕನಲಿ,

ಆ ಗಂಡನನಪ್ಪಿದ ತೋಳ್

ಪೋಗಂಡನನಪ್ಪುವಂತೆ ಮಾಡಿದ ಬದಿಯಂ

ಮೂಗಂ ಕೊಯ್ದಿಟ್ಟಿಗೆಯೊಳ್

ಪೋಗೊರಸದೆ ಕಂಡೆನಾದೊಡೇಂ ಬಿಟ್ಟಪನೇ (೨ನೇ ಅವತಾರ ೬೦) ಎನ್ನುತ್ತಾನೆ. ಹಿಂಸಾ ಸ್ವಭಾವದ ಅಮೃತಮತಿಯ ವರ್ತನೆ, ಅವನಲ್ಲಿ ತೀವ್ರ ಪರಿವರ್ತನೆಗೆ ಕಾರಣವಾಗುತ್ತದೆ.

ಆಗ, "ಮನಸಿಜನ ಮಾಯೆ ವಿಧಿವಿಳ

ಸನದ ನೆರಂಬಡೆಯೆ ಕೊಂದು ಕೂಗದೆ ನರರಂ" ಎಂಬುದಾಗಿ ಹೇಳುತ್ತಾ, ಮಾರಿದತ್ತನನ್ನು ಅಭಯರುಚಿ ಸಮಾಧಾನ ಪಡಿಸುತ್ತಾನೆ.

ಅಕಂಪನ ಮುನಿಗಳ 'ತನ್ನಂತಿರೆ ಬಗೆವುದು ಪೆರರಂ, ಪ್ರಾಣಿ ಹಿಂಸೆಯಂ ಮಾಡಲ್ವೇಡ, ದಯಾ ಮೂಲಂ ಧರ್ಮಂ' ಎಂಬ ಹಿತವಾದ ವಚನದಂತಹ ಮಾತುಗಳನ್ನು ಮಕ್ಕಳಿಂದ ಕೇಳಿ ಕೋಳಿಗಳು ಅಹಿಂಸಾ ವ್ರತವನ್ನು ಕೈಗೊಳ್ಳಬೇಕೆಂದು ನಿರ್ಧರಿಸುತ್ತವೆ. ಆದರೆ ಇವುಗಳ ಸಂತೋಷದ ಕೂಗು ಇವರ ಸಾವಿಗೆ ಕಾರಣವಾಗಿ ಮುಂದೆ ಇವರು ಮಾನವ ಜನ್ಮವನ್ನು ಪಡೆಯುತ್ತಾರೆ. ಅಂದರೆ ಇಲ್ಲಿ ಕೋಳಿಗಳು ತಾವು ಕೋಳಿಗಳಾಗಿ ಬದುಕಿರುವ ದಿನಗಳಲ್ಲಿ ಅಹಿಂಸಾ ವ್ರತವನ್ನು ಕೈಗೊಂಡು ಅದರಂತೆ ಮುಂದುವರಿಯ ಬೇಕೆಂದು ನಿರ್ಧರಿಸುತ್ತವೆ. ಆದರೆ ಅದೇ ಸಂದರ್ಭಕ್ಕೆ ಅವುಗಳಿಗೆ ಮರಣ ಸಂಭವಿಸಿ ಮಾನವ ಜನ್ಮವನ್ನು ಪಡೆದಾಗ ಅವರು ಹಿಂದೆ ಕೈಗೊಂಡಿದ್ದ ಅಹಿಂಸಾ ವ್ರತದ ನಿರ್ಧಾರವು ಮುಂದಿನ ಬದುಕಿಗೆ ಗಟ್ಟಿಯಾದ ತಳಪಾಯವಾಗುತ್ತದೆ.

ಇತ್ತ ಸುಧತ್ತಾಚಾರ್ಯರೆಂಬ ಮುನಿಗಳಿಂದ ತನ್ನ ಅಜ್ಜ ಅಜ್ಜಿ, ತಂದೆ ತಾಯಿ, ಮಕ್ಕಳ ಬಗ್ಗೆ ಕೇಳಿ ತಿಳಿದ ಯಶೋಮತಿ ಹೀಗೆಂದುಕೊಂಡನು 'ಸಂಕಲ್ಪನ ವಧೆಗಿನಿತಾಯ್ತು, ದಿಟದಿನೇನೇನಾಗರ್?' ಎಂದು ಒಂದು ಕಡೆ ಹೇಳಿಕೊಂಡರೆ, ಇನ್ನೊಂದು ಕಡೆ : ಏನಿತೊಳವು ಜೀವರಾಶಿಗ

ಳನಿತುಮನೋರಂತೆ ಕೊಂದು ತಿಂದು ತಣಿವಿ

ಲ್ಲೆನೆ ಬರ್ದನಿಂದುವರಮಿ

ನ್ನೆನಗಿನ್ನೆಂತಪ್ಪ ನರಕಮಿದಿರ್ವಂದ ಪುದೋ (ಆನೇ ಅವತಾರ ೭೩)

ಮುಂದೆ 'ಸಂಕಲ್ಪ ವಧೆಯಿಂದ ಜನ್ಮಾಂತರಗಳಲ್ಲಿ ತೊಳಲಿಸುವ ಸಾಮರ್ಥ್ಯವಿರುವುದಾದರೆ ಪ್ರತ್ಯಕ್ಷ ಹಿಂಸೆಯ ಫಲ ಇನ್ನೆಷ್ಟು ಘೋರವಾಗಿರಬಹುದು ? ಎಂದು, ಎಷ್ಟೊಂದು ಜೀವರಾಶಿಗಳಿವೆಯೋ ಅಷ್ಟನ್ನೂ ನಾನು ಒಂದೇ ಸಮನೆ ಕೊಂದು ತಿಂದರೂ ತೃಪ್ತಿಯಿಲ್ಲವೆಂಬಂತೆ ಇದುವರೆಗೆ ಬದುಕಿದ್ದೆ. ನನಗೆ ಇನ್ನೆಂತಹ ನರಕ ಕಾದಿದೆಯೋ' ಎಂದು ಯಶೋಮತಿ ರಾಜ್ಯಭಾರವನ್ನು ಮಗ ಅಭಯರುಚಿಗೆ ಕೊಟ್ಟು ಜೈನ ದೀಕ್ಷೆಯನ್ನು ಕೈಗೊಳ್ಳಲು ನಿರ್ಧರಿಸುತ್ತಾನೆ. ಆದರೆ ಜಿನದೀಕ್ಷೆಯನ್ನು ಪಡೆಯಬೇಕೆಂದಿದ್ದ ಅಭಯರುಚಿ ಐಹಿಕ ಸುಖಕ್ಕೆ ತೆರಳದೆ ತನ್ನ ತಂಗಿಯೊಂದಿಗೆ ಆಧ್ಯಾತ್ಮಿಕ ಬದುಕನ್ನು ಮುಂದುವರಿಸಲು ನಿರ್ಧರಿಸುತ್ತಾನೆ.

ಹೀಗೆ ಅವನು ತನ್ನ ಬದುಕಿನಲ್ಲಿ ತಾನು ಮಾಡಿದ ತಪ್ಪು, ಅದರಿಂದ ಅನುಭವಿಸಿದ ಸಂಕಷ್ಟವನ್ನು ಕುರಿತು ಮಾರಿದತ್ತನಿಗೆ ಹೀಗೆನ್ನುತ್ತಾನೆ : ಸಂಕಲ್ಪ ಹಿಂಸೆಯೊಂದರಿಂದಲೇ ನಾನು ಜನ್ಮಾಂತರಗಳ ದುಃಖವನ್ನು ಕಂಡು ಅನುಭವಿಸಿದೆ. ಹೀಗಿರುವಾಗ ನೀನು ಶಂಕೆಯಿಲ್ಲದೆ ಇಷ್ಟೊಂದು ಜೀವಿಗಳನ್ನು ಕೊಲ್ಲುತ್ತಿರುವೆಯಲ್ಲಾ ನಿನಗೆ ಪರಿಹಾರ ಸಿಕ್ಕುವುದು ನರಕದಲ್ಲೇ ಎಂದಾಗ ಮಾರಿದತ್ತ ರಾಜ ವಿಸ್ಮಯನೂ ಉದ್ವಿಗ್ನನೂ ಆದನು. ಬದುಕಿನುದ್ದಕ್ಕೂ ಪ್ರಾಣಿಹಿಂಸೆಯಲ್ಲಿ ಮುಳುಗಿದ್ದ ಮಾರಿದತ್ತ ತನ್ನ ಪಾಪಕೃತ್ಯಗಳ ಅರಿವಾಗಿ, ಬಲಿಗಾಗಿ ತಂದಿರಿಸಿದ್ದ ಪ್ರಾಣಿಸಮೂಹವನ್ನು ಬಿಡುಗಡೆಗೊಳಿಸುತ್ತಾನೆ. ಇಲ್ಲಿ ಜನ್ನನು ಮಾರಿದತ್ತನ ಪರಿವರ್ತನೆ, ಯಶೋಧರನ ಭವಾವಳಿಯ ಘೋರ ದುರಂತಗಳ ಮೂಲಕ ಜನರಲ್ಲಿ ಹಿಂಸೆ, ಪಾಪಕೃತ್ಯದ ಬಗ್ಗೆ ಭಯ, ಎಚ್ಚರಿಕೆಯನ್ನುಂಟು ಮಾಡುವುದನ್ನು ಗಮನಿಸಬಹುದು.

ಹಿಂಸೆಯೇ ತಾಂಡವವಾಡುತ್ತಿದ್ದ ರಾಜ್ಯದಲ್ಲಿ ಅಹಿಂಸೆಯನ್ನು ಬಿತ್ತಿ ಕ್ರಾಂತಿಯನ್ನುಂಟು ಮಾಡಿದ ಮಕ್ಕಳು ತನ್ನ ತಂಗಿಯಾದ ಕುಸುಮಾವಳಿಯ ಮಕ್ಕಳೆಂದು ತಿಳಿದು ಹೆಮ್ಮೆ, ಪ್ರೀತಿ, ಅಭಿಮಾನದಿಂದ ತನ್ನ ಮಕ್ಕಳಂತೆ ಆಲಿಂಗಿಸಿಕೊಂಡನು. ನಂತರ ತಾನು ಮಾಡಿದ ಪಾಪಗಳಿಗೆ ಹೆದರಿ ಅದರ ಪ್ರಾಯಶ್ಚಿತ್ತಕ್ಕಾಗಿ ಮಗನಾದ ಕುಸುಮದತ್ತನಿಗೆ ರಾಜಪದವಿಯನ್ನಿತ್ತು ಜೈನ ದೀಕ್ಷೆಯನ್ನು ಪಡೆದು ಸಮಾಧಿ ಮರಣವನ್ನು ಹೊಂದಿದ ಕೂಡಲೇ ಮೂರನೇ ಸ್ವರ್ಗದಲ್ಲಿ ದೇವನಾಗುತ್ತಾನೆ. ಇಲ್ಲಿ ಮಾರಿದತ್ತ ಹಿಂಸೆಯಿಂದ ಅಹಿಂಸೆಯೆಡೆಗೆ ಸಾಗಿ, ತನ್ನ ಪ್ರಾಯಶ್ಚಿತ್ತ, ಘೋರ ತಪಸ್ಸಿನ ಮೂಲಕ ದೇವಪದವಿಯನ್ನು ಪಡೆಯುತ್ತಾನೆ.

ಅಭಯರುಚಿ ಮಾರಿದತ್ತನಿಗೆ ಜೀವದಯೆಯ ಮಹತ್ವವನ್ನು ಬೋಧಿಸುತ್ತಿದ್ದಾಗಲೇ ಅವನು ಪೂಜಿಸುತ್ತಿದ್ದ ಚಂಡಮಾರಿ ದೇವತೆಯು ಪ್ರತ್ಯಕ್ಷಳಾಗಿ ಕಣ್ಣಿಗೆ ಕಾಣಿಸಿಕೊಂಡು ಕುಮಾರನಿಗೆ ವಂದಿಸಿ ನೀನು ಅಹಿಂಸೆಯನ್ನು ಬೋಧಿಸಿದ ಆಚಾರ್ಯನೇ ಸರಿ ಎಂದು ಹೇಳಿ ಜಾತ್ರೆ ನೆರೆದ ಜನರೆಲ್ಲ ಚೆನ್ನಾಗಿ ಕೇಳುವಂತೆ ಹೀಗೆ ಸೂಚಿಸಿದಳು.

"ಪ್ರಜೆಯೆಲ್ಲಂ ಜಲಗಂಧ

ಸ್ರಜ ತಂಡುಲ ಧೂಪ ದೀಪ ಚರು ತಾಂಬೂಲ

ವ್ರಜದಿಂ ಪೂಜಿಸುವುದು ಜೀ

ವಜಾತನದಿಂದೆನಗೆ ಬಲಿಯನಿತ್ತೊಡೆ ಮುನಿವೆಂ" (ಆನೇ ಅವತಾರ ೭೩)

ಪ್ರಾಣಿಹಿಂಸೆ ಮಾಡಬಾರದೆಂದು ಎಲ್ಲರಿಗೂ ಆಜ್ಞಾಪಿಸುತ್ತಾಳೆ ಎನ್ನುವಲ್ಲಿ ದೇವಿಯ ಮನಸ್ಸು ಪರಿವರ್ತನೆಯಾದ ಅಪೂರ್ವ ಪ್ರಸಂಗದ ಚಿತ್ರಣವಿದೆ. ಇಲ್ಲಿ ಕೊನೆಗೆ ಮಾರಿದತ್ತ ಹಾಗೂ ಚಂಡಮಾರಿ ದೇವತೆಗಳಿಬ್ಬರೂ ಹಿಂಸೆಯಿಂದ ಅಹಿಂಸೆಯ ಸನ್ಮಾರ್ಗದಲ್ಲಿ ನಡೆಯುವುದನ್ನು ಗುರುತಿಸಬಹುದು.

೪. ಅಮೃತಮತಿ ಮತ್ತು ಅಷ್ಟಾವಂಕರ ಪ್ರಣಯ ಪ್ರಸಂಗ - ಯಶೋಧರ ನಡೆದುಕೊಂಡ ರೀತಿ

ಯಶೋಧರ, ಅಮೃತಮತಿ ಸುಖಸಂಸಾರದಿಂದ ತುಂಬಾ ಅನ್ಯೋನ್ಯತೆಯಿಂದ ಬಾಳುತ್ತಿದ್ದರು. ಒಂದು ರಾತ್ರಿ ಈ ದಂಪತಿಗಳು (ಮನಃಪ್ರಿಯರು) ಮಲಗಿದ್ದ ಸಮಯದಲ್ಲಿ ಮಾವುತನ ಹಾಡಿಗೆ ಸೋತು ತನ್ನ ಮನಸ್ಸನ್ನೇ ಅವನಿಗೆ ಕೊಟ್ಟು ಬಿಡುತ್ತಾಳೆ. ತನ್ನ ರಾಣಿಗೆ ತನ್ನಲ್ಲಿದ್ದ ಆಸಕ್ತಿ ಇಳಿಮುಖವಾಗುತ್ತಿರುವುದನ್ನು ಕಂಡುಕೊಂಡ ಯಶೋಧರ ಒಂದು ರಾತ್ರಿ ತನ್ನ ಬಾಹುಬಂಧನದಿಂದ ನುಣುಚಿಕೊಂಡು ತನ್ನ ವಿಟನೆಡೆಗೆ ತೆರಳಿದ ಅಮೃತಮತಿಯನ್ನು ಪರೀಕ್ಷಿಸಲೆಂದು ಬಿಚ್ಚುಗತ್ತಿ ಹಿಡಿದು ಹಿಂಬಾಲಿಸುತ್ತಾನೆ.

ಅಮೃತಮತಿಯನ್ನು ಹಿಂಬಾಲಿಸಿದ ರಾಜನನ್ನು

'ಬೆನ್ನೊಳೆ ಪೋದಂ ದೋಷದ

ಬೆನ್ನೊಳೆ ಸಂಧಿಸುವ ದಂಡದಂತರಸಂ' (ಅವತಾರ ೨, ೪೮) ಎಂದು ಕವಿ ವರ್ಣಿಸುತ್ತಾನೆ.

ಅಮೃತಮತಿ ಅಷ್ಟಾವಂಕರ ಕೂಟವನ್ನು ಕಣ್ಣಾರೆ ಕಂಡು ಅವರಿಬ್ಬರನ್ನು ಕೊಲ್ಲಲೆಂದು ಕತ್ತಿ ಎತ್ತುತ್ತಾನೆ.

ಆಗ ಅವನ ಮನಸ್ಥಿತಿಯನ್ನು ಕವಿ ಹೀಗೆ ವರ್ಣಿಸುತ್ತಾನೆ :

'ಆಗಳ್ ಬಾಳ್ ನಿಮಿರ್ದುದು ತೋಳ್

ತೂಗಿದುದು ಮನಂ ಕನಲ್ದುದಿರ್ವರುಮನೆರ

ಇಬ್ಬಾಗಂ ಮಾಡಲ್ ಧೃತಿ ಬಂ

ದಾಗಳ್ ಮಾಣೆಂಬ ತೆರದೆ ಪೇಸಿದನರಸಂ' (೨ನೇ ಅವತಾರ ೫೩)

ಜೈನಧರ್ಮದಲ್ಲಿ ಹಿಂಸೆ ಮಾಡಬಾರದೆಂಬ ನೀತಿ ಇದ್ದರೂ ಅವನ ತಾಳ್ಮೆ ಅಹಿಂಸೆಗಳ ಜೈನ ಜೀವನ ದೃಷ್ಟಿಯನ್ನು ಮೀರಿ ಅವನ ಪ್ರವೃತ್ತಿ ಹಿಂಸೆಗೆ ಹಾತೊರೆಯುವುದನ್ನು ಸೂಚಿಸುತ್ತದೆ. ಯಶೋಧರನ ಕ್ರೋಧವೂ, ಧೃತಿಯೂ, ವಿತರ್ಕವೂ, ನಿರ್ಧಾರವೂ, ಅವನ ಮನೋನಿಗ್ರಹವನ್ನೂ ಮೀರಿ ಬಂದ ಭವಬದ್ಧವಾದ ಈರ್ಷ್ಯೆಯನ್ನು ನಮ್ಮ ಕಣ್ಣಿಗೆ ಕಟ್ಟುವಂತೆ ಎತ್ತಿಹಿಡಿದಿದ್ದಾನೆ.[೧೧] ಆದರೂ ಎಂಥೆಂಥ ರಾಜರನ್ನು ಕೊಂದು ಪರಿಶುದ್ಧವಾದ ಈ ಖಡ್ಗದಿಂದ ಇಂದು ಇಂಥ ಹುಳುಕರನ್ನು ಕೊಂದರೆ ತನ್ನ ಕೀರ್ತಿಗೆ ಕಳಂಕ ಎಂದುಕೊಂಡು ಅವರನ್ನು ಕೊಲ್ಲದೆ ಬಿಡುತ್ತಾನೆ. ಸಂಯಮದಿಂದ ವರ್ತಿಸುತ್ತಾನೆ. ಕ್ಷಮಾಧರ್ಮದ ಮೂಲಕ ಅಹಿಂಸಾ ತತ್ವವನ್ನು ಎತ್ತಿಹಿಡಿಯುತ್ತಾನೆ.

ಅಮೃತಮತಿ ಅಷ್ಟಾವಂಕನನ್ನು ಮೆಚ್ಚಿದ್ದು ಅವನ ಮನಸ್ಸು ಎದುರಿಸಲಾರದಾಗಿದೆ. ಸಿಟ್ಟಿಗಿಂತ ಹೆಚ್ಚಾಗಿ ಅವನು ಜಿಗುಪ್ಸೆ ಪಟ್ಟುಕೊಳ್ಳುತ್ತಾನೆ. ವೈರಿರಾಜನನ್ನು ಇರಿಯಬೇಕಾದ ಈ ಕತ್ತಿಯಲ್ಲಿ ಈ ಹುಳುಗಳನ್ನು ಕೊಲ್ಲಬೇಕೆ ? ಅದು ಇರುವೆಯನ್ನು ಎದುರಿಸಿದ ಹಾಗಲ್ಲವೇ ? ಸಿಂಹ ನರಿಯೊಂದಿಗೆ ಎಂದಾದರೂ ಸೆಣಸುತ್ತದೆಯೋ ಎಂದು ಜಿಗುಪ್ಸೆಯಿಂದ ಅವನು ಅವರಿಬ್ಬರನ್ನೂ ಕೊಲ್ಲಲು ಹೇಸುತ್ತಾನೆ.

ಇಲ್ಲಿ ರಾಜ ತನ್ನಷ್ಟಕ್ಕೇ ತಾನು ಮನಸ್ಸಿನಲ್ಲಿ ಹಿಂಸೆಯನ್ನು ಅನುಭವಿಸುತ್ತಾನೆ.

ಆರಾಜಕುಮಾರಂ ಬೞಿ

ಕಾ ರೂಪಿನ ಪೆಂಡಿರಿಂತು ಕೞಿಪಾದೊಡೆ ಚಿಃ

ಕೂರಿಸುವ ಕೂರ್ಪ ಮಾತಂ

ಮಾರಿಗೆ ಕುಡು ಸಿರಿಯನೊಟ್ಟಿ ಸುಡು ಹೋಗೆಂದಂ (೨ನೇ ಅವತಾರ ೬೩)

ಒಲಿಸಿದ ಪೆಣ್ ಪೆರರೊಳ್‌ಸಂ

ಚಲಿಸಿದೊಡಿದು ಸುಖಮೆ ಪರಮಸುಖಸಂಪದಮಂ

ಸಲಿಸಿ ಸಲೆ ನೆರೆವ ಮುಕ್ತಿಯ

ನೊಲಿಸುವೆನಿನ್ನೊಲ್ಲೆನು ೞಿದ ಪೆಂಡಿರ ನಣ್ಪಂ (೨ನೇ ಅವತಾರ ೬೪)

ಒಲಿದ ಹೆಣ್ಣುಅನ್ಯಾಸಕ್ತಳಾದಳು ಎಂದ ಮೇಲೆ ಇನ್ನು ಏನು ಸುಖ ಉಳಿಯಿತು ? ನನಗೆ ಇನ್ನು ಸ್ತ್ರೀ ಸಂಗವೇ ಬೇಡ ಎಂದು ವೈರಾಗ್ಯ ತಾಳುತ್ತಾನೆ.

ಅಮೃತಮತಿಯನ್ನು ಕೊಲ್ಲಲು ಬಯಸಿದ, ಕೊಲ್ಲದೆ ಹಿಂಜರಿದ ಮನಸ್ಸಿನ ಇಬ್ಬಂದಿತನ, ಇಲ್ಲಿ ಮನಸ್ಸಿನಲ್ಲಿ ನೋವನ್ನು ಅನುಭವಿಸಿ ಮುಂದೆ ಕೊಂಕು ಮಾತಾಡುವುದರ ಮೂಲಕ ತನ್ನ ಉರಿಯನ್ನು ತೀರಿಸುವ ಪ್ರಯತ್ನವನ್ನು ಮಾಡುತ್ತಾನೆ. ನೈದಿಲೆ ಹೂವಿನಿಂದ ಅವಳನ್ನು ಹೊಡೆಯುತ್ತಾನೆ. ಆಗ ಅವಳು ಮೂರ್ಛೆ ಹೋಗುತ್ತಾಳೆ. ಆಗ ರಾಜ ಯಶೋಧರನು ಅಂದಿನ ಸಾವು ಅದೃಷ್ಟವಶಾತ್ ತಪ್ಪಿತು, ಇಂದು ಈ ನೈದಿಲೆ ಸಾವನ್ನು ತರುವಂತಾಯಿತು ಎಂದು ಚುಚ್ಚಿ ನುಡಿಯುವುದರ ಮೂಲಕ ತನ್ನ ಮಾನಸಿಕ ಹಿಂಸೆಯನ್ನು ವ್ಯಕ್ತಪಡಿಸುತ್ತಾನೆ.

ಹೀಗೆ ತಾನು ಕಂಡ ಆಘಾತಕ್ಕೆ ಹೇಗೆ ಪ್ರತಿಕ್ರಿಯೆ ತೋರಿಸಬೇಕೆಂದು ತನಗೆ ತಾನೇ ನಿರ್ಧರಿಸಿ ಕೊಳ್ಳಲಾಗದ ಇಬ್ಬಂದಿತನಕ್ಕೆ ಸಿಕ್ಕಿದ ರಾಜ ಆ ಅನುಭವವನ್ನು ನೇರವಾಗಿ ಹೇಳದೆ ತಾಯಿಗೆ 'ವನಿತೆಯ ಕೇಡಂ ಕನಸಿನ ನೆವದಿಂ' ಮರೆಮಾಚುತ್ತಾನೆ.

ಹೊಂದಾವರೆಯ ಕೊಳದ ಹಂಸ ಕೊಳಕು ಕೊಳೆಯ ಕೆಸರಿನಲ್ಲಿ ಆಡುತ್ತಿತ್ತು ಎಂಬ ರೂಪಕ ರಾಣಿ, ಅಷ್ಟಾವಂಕನಂಥ ಕೊಳಕನ ಸ್ನೇಹ ಮಾಡಿದ್ದರ ಬಗ್ಗೆ ರಾಜನಿಗೆ ಇದ್ದ ಹಿಂಸೆಯನ್ನು ಧ್ವನಿಸುತ್ತದೆ.

ನಂತರ ಹಿಟ್ಟಿನ ಕೋಳಿಯನ್ನು ಬಲಿಕೊಡುವುದರಲ್ಲಿ ಸಂಕಲ್ಪ ಹಿಂಸೆಯಿಂದ ೭ ಜನ್ಮಗಳನ್ನು ಎತ್ತಬೇಕಾಗುತ್ತದೆ. ೧ನೇ ಜನ್ಮದಲ್ಲಿ ನವಿಲಾದ ಯಶೋಧರ ಅಷ್ಟಾವಂಕನ ಕಣ್ಣು ಕುಕ್ಕುವುದು ಹಿಂದಿನ ಜನ್ಮದ ಹಿಂಸೆಯಿಂದ.

ಹೀಗೆ ಯಾವುದೇ ರೀತಿ ಅಮೃತಮತಿ - ಅಷ್ಟಾವಂಕರ ವಿಕೃತ ಪ್ರಣಯ ಪ್ರಸಂಗದಲ್ಲಿ ಯಶೋಧರ ಹಿಂಸಾತ್ಮಕವಾಗಿ ನಡೆದುಕೊಳ್ಳದೆ ಮಾನಸಿಕ ಹಿಂಸೆಯನ್ನು ತಾಳಿ, ಕೊನೆಗೆ ಒಂದು ಸುಳ್ಳಿನ ಮೂಲಕ ಹಿಟ್ಟಿನ ಕೋಳಿಯನ್ನು ಬಲಿಕೊಡುವುದರ ಮೂಲಕ ಪಾಪಕರ್ಮವೆಸಗಿ, ಸಂಕಲ್ಪ ಹಿಂಸೆಯಿಂದ ಅನೇಕ ಭವಾವಳಿಗಳನ್ನು ಪಡೆದು ಹಿಂಸೆಯಿಂದ ಮುಕ್ತಿ ಪಡೆದು ಅಹಿಂಸೆಯಿಂದ ತತ್ಪರನಾಗಿ ಮುಂದೆ ಮಾನವನಾಗುತ್ತಾನೆ.

೬. ಅಮೃತಮತಿಯ ವಿಕೃತ ಮನಸ್ಸು

ಕೃತಿಯ ಕೇಂದ್ರದಲ್ಲಿರುವ ಅಮೃತಮತಿಯು ಅಷ್ಟಾವಂಕನನ್ನು ಪ್ರೀತಿಸುವ ಘಟನೆಯನ್ನು ನೋಡಿದರೆ ಹಾಗೂ ಅಮೃತಮತಿಯು ಅಷ್ಟಾವಂಕನ ಹಾಡನ್ನು ಕೇಳಿ ತನ್ನ ಮನಸ್ಸನ್ನು ಅವನಿಗೆ ಕೊಡುವ ಈ ವಿಕೃತ ಮನಸ್ಸೇ ಮುಂದಿನ ಅವಘಡಕ್ಕೆಲ್ಲ ಈ ಘಟನೆಯೇ ಕಾರಣ.

ಕೆಡುಕಿಗೂ ನಿಷ್ಠೆ ತೋರಿಸುವ ಸಾಮರ್ಥ್ಯ ಅಮೃತಮತಿಗಿದೆ. ಹಿಂಸೆಯಿಂದಾಗುವ ನರಕವನ್ನು ಈಕೆಯಲ್ಲಿ ಗುರುತಿಸಬಹುದು. ಇಲ್ಲಿ ಧರ್ಮ, ತತ್ವಕ್ಕೆ ವಿರುದ್ಧವಾಗಿ ಯಶೋಧರನಿಗೆ ಮನಸ್ಸಿಗೆ ಹಿಂಸೆಯನ್ನು ಕೊಟ್ಟು ನರಕಕ್ಕೆ ಸೇರುತ್ತಾಳೆ. ಅಮೃತಮತಿಯ ಮನಸ್ಸು ವಿಕೃತಕ್ಕೆ ಬದಲಾಗಲು ಕಾರಣವೇ ಬದಗನ ಹಾಡು.

ಬಿನದಕೆ ಪಾಡುತಿರೆ ನು
ಣ್ದನಿ ನಿದ್ರೆಗೆ ಕೃತಕ ಬೀಜಮಾಯ್ತೆನೆ ಮೃಗಲೋ
ಚನೆ ತಿಳಿದಾಲಿಸಿ ಮುಟ್ಟಿದ
ಮನಮನೆ ತೊಟ್ಟನೆ ಪಸಾಯದಾನಂಗೊಟ್ಟಳ್ (೨ನೇ ೨೮)

ಹಾಡುತ್ತಿರಲು, ಅಮೃತಮತಿ ತಾನು ಗಂಡನಿಗೆ ಹಿಂಸೆ ಮಾಡಿದೆ ಎಂದು ತಿಳಿಯದೆ, ಹಾಡನ್ನು ಕೇಳಿಯೇ ಆ ಬದಗನನ್ನು ನೋಡುವ ಕೂಡುವ ಚಿಂತೆ ಅವಳನ್ನು ಆವರಿಸಿ ಅವಳ ಮನಸ್ಸು ವಿಕೃತಕ್ಕೆ ವಾಲುತ್ತದೆ. ಈ ಭಾಗವೇ ಇಡೀ ಕಾವ್ಯದಲ್ಲಿ ತಿರುವನ್ನು ಪಡೆಯಿತು ಎನ್ನಬಹುದು. ತನ್ನ ಧರ್ಮವನ್ನು ಧಿಕ್ಕರಿಸಿ ಯಾವ ಧರ್ಮವೆಂದು ತಿಳಿಯದ ಮಾವುತನನ್ನು ಮೆಚ್ಚಿಕೊಂಡರೂ ತಾನು ಧರ್ಮಕ್ಕೆ ಹಿಂಸೆ ಮಾಡಿದೆ ಎಂದು ತಿಳಿಯದೆ ಮನಸ್ಸು ವಿಕೃತಕ್ಕೆ ವಾಲುತ್ತದೆ.

ಗಂಡ ಮರುದಿನ ದೂತಿಯೊಬ್ಬಳಿಗೆ ಲಂಚವಿತ್ತು ಹಿಂದಿನ ರಾತ್ರಿ ಹಾಡುತ್ತಿದ್ದವನಾರು ? ಎಂದು ತಿಳಿದು ಬರಲು ಕಳುಹಿಸುತ್ತಾಳೆ.

ಅವನ ರೂಪದ ಮೇಲೆ ಹೇಸಿಗೆಯಾಗಿ
'ಅಮೃತಮತಿಯೆತ್ತ ರೂಪಾ
ಧಮನಷ್ಟಾವಂಕನೆತ್ತ ಚಿತ್ರಮಪಾತ್ರೆ
ರಮತೇ ನಾರೀ ಎಂಬುದು
ಸಮನಿಸಿದುದು ಬೆಂದ ಬಿದಿಗೆ ಕಣ್ಣಿಲ್ಲಕ್ಕುಂ (೨ನೇ ೩೪)

ಎಂದು ಉದ್ಗರಿಸುತ್ತಾಳೆ. ತಾನು ತನ್ನ ಗಂಡನಿಗೆ ಹಿಂಸೆ ಮಾಡಿದೆ ಎಂದು ಅನಿಸದು. ಯಾಕೆಂದರೆ ಆಕೆಗೆ ಇಲ್ಲಿ ಪ್ರೀತಿ ಮುಖ್ಯವಾಗಿತ್ತು. ಆದರೆ ದೂತಿಗೆ ಕರುಣೆ ಎಂಬುದಿತ್ತು ಎಂಬುದನ್ನು ಈ ಮಾತಿನ ಮೂಲಕ ಗುರುತಿಸಬಹುದು.

ನೀನು ಅವನ ಬಗ್ಗೆ ಹೇಳದೆ 'ನೀನೆನ್ನ ಕೊಂದೆಯೆಂದೊಡೆ ಪೇಳ್ದಳ್' ಎಂದಾಗ
ಪೞಿದಲೆ ಕುಟಿನೊಸಟಿಗ
ಣ್ಣೊೞಿವಾಯ್ ಹಪ್ಪಳಿಕೆ ಮೂಗು ಮುರುಟಿದ ಕಿವಿ ಬಿ
ಬ್ಬಿೞುವಲ್ ಕುಸಿಗೊರಲಿಟಿದೆರ್ದೆ
ಪೊೞಿಂಟ ಬೆನ್ ಬಾತ ಬಸಿಱಿಡಂಗಿದ ಜಘನಂ (೨ನೇ ಅವತಾರ ೩೮)

ಬದಗನ ರೂಪವಿಕಾರವನ್ನು ಅಷ್ಟೊಂದು ಉತ್ಪ್ರೇಕ್ಷಿಸುವ ಅಗತ್ಯವಿರಲಿಲ್ಲವೆಂದು ಡಿ.ಎಲ್.ನ. ಎಂದರೆ, ಬದಗ ಅಸಹ್ಯರೂಪದ ಉತ್ಪ್ರೇಕ್ಷಿತ ವರ್ಣನೆಗೆ ಮುಖ್ಯ ಕಾರಣ ಯಶೋಧರನಿಂದ ಉಂಟಾಗುವ ಹಿಂಸಾ ಪಾಪದ ಸ್ವರೂಪ ನಿರ್ಣಯವೆಂದು ಗಿರಡ್ಡಿಯವರ ಅಭಿಪ್ರಾಯವನ್ನು ಒಪ್ಪಬಹುದು.[೨]

ಅಷ್ಟಾವಂಕನ ರೂಪವರ್ಣನೆಯನ್ನು ಕೇಳಿ ತಿಳಿದ ಅಮೃತಮತಿ -

'ಕರಿದಾದೊಡೆ ಕತ್ತುರಿಯಂ

ಮುರುಡಾದೊಡೆ ಮಲಯಜಂಗಳಂ ಕೊಂಕಿದೊಡೇಂ

ಸ್ಮರಚಾಪ ಮನಿಳಿಕದ್ಪುರೆ

ಮರುಳೇ ಪೊಲ್ಲಮೆಯ ಲೇಸು ನಲ್ಲರ ಮೈಯ್ಯಳ್' (೨ನೇ ಅವತಾರ ೪೨) ಅನ್ನುತ್ತಾಳೆ. ಈ ಮಾತು ಆಕೆಗೆ ಆತನಲ್ಲಿದ್ದ ಗಾಢ ಮೋಹದ ಪ್ರತೀಕವಾಗಿದೆ. ಇಲ್ಲಿ ಒಲಿದವನೇ ಚೆಲುವನು ಎಂಬ ಭಾವನೆಯನ್ನು ತಾಳಿದಂತಿದೆ.

ಹೀಗೆ ಬೇವನ್ನು ಮೆಚ್ಚಿದ ಕಾಗೆಗೆ ಮಾವು ನಿಕೃಷ್ಟವಾಗುವಂತೆ, ಪತಿಯ ವಿಷಯದಲ್ಲಿ ಮನಸ್ಸು ಹಗುರವಾಯಿತು. ಯಶೋಧರನಿಂದ ಕ್ರೂರ ನಡವಳಿಕೆ ಅಮೃತಮತಿಗೆ ನಡೆಯಲಿಲ್ಲ. ಆದರೆ ಬದಗ ಅವಳ ಮುಂಗುರುಳುಗಳನ್ನು ಎಳೆದು, ಮಿಳಿಯಿಂದ ಅವಳನ್ನು ಬಡಿದು, 'ತೋರ ಮುಡಿವಿಡಿದು ಕುಡಿಯಂ ನಾರಂ ತದೆವಂತೆ ತೆದೆದು ಬೀಟೆಯ ಕಾಲಿಂ ಬಾರೇಳುವಂತೆ ಒದೆಯುತ್ತಾನೆ. ಇಲ್ಲಿ ಬದಗ ಅವಳನ್ನು ಕ್ರೂರವಾಗಿ ಹಿಂಸಿಸಿದಾಗಲೂ ಅವಳು ಸೈರಿಸುತ್ತಾಳೆ. ಆದರೆ ಇದು ಆಕೆಗೆ ಹಿಂಸೆ ಎಂದೆನಿಸಲಿಲ್ಲ. ಆದರೆ ಆಕೆಯು

'ತಡವಾದುದುಂಟು ನಲ್ಲನೆ

ಬಡಿ ಮುಳಿಯದಿರರಸನೆಂಬ ಪಾತಕನೆನ್ನಿಂ

ತೊಡೆಯೇರಿಸಿ ಕೇಳಿಕೆಯಾ

ದೊಡೆ ನೋಡುತ್ತಿರ್ದೆನು (೨ನೇ ಅವತಾರ ೫೧)

ಆ ಕುರೂಪಿಯನ್ನು ಕುರಿತು

'ಕಿವಿಸವಿ ದನಿ ಗಣ್ಬವಿ ರೂ

ಪವಧರಿಸೆಲೆ ಗಜವೆಡಂಗ ನಿನ್ನುಟಿದೊಡೆ ಸಾ

ವವಳನಗೆ ಮಿಕ್ಕ ಗಂಡರ್

ಸವಸೋದರರೆಂದು ತಿಳಿದಿಪಳ್ ನಂಬುಗೆಯಂ (೨ನೇ ೫೨)

ನಂಬಿಕೆಯನ್ನು ಹುಟ್ಟಿಸುತ್ತಾಳೆ.

ಅದೇ ಯಶೋಧರ ನೈದಿಲೆಯ ಹೂವಿನಿಂದ ಹೊಡೆಯಲು ಅವಳು ಮೂರ್ಛೆ ಹೋಗುತ್ತಾಳೆ. ಆಗ ಯಶೋಧರ "ಅಯ್ಯಯ್ಯೋ ! ನೊಂದಳು! ಸುಕುಮಾರಿಯನ್ನು ಮೇಲಕ್ಕೆತ್ತಿ! " ಎಂದು ವ್ಯಂಗ್ಯದ ಮಾತನ್ನು ಆಡಿದಾಗ ಸಿಟ್ಟಿಗೆದ್ದು, ವೈರಾಗ್ಯ ತಾಳಿ ಅಡವಿಗೆ ಹೊರಟಿದ್ದ ಗಂಡ-ಅತ್ತೆಯರಿಗೆ ವಿಷವಿಟ್ಟು ಕೊಲ್ಲುತ್ತಾಳೆ. ಇಲ್ಲಿ ಹಿಂಸೆಯ - ಅಹಿಂಸೆಯ ಪರಿಕಲ್ಪನೆಯನ್ನು ಗುರುತಿಸಬಹುದು. ಇಲ್ಲಿ ಯಶೋಧರ ಮಾನಸಿಕ ಹಿಂಸೆಯಿಂದ ಚುಚ್ಚು ಮಾತನ್ನಾಡಿದರೆ ಅಮೃತಮತಿ ಹಿಂಸೆಯನ್ನು ಮಾಡುತ್ತಿದ್ದೇನೆಂದು ತಿಳಿಯದೆ ನರಕಯಾತನೆಯನ್ನು ಈ ಜನ್ಮದಲ್ಲೇ ಅನುಭವಿಸುತ್ತಾಳೆ.

ಅಮೃತಮತಿಯ ಪ್ರಣಯವನ್ನು ಅಧಃಪತನವೆಂದೂ ಅದಕ್ಕೆ ಪ್ರತಿಯಾಗಿ ಸಂಕಲ್ಪ ಹಿಂಸೆಯ ಪಾಪಕ್ಕೆ ಭವಾಂತರಗಳಲ್ಲಿ ತೊಳಲಾಡಿ ಕೊನೆಗೆ ಸದ್ಗತಿಯನ್ನು ಪಡೆದ ಯಶೋಧರ ಊರ್ಧ್ವಗಾಮಿ ಚೇತನವೆಂದು ಹೆಚ್ಚಿನ ವಿಮರ್ಶಕರು ಅಭಿಪ್ರಾಯ ಪಟ್ಟಿದ್ದಾರೆ.

ಹುಳಿತು ನಾರುತ್ತಿದ್ದರೂ ಅಷ್ಟಾವಂಕನೇ ತನಗೆ ಕಾಮದೇವನೆಂದು ಕೊನೆತನಕ ಭಾವಿಸಿದ ಅಮೃತಮತಿಯ ಅಭಿರುಚಿಗೆ ನಾವು ಜುಗುಪ್ಸೆ ಪಟ್ಟರೂ ಅವಳ ಸ್ಥಿರವಾದ ಅನನ್ಯವಾದ ಪ್ರಣಯಕ್ಕೆ ತೂಗಬೇಕಲ್ಲವೇ ?[೧]

ಅಷ್ಟಾವಂಕನೊಡನೆ ಕೂಡಿ ಅಸಹ್ಯವಾದ ವ್ಯಭಿಚಾರದ ಪಾಪವನ್ನು ಮಾಡಿದ್ದಲ್ಲದೆ, ಗಂಡ ಅತ್ತೆಯರಿಗೆ ವಿಷವಿಟ್ಟು ಕೊಂದ ಹಿಂಸೆಯ ಪಾಪ ಘೋರವಾದದ್ದು. ಹೀಗೆ ಆಕೆಯು ಯಶೋಧರನನ್ನು ಬಿಟ್ಟು ಅಷ್ಟಾವಂಕನಲ್ಲಿ ಪ್ರೀತಿಯನ್ನು ಹೊಂದಿದ ಸಂದರ್ಭದಲ್ಲಿ ಕವಿ ಮನಸಿಜನ ಮಾಯೆ ವಿಧಿವಿಳಸನ ನೆರಂಬಡೆಯ ಕೊಂದು ಕೂಗದೆ ನರರಂ ಎಂದು ಉದ್ಗಾರ ಎತ್ತುತ್ತಾನೆ.

ಬದಗನ ಸಹವಾಸದಿಂದ ತೊನ್ನು ರೋಗ ಪೀಡಿತಳಾದರೂ ಮೈಯಿಂದ ಕೀವು ಬಸಿಯುತ್ತಿದ್ದರೂ ಅವನನ್ನು ಅವಳು ಬಿಡಲಾರಳು. ಬದಲಾಗಿ ಅವನಿಗೆ ಕಿಂಚಿತ್ ನೋವಾದರೂ "ಆನ್ ಬೆಂದೆನ್" ಎಂದು ದುಃಖಿಸುವವಳು. ಅವಳು ಕೊನೆಯ ತನಕವೂ ತಾನು ಮಾಡಿದ ಕೃತ್ಯಗಳಿಗಾಗಿ ಸ್ವಲ್ಪವೂ ಪಶ್ಚಾತ್ತಾಪ ಪಡದೆ, ಅಷ್ಟಾವಂಕನಿಗಾಗಿ ಮಾಂಸ, ಕಳ್ಳುಗಳನ್ನು ಸೇವಿಸತೊಡಗುತ್ತಾಳೆ. ಅವನು ಕೊಡುವ ಹಿಂಸೆಯನ್ನು ಸಹಿಸಿ, ತನ್ನ ವೈಭವವನ್ನು ಬಿಟ್ಟು ಜನರ ನಿಂದೆಗೆ ಗುರಿಯಾಗಿ ಹಲವು ರೋಗಗಳಿಗೆ ತುತ್ತಾದರೂ ಇವೆಲ್ಲವೂ ತಾನು ಒಲಿದ ಅಷ್ಟಾವಂಕನಿಗೆ ಎಂದು ತಿಳಿದು ತಾನು ಯಶೋಧರನಿಗೆ ಮಾನಸಿಕ ಹಿಂಸೆ ಕೊಡುತ್ತಿದ್ದೇನೆಂದು ತಿಳಿಯದೆ ಈಕೆ ಬದಗನೊಂದಿಗೆ ಜೀವನದಲ್ಲಿ ಸ್ವರ್ಗ ಸುಖವನ್ನು ಪಡೆದು ಕೊನೆಗೆ ಧೂಮಪ್ರಭೆ ಎಂಬ ನರಕಕ್ಕೆ ಬಲಿಯಾಗುತ್ತಾಳೆ.

ಹೀಗೆ ಸ್ವರ್ಗೀಯ ಸೌಂದರ್ಯವನ್ನು ಹೃದಯವಲ್ಲಭನಾದ ಪತಿಯನ್ನು ಹೊಂದಿ ದೇವಿಯಂತಿದ್ದ ಅಮೃತಮತಿ ಅದಮ್ಯವಾದ ಮೋಹಕ್ಕೆ ಬಲಿಯಾಗಿ ಹೇಗೆ ಶೀಲವಳಿದಳು, ಗುಣವಳಿದಳು, ರೂಪವಳಿದಳು, ನರಕಕ್ಕಿಳಿದಳು ಎಂಬುದನ್ನು ಜನ್ನ ನಿರೂಪಿಸಿ, ಅವಳ ಅಧೋಗತಿಯ ಹೆಜ್ಜೆ ಹೆಜ್ಜೆಯನ್ನು ಸೂಕ್ಷ್ಮ ದೃಷ್ಟಿಯಿಂದ, ಅನುಪಮ ಶಕ್ತಿಯಿಂದ ಚಿತ್ರಿಸಿದ್ದಾನೆ ಎಂದು ತೀನಂಶ್ರೀ ಹೇಳಿದರೆ ಅಮೃತಮತಿ ಪಾತ್ರಕ್ಕೆ ಹೆಚ್ಚು ವ್ಯಕ್ತಿತ್ವವನ್ನು ಕೊಟ್ಟು ಹೆಚ್ಚು ಸಹಜವಾಗಿಯೂ, ಹೆಚ್ಚು ನಯವಾಗಿಯೂ ತನ್ನದೇ ಆದ ಒಂದು ವರ್ಣ ವೇಳನದಿಂದ ಆ ಪಾತ್ರವನ್ನು ಚಿತ್ರಿಸಿದ್ದಾನೆಂದು ಡಿ.ಎಲ್. ನರಸಿಂಹಾಚಾರ್ಯ ಅಭಿಪ್ರಾಯ ಪಡುತ್ತಾರೆ.[೨]

ತಡವಾದುದುಂಟು ನಲ್ಲನೆ, ಬಡಿ,. ಮುಳಿಯದಿರ್ ಎಂದಾಗಲೀ, ಗಜವೆಡಂಗ ನೀನು ಬಿಡೊಡೆ ಸಾವವಳ್ ಎನಗೆ ಮಿಕ್ಕ ಗಂಡರ್ ಸವಸೋದರರ್ ಎಂದು ಅಷ್ಟಾವಂಕನಿಗೆ ಹೇಳುವ ಮಾತಿನಲ್ಲಿ ಅಂದರೆ ಪತಿವ್ರತೆಯಾಗಿದ್ದ ಅಮೃತಮತಿಯು ಅಷ್ಟಾವಂಕನಿಗೆ ಒಲಿದುದರಿಂದ ಆರಂಭದಲ್ಲಿದ್ದ ಶುದ್ಧ ಮನಸ್ಸು ವಿಕೃತ ಮನಸ್ಸಿಗೆ ಎಡೆಮಾಡಿ ಕೊಡುವುದನ್ನು ಗಮನಿಸಬಹುದು. ಆದ್ದರಿಂದ ಇಲ್ಲಿ ಹಿಂಸೆ ಮಾಡಿದರೆ ಆಗುವ ಘೋರ ಪರಿಣಾವನ್ನು ಗುರುತಿಸಬಹುದು. ಅಂದರೆ ಅಮೃತಮತಿಯ ಪಾತ್ರದ ಮೂಲಕ ಯಾರಿಗೂ ಮಾನಸಿಕ ಹಿಂಸೆ ಮಾಡಬಾರದೆಂಬುದಾಗಿದೆ.

೬. ವಸಂತ ಋತುವಿನ ವರ್ಣನೆ ಹಿಂಸೆಯಿಂದ ಅಹಿಂಸೆಯೆಡೆಗೆ

ಅಷ್ಟಾದಶ ವರ್ಣನೆಗಳಲ್ಲಿ ಒಂದಾದ ನಗರ ವರ್ಣನೆಯನ್ನು ದಾಖಲಿಸಿಕೊಂಡು ಬರುವ ಈ ಕೃತಿಯಲ್ಲಿ ಋತುಮಾನವೂ ಕೂಡಾ ಹಿಂಸೆಯ ರೂಪಕಗಳಾಗಿವೆ.

ದೇವಿಯ ಜಾತ್ರೆಗೆ ಆಗತಾನೆ ಹುಟ್ಟಿದ ಬಾಲಚಂದ್ರನೆ ತಲೆಯೇ, ಚಿಗುರಿದ ಅಶೋಕ ವೃಕ್ಷವೆ ಉರಿಯ ಉಯ್ಯಾಲೆ, ಕೋಗಿಲೆಯ ದನಿಯೆ ಚುಚ್ಚುಮಾತು ಎಂಬಂತೆ ವಸಂತ ಮಾಸ ಕಾಲಿಡುತ್ತದೆ.

ಹಿಂಸೆಯ ಸೂಚನೆಯನ್ನು ಈ ವೃಕ್ಷ ಕೋಗಿಲೆಯ ಧ್ವನಿಯಲ್ಲಿ ಗುರುತಿಸಬಹುದು. ಅಂದರೆ ಇಲ್ಲಿ ಮಾರಿಜಾತ್ರೆಗೆ ಪ್ರಕೃತಿಯು ಹೇಗೆ ಸಿದ್ಧಗೊಂಡಿದೆ ಎಂಬುದನ್ನು ಗುರುತಿಸಬಹುದು. ಆದರೆ ಬಲಿಯ ಮೂಲಕ ಹಿಂಸೆ ನಡೆಯುವುದು ಇವುಗಳಿಗೆ ಇಷ್ಟವಿಲ್ಲ. ಇದರಿಂದ ದೇವತೆಯು ಕೋಪಿಸಬಾರದೆಂದು ಮನಸಿಲ್ಲದ ಮನಸ್ಸಿನಿಂದ ವಸಂತ ಮಾಸ ಕಾಲಿಡುತ್ತದೆ.

ಸಿಸಿರಮನೆ ಪಿಡಿದು ಪರಕೆಗೆ
ವಸಂತನಲರ್ವೋದ ಮಾವಿನಡಿಮಂಚಿಕೆಯೊಳ್
ಕುಸುರಿದಜಿದಡಗಿನಂತೆವೊ
ಲೆಸದುವು ತದನದೊಳುದಿರ್ದ ಮುತ್ತದಮುಗುಳ್ಗಳ್ (೧ನೇ ಅವತಾರ ೩೭)

ಇಲ್ಲಿ ವಸಂತದ ಪ್ರವೇಶ ಕೂಡಾ ಬಲಿಯಿಂದಲೇ ಆಗುವುದನ್ನು ಗುರುತಿಸಬಹುದು.

ಇಲ್ಲಿ ಪ್ರಾಣಿಗಳ ಹಿಂಸೆ ಮಾಡಬಾರದೆಂಬ ದೃಷ್ಟಿಯಿಂದ ಇಲ್ಲಿ ಪ್ರಕೃತಿಗಳು ಬಲಿಯ ರೂಪವಾಗಿ ಮಾರಿಗೆ ಸಂತೋಷ ಪಡಿಸುವ ರೀತಿಯನ್ನು ಗುರುತಿಸಬಹುದು.

ಹಿಂಸೆಗೂ ಕೊನೆಯಿಲ್ಲ ಹಿಂಸೆಗೂ ಪ್ರಾಯಶ್ಚಿತ್ತವಿದೆ ಸಾವಿಗೂ ಪುನರ್ಜನ್ಮವಿದೆ ಎಂಬುದನ್ನು ಕಥೆಯ ಕೊನೆಯಲ್ಲಿ ಬರುವ ವಸಂತ ಋತುವಿನ ವರ್ಣನೆಯಲ್ಲಿ ಗುರುತಿಸಬಹುದು. (೪ನೇ ಅವತಾರದಲ್ಲಿ ೩ರಿಂದ ೧೧ರ ವರೆಗಿನ ವಾಕ್ಯವನ್ನು ಗಮನಿಸಿದರೆ ಹಿಂಸೆಯಿಂದ ಅಹಿಂಸೆಯೆಡೆಗೆ ಎಲ್ಲರೂ ತೆರಳಿದರೂ, ಈ ಸಂದರ್ಭದಲ್ಲಿ ಎಲ್ಲೆಡೆಯೂ ನಾವು ಪ್ರಕೃತಿಗಳ ಹರ್ಷ, ಸೌಂದರ್ಯ ಮತ್ತು ಜೀವನೋಲ್ಲಾಸ ಇವುಗಳನ್ನು ಕಾಣಬಹುದು.

ಮಾವಿನ ಚಿಗುರು ದೀಪದಂತಿದೆ. ಕೋಗಿಲೆಯ ಕೂಗು ಪ್ರಿಯವಾಗಿದೆಯೇ ಎಳೆಚಿಗುರುಗಳ ಕಂಪನ, ಲತೆಯ ಅಲುಗಾಟ, ತೆರೆಗಳ ತಾಳ, ಹೊಸಹೂವುಗಳ ಸೌಂದರ್ಯ ಎಲ್ಲೆಡೆಯೂ ತುಂಬಿದೆ.

ಅಂದರೆ ಕೃತಿಯ ಪ್ರಾರಂಭ ಮತ್ತು ಕೊನೆಯಲ್ಲಿ ಬರುವ ವಸಂತ ಋತುವಿನ ವರ್ಣನೆಗಳು ಹಿಂಸೆಯಿಂದ ಅಹಿಂಸೆಯೆಡೆಗೆ, ಪಾಪದಿಂದ ಪಾಪ ವಿಮುಕ್ತಿಯೆಡೆಗೆ, ಸಾವಿನಿಂದ ಪುನರ್ಜನ್ಮದೆಡೆಗೆ ಸಾಗುವ ಈ ಕೃತಿಯು ಅದ್ಭುತವಾಗಿದೆ.

ಹೀಗೆ ಇಡೀ ಕಥೆಯಲ್ಲಿ ಜೈನಧರ್ಮದ ಅಹಿಂಸಾತತ್ವ ಎಲ್ಲ ಕಡೆ ಮೊಳಗುತ್ತದೆ.

ಮನುಷ್ಯ ಸ್ವಭಾವ, ವಿಧಿವಿಲಾಸ, ಧರ್ಮತತ್ತ್ವ ಇವೆಲ್ಲಕ್ಕೂ ಸರಿಹೋಗುವಂತೆ ಯಶೋಧರ ಚರಿತೆಯಲ್ಲಿ ಜನ್ನನು ಉಜ್ವಲವಾದ ರೀತಿಯಲ್ಲಿ ಪ್ರಣಯ ಸಮಸ್ಯೆಯೊಂದನ್ನು ಚಿತ್ರಿಸಿ ಹಿಂಸೆ - ಅಹಿಂಸೆಗಳ ಪರಿಣಾಮವನ್ನು ನಿರೂಪಿಸಿದ್ದಾನೆ.[೧೪]

ಯಶೋಧರ ಚರಿತೆ "ಕಿರಿದರೊಳೆ ಪಿರಿದುಮರ್ಥ"ವನ್ನು ತುಂಬಿಕೊಂಡಿರುವ ಅಸಾಧಾರಣ ಕಾವ್ಯ

ಎಂಬ ಕೃಷ್ಣಕುಮಾರ್ ಸಿ.ಪಿ.ಯವರ ಮಾತು ಸರಿಯಾಗಿದೆ.

ಹೀಗೆ ಜನ್ನ ಯಶೋಧರ ಚರಿತೆಯಲ್ಲಿ ಹಿಂಸೆಯಿಂದಾಗುವ ಘೋರದುರಂತವನ್ನು ಬಿಂಬಿಸಿದ್ದಾನೆ. ಜನ್ನ ಈ ಸಂದೇಶದ ಹಾಗೂ ಪಾತ್ರದ ಮೂಲಕ ಪ್ರಸ್ತುತ ಅಹಿಂಸಾಮಾರ್ಗಕ್ಕೆ ಜನರನ್ನು ಕರೆದೊಯ್ಯುವ ಪ್ರಕ್ರಿಯೆಯನ್ನು ಗಮನಿಸಬಹುದು. ಒಂದು ಉನ್ನತ ಸತ್ಯ, ಧರ್ಮ, ಅಹಿಂಸಾತ್ಮಕ ಸಮಾಜ ನಮ್ಮದಾಗಬೇಕೆಂಬ ಆಶಯವನ್ನು ಹೊಂದಿರುವ ಜನ್ನನ ಈ ಕೃತಿಯಲ್ಲಿ "ಸಮಾಜ ಪರಿವರ್ತನಾ ಶೀಲ" ಅಂಶ ಒಳಗೊಂಡಿದೆ.

ಅಧ್ಯಾಯ ೫

ರತ್ನಾಕರನ ಭರತೇಶ ವೈಭವದಲ್ಲಿ ಪ್ರತಿಪಾದಿತವಾದ ಅಹಿಂಸೆ

ರತ್ನಾಕರವರ್ಣಿಯು ತನ್ನ ಭರತೇಶ ವೈಭವದಲ್ಲಿ ಪ್ರತಿಪಾದಿಸಿದ ಅಹಿಂಸಾತತ್ವವನ್ನು ಪ್ರಮುಖವಾಗಿ ೪ ನೆಲೆಗಳಲ್ಲಿ ಗುರುತಿಸುವ ಪ್ರಯತ್ನ ಮಾಡಲಾಗಿದೆ.

೧. ಭರತನ ದಿನಚರಿಯಲ್ಲಿ ಅಹಿಂಸಾವ್ರತ ಪಾಲನೆ

೨. ಸಾಂಸಾರಿಕ ಜೀವನದ ಸಂದರ್ಭಗಳಲ್ಲಿ ಅಹಿಂಸೆ

೩. ಭರತನ ದಿಗ್ವಿಜಯದಲ್ಲಿ ಅಹಿಂಸೆ

೪. ಭರತ ಮತ್ತು ಬಾಹುಬಲಿಯರ ಯುದ್ಧ ಮತ್ತು ತ್ಯಾಗದ ಸಂದರ್ಭಗಳಲ್ಲಿ ಅಹಿಂಸೆ.

೧. ಭರತನ ದಿನಚರಿಯಲ್ಲಿ ಅಹಿಂಸಾವ್ರತ ಪಾಲನೆ :

ಅಯೋಧ್ಯಾಪುರದಲ್ಲಿ ರಾಜ್ಯಭಾರ ಮಾಡುತ್ತಿದ್ದ ಭರತನು ಉದಯದಲ್ಲಿಯೇ ಎದ್ದು ಮೊದಲು ದೇವತಾರ್ಚನೆಯನ್ನು ನೆರವೇರಿಸುವುದು ಸಂಪ್ರದಾಯವಾಗಿತ್ತು.

ಆ ವಿಭುವೊಂದಿನದುದಯದೊಳೆದ್ದು
ದೇವತಾರ್ಚನೆಯನು ಮಾಡಿ
ಚಾವಡಿಗೈದಿ ತಾನೋಲಗವಾದೊಂದು
ಶ್ರೀ ವಿಲಾಸವನೇನನೆಂಬೆ (ಆಸ್ಥಾನ ಸಂಧಿ ೧೬)

ಯುದ್ಧದ ಸಂದರ್ಭದಲ್ಲಿ ಕೂಡಾ ಜಿನ ಭಗವಂತರಿಗೆ ಮೊದಲು ನಮಸ್ಕರಿಸುವುದು ಆತನ ಪದ್ಧತಿ.

ಕ್ಷತ್ರಿಯ ಕರ್ಮದ ದೇವತಾರ್ಘ್ಯವನಿತ್ತು
ಸ್ತೋತ್ರ ಜಪವನೊಲ್ದು ಮಾಡಿ
ಸುತ್ರಾಮನಂತೆ ಪೂಜಿಸಿದನು ಜಿನನ ಚಾ
ರಿತ್ರ ಶುದ್ಧಾಂಗಿಯರ್ವೆರಸಿ (ಪಾರಣಾ ಸಂಧಿ ೧೦)

ನಂತರ ಮಧ್ಯಾಹ್ನದವರೆಗೆ ಕವಿಗೋಷ್ಠಿಯಲ್ಲಿ ಭರತ ಚಕ್ರಿ ಪಾಲ್ಗೊಳ್ಳುತ್ತಾನೆ. ಸಭೆಯ ಪಂಡಿತರು ಉತ್ತಮ ರಾಜನೆಂದರೆ ಹೇಗಿರಬೇಕು ಎಂದು ಈ ರೀತಿ ವಿವರಣೆ ನೀಡುತ್ತಾರೆ :

ಭೋಗ ವಿಚಾರವು ಬೇಕು ನೃಪತಿಗಾತ್ಮ
ಯೋಗ ವಿಚಾರವು ಬೇಕು
ರಾಗ ರಸಿಕನಾಗಬೇಕು ಭಾವಿಸೆ ವೀತ-
ರಾಗ ರಸಿಕನಾಗಬೇಕು (ಕವಿ ವಾಕ್ಯ ಸಂಧಿ ೬)

ಅಂದರೆ ಭರತನ ಯೋಗ-ಭೋಗ ಸಮನ್ವಿತವಾದ ವ್ಯಕ್ತಿತ್ವ ಇಲ್ಲಿ ಪರಿಚಿತವಾಗಿದೆ. ಭೋಗದಲ್ಲೇ ಮೈಮರೆತು ಇಂದ್ರಿಯಗಳಿಗೆ ದಾಸನಾಗಿ ಹಿಂಸೆಯಲ್ಲಿ ತೊಡಗಬಾರದು, ವೀತರಾಗದಲ್ಲೂ ರಸಿಕನಾಗಿರಬೇಕು, ಎಂಬ ತತ್ವವನ್ನು ಪ್ರತಿಪಾದಿಸುವವನು ಭರತ. ವೀತರಾಗ ರಸಿಕನಿಗೆ ಹಿಂಸೆ ದೂರ ಎಂದು ಹೇಳುತ್ತಾರೆ.

ಭೊಗ್ಗನೊಂದೇ ದಿನದೊಳು ತೋರನಾತ್ಮನು
ಬಗ್ಗಿದಾಗಳ ಬಾಗಿಲಹುದೆ
ನುಗ್ಗೆಯ ಮರನಲ್ಲ ಕರ್ಮವೆಂಬುದು ಕರ್ಮ
ಜಗ್ಗಲೊಯ್ಯನ ತೋರುತಿಹನು (ಕವಿ ವಾಕ್ಯ ಸಂಧಿ ೩೦)

ಅಂದರೆ ನೂರೊಂದು ಭೋಗದಲ್ಲಿ ನಿರತನಾಗಿರುವ ವ್ಯಕ್ತಿ ಇದ್ದಕ್ಕಿದ್ದಂತೆ ದೇವರನ್ನು ಸಾಕ್ಷಾತ್ಕರಿಸಲು ಹೊರಟರೆ ಅದು ಸಾಧ್ಯವೇ ಇಲ್ಲ. ಆದ್ದರಿಂದ ಅದಕ್ಕೆ ಪ್ರಯತ್ನಿಸಬೇಕು. ಕರ್ಮ ಸುತ್ತಿಕೊಳ್ಳುವಂತದ್ದು. ನುಗ್ಗೆ ಮರ ಭಾರ ಬಿದ್ದ ತಕ್ಷಣ ಅದರ ಟೊಂಗೆ ಮುರಿದಂತೆ.

ಹೀಗೆ ಎಲ್ಲಾ ಕವಿಗಳ ಗೋಷ್ಠಿಯನ್ನು ಕೇಳಿದ ಭರತನ ಮನಸ್ಸನ್ನು ತನ್ನ ಅರ್ಥಪೂರ್ಣವಾದ ಮಾತುಗಳಿಂದ ಗೆದ್ದ ಧಿಮಿಜ ಕಲಾಧರನ ಪಾಂಡಿತ್ಯವನ್ನು ಗಮನಿಸಿದ ಭರತನು ಈತ ತನ್ನ ವ್ಯಕ್ತಿತ್ವಕ್ಕೆ ಸರಿಹೊಂದುವ ಮಾತುಗಳನ್ನು, ಸ್ವತಃ ತಾನು ಅನುಭವಿಸಿದ ರೀತಿಯನ್ನು ಹೇಳುತ್ತಿದ್ದಾನಲ್ಲ. ಈತನಲ್ಲಿ ಮಹಾಪಂಡಿತನಿಗಿರುವ ಎಲ್ಲಾ ಅರ್ಹತೆಗಳು ಇದೆ ಎಂದು ಮನಸ್ಸಿನಲ್ಲೇ ಆತನ ಬಗ್ಗೆ ಹೆಮ್ಮೆಪಡುತ್ತಾನೆ. ನಂತರ ಎಲ್ಲರೂ ಮಂಡಿಸುವ ಕವಿತಾಗೋಷ್ಠಿಗೆ ಮೆಚ್ಚುಗೆಯನ್ನು ವ್ಯಕ್ತಪಡಿಸಿ ಎಲ್ಲರಿಗೂ ಕೊಡುಗೆಗಳನ್ನು ನೀಡಿ ಸತ್ಕರಿಸುತ್ತಾನೆ.

೨. ಸಾಂಸಾರಿಕ ಜೀವನ ಸಂದರ್ಭಗಳಲ್ಲಿ ಅಹಿಂಸೆ :

ಭರತನಿಗೆ ಸಹಸ್ರಾರು ಮಡದಿಯರು. ಹೀಗಿದ್ದರೂ ಆತನ ವೈವಾಹಿಕ ಬದುಕಿನಲ್ಲಿ ಯಾವುದೇ ಭಿನ್ನಾಭಿಪ್ರಾಯಕ್ಕೂ, ಕಲಹಕ್ಕೂ ಅವಕಾಶವಿರಲಿಲ್ಲ. ಏಕೆಂದರೆ ಆತ ಎಲ್ಲರೊಂದಿಗೂ ಅನ್ಯೋನ್ಯತೆಯಿಂದ ನಡೆದುಕೊಳ್ಳುತ್ತಿದ್ದ. ಪ್ರತಿಯೊಬ್ಬರ ಮನಸ್ಸು ಇಷ್ಟಾರ್ಥಗಳನ್ನು ಅವಲೋಕಿಸಿ, ಅದನ್ನು ನೆರವೇರಿಸುವ ಸೂಕ್ಷ್ಮ ಮನಸ್ಸಿನವನು. ಪತ್ನಿಯರು ಆತನೊಂದಿಗೆ ಊಟ ಮಾಡಲು ಬಯಸಿದಾಗ ಭರತ ಅವರೆಲ್ಲರ ಭಾವನೆಗಳನ್ನು ಅರಿತು ಯಾರಿಗೂ ನೋವಾಗದಂತೆ ಎಚ್ಚರ ವಹಿಸಿ 'ಒಂದಾಗಿ ಪಂಕ್ತಿಯೊಳುಣ ಬೇಕು, ಬನ್ನಿರೌ' ಎಂದು ಹೇಳುವುದರ ಮೂಲಕ ಅವರೆಲ್ಲರ ಬಯಕೆಯನ್ನು ಈಡೇರಿಸುತ್ತಾನೆ.

ಅದೇ ರೀತಿ ಊಟಕ್ಕೆ ಮೊದಲು ಕೈತೊಳೆಯುವ ಸಂದರ್ಭದಲ್ಲಿ ಮಡದಿಯೋರ್ವಳಿಂದ ಗಿಂಡಿಯು ಕೈತಪ್ಪಿ ಬಿದ್ದಾಗ ಭರತನು ಕೋಪಿಸಿಕೊಳ್ಳುವುದಿಲ್ಲ. ಬದಲಾಗಿ ಆಕೆಯ ಮನಸ್ಸಿಗೆ ನೋವಾಗದಂತೆ ಮತ್ತೋರ್ವಳು 'ಜಿನಸಿದ್ಧಯೆಂದೆಡೆಯೊಳಾಂತಳು' ಅಂದರೆ ಅದು ಜಿನ ಸಿದ್ಧ ದೈವಸಂಕಲ್ಪ ಎಂದಾಗ ಭರತ ಈ ಮಾತನ್ನು ಕೇಳಿ ಮೆಚ್ಚುತ್ತಾನೆ. ಇಲ್ಲಿ ಭರತನಂತೆ ಆತನ ಪತ್ನಿಯರೂ ಕೂಡ ಅಹಿಂಸೆಯನ್ನು ಮೈಗೂಡಿಸಿರುವುದನ್ನು ಗಮನಿಸಬಹುದು.

ಊಟದ ಸಂದರ್ಭದಲ್ಲಿ ಕೆಲವರು ಬಡಿಸುತ್ತಿದ್ದು, ಇನ್ನು ಕೆಲವರು ಊಟಕ್ಕೆ ಕುಳಿತಿದ್ದಾಗ ತಾನೊಬ್ಬನೇ ಉಣಲಾರೆ ಎಂದು ಊಟ ಬಡಿಸುತ್ತಿದ್ದವರನ್ನು ಕರೆದು ತನ್ನ ಎಲೆಯಿಂದಲೇ ಅವರಿಗೆ ತುತ್ತು ನೀಡುತ್ತಾನೆ.

ವಿಶ್ರಾಂತಿ ಸಮಯದಲ್ಲಿ ಹೆಂಗಳೆಯರು ನಿಂತು ಬೀಸಣಿಗೆ ಬೀಸುತ್ತಿದ್ದುದನ್ನು ಕಂಡು .... ನಿಂದೋಲಗ ಸಾಕು ಕುಳ್ಳಿರಿ ಎಂದು ಹೇಳುವಲ್ಲಿ ಆತನ ಹೃದಯವಂತಿಕೆಯನ್ನು ಗುರುತಿಸಬಹುದು.

ಭರತನು ಉಪ್ಪರಿಗೆಯಲ್ಲಿದ್ದಾಗ ಆತನನ್ನು ನೋಡಲು ಹೋದ ಸಂದರ್ಭದಲ್ಲಿ ಮಡದಿಯರೆಲ್ಲ ನೀಲಾಂಬುಜವ, ಹೊಂದಾವರೆ, ಸಂಪಗೆ, ಸುರಗಿ ಮಾಲೆ, ಕೇದಗೆ, ಬೆಟ್ಟದಾವರೆ ಹೀಗೆ ವಿಧ ವಿಧವಾದ

ಹೂವನ್ನು ಹಿಡಿದುಕೊಂಡು ಉಪ್ಪರಿಗೆಗೆ ಹೋಗುತ್ತಾರೆ. ಆದರೆ ಒಬ್ಬಳು ನಾಚುತ್ತಾ ಆತನಿಗೆ ಮಲ್ಲಿಗೆಯ ಹಾರವನ್ನು ಕೊಡುವಾಗ, ಹಾರ ಆಕೆಯ ಕೈಯಿಂದ ಜಾರಿದಾಗ ಭರತ ಅದಕ್ಕಾಗಿ ಕೋಪಿಸದೆ, ಆಕೆಯ ಮನಸ್ಸಿನ ಭಯ, ದುಗುಡವನ್ನು ನಿವಾರಿಸಲು 'ಜಾರಿದರೇನದೆಮ್ಮಗೆ' ಎಂದನು.

ಎಲ್ಲರೂ ಒಂದೊಂದು ಹೂವನ್ನು ಕೊಟ್ಟಾಗ ಮತ್ತೊಬ್ಬಳು ಮಾವಿನ ತಳಿರನ್ನು ತಂದುಕೊಟ್ಟಾಗ ಉಳಿದ ಮಡದಿಯರೆಲ್ಲರೂ ನಗುತ್ತಾರೆ. ಭರತ ಅದನ್ನು ಗಮನಿಸದೆ ತಾನೂ ಅವರಂತೆ ನಕ್ಕರೆ ಆಕೆಯ ಮನನೋಯುವುದೆಂದು ತಿಳಿದು ಪ್ರೀತಿಯಿಂದ, ಸಂತೋಷದಿಂದ ಸ್ವೀಕರಿಸುತ್ತಾನೆ.

ಅದೇ ಸಂದರ್ಭದಲ್ಲಿ ಇನ್ನೋರ್ವಳು 'ಪಾದರಿ' ಹೂವನ್ನು ಕೊಡುವಾಗ ಆ ಹೂ ಜಾರಿ ಆತನ ಕಾಲಿನ ಮೇಲೆ ಬೀಳುತ್ತದೆ. ಆಗ ಭರತ ಅದನ್ನು ತನ್ನ ಕಾಲಿನಿಂದ ಒದೆಯುತ್ತಾನೆ. ಈ ಸನ್ನಿವೇಶ, ಆತನನ್ನು ಬಯಸಿ ಬರುವ ಇತರ ಸ್ತ್ರೀಯನ್ನು ಒದೆಯುವಂತೆ 'ಪಾದರಿ'ಯನ್ನು ಒದ್ದ. ಇಲ್ಲಿ ಭರತನ ಬದುಕಿನಲ್ಲಿ ಬೇರೆ ಹೆಣ್ಣಿಗೂ ಪ್ರವೇಶ ಇಲ್ಲದಿರುವ ಸೂಚನೆ ಇದೆ. ಈ ಮೂಲಕ ಆತ ತನ್ನ ಪತ್ನಿಯರಲ್ಲಿ ಮನಸ್ಸು ನೋಯದಂತೆ ನೋಡಿಕೊಳ್ಳುವಂತೆ ಸಫಲನಾಗುತ್ತಾನೆ.

ಮಡದಿಯರೆಲ್ಲ ಒಂದು ದಿನ ಕಾಲ ಕಳೆಯುವ ಸಂದರ್ಭದಲ್ಲಿ : ಒಬ್ಬಳು ಹಾಡು ಹಾಡುವುದನ್ನು ಕೇಳಿ ಪಂಡಿತೆ ರಾಜನ ಬಳಿ ಬಂದು ನಿನ್ನ ಆಸ್ಥಾನದಲ್ಲಿ ಸಾಹಿತ್ಯ ರಚನೆ ಮಾಡುವ ಅರಸಿಯರಿದ್ದಾರೆ. ಹೊಸ ಕಾವ್ಯವನ್ನು ಬರೆಯುವ ಪಂಡಿತರಿದ್ದಾರೆಂದು ಹೇಳುತ್ತಾಳೆ. ಆಗ ಭರತ ಯಾರು ಕಾವ್ಯವನ್ನು ಹೇಳಿದವರು, ಯಾರ ವರ್ಣನೆ ಅದು, ಮತ್ತು ಆ ಕಾವ್ಯವನ್ನು ಪ್ರೀತಿಯಿಂದ ಓದಿ ತಿದ್ದಿದವರು ಯಾರು? ಎಂದು ಕೇಳುತ್ತಾನೆ. ಆಗ ಪಂಡಿತೆ ಬೇರೆ ಯಾರೂ ಅಲ್ಲ, ನಿನ್ನ ಅಂತಃಪುರದ ರಾಣಿಯರಲ್ಲಿ ಒಬ್ಬಳು. ಅದು ಪರರ ಸ್ತುತಿ ಅಲ್ಲ. ನಿನ್ನನ್ನೇ ಕುರಿತ ವರ್ಣನೆ. ಅದನ್ನು ನೀನೇ ತಿದ್ದಬೇಕು. ಇತರರಿಗೆ ತಿದ್ದುವ ಅರ್ಹತೆ ಇಲ್ಲ ಎಂದು ಹೇಳುತ್ತಾಳೆ.

ಕೊನೆಗೆ ಕಾವ್ಯವನ್ನು ಬರೆದವಳು ಕುಸುಮಾಜಿಯೇ ಎಂದು ತಿಳಿದಾಗ ಆಕೆ ನಾಚಿಕೆಯಿಂದ ವ್ರತದ ನೆಪವೊಡ್ಡಿ ಅಲ್ಲಿಂದ ತಪ್ಪಿಸಿಕೊಳ್ಳಲು ಪ್ರಯತ್ನಿಸಿದಾಗ 'ಸರಿ ಹೋಗು, ನಿನಗೆ ಕಂಕಣ ಬೇಡವೇ, ತಗೋ' ಎಂದು ಭರತ ಸುವರ್ಣ ಕಂಕಣವನ್ನು ಹಿಡಿದು ಕೈಮುಂದೆ ಒಡ್ಡಿದಾಗ ಅದನ್ನು ನಿಜವೆಂದು ನಂಬಿ ಕಂಕಣವನ್ನು ಪಡೆಯಲು ಮುಂದಾದ ಕುಸುಮಾಜಿಯನ್ನು ತನ್ನ ಬಳಿಗೆ ಎಳೆದುಕೊಳ್ಳುತ್ತಾನೆ. ಆಗ ಆಕೆ ಅಲ್ಲಿಂದ ಹೋಗಲು ಅನುವಾದಾಗ ಆಕೆಯ ಮೃದುತ್ವವನ್ನು ಕುರಿತು ರಾಜ ಪಂಡಿತೆಯಲ್ಲಿ ಕುಸುಮಾಜಿ ಹೂವಿನಂತೆ ಮೃದುವಾಗಿ ಏಳುವ ರೀತಿಯನ್ನು ನೋಡಿದೆಯಾ ಎಂದಾಗ ಪಂಡಿತೆ ಹೀಗೆನ್ನುತ್ತಾಳೆ :

ಕಂಡೆನಹುದು ಸ್ವಾಮಿ ಕಾಂತೆಯರೊಳಗನು
ಕಂಡವರಾರು ನಿನ್ನಂತೆ (ರಾಜ ಲಾವಣ್ಯ ಸಂಧಿ ೧೭)

ಇಲ್ಲಿ ಭರತ ಪತ್ನಿಯರ ಮನಸ್ಸಿಗೂ ಕಿಂಚಿತ್ ನೋವಾಗದಂತೆ ಅವರ ಮನಸ್ಸಿನ ಭಾವನೆಗಳನ್ನು ಅರಿತು ನಡೆದುಕೊಳ್ಳುವುದನ್ನು ಗುರುತಿಸಬಹುದು.

ಹೀಗೆ ಭರತ ಪತ್ನಿಯರಲ್ಲಿ ಯಾವುದೇ ರೀತಿಯ ಮನಸ್ತಾಪಕ್ಕೂ ಎಡೆ ಮಾಡಿಕೊಡುವುದಿಲ್ಲ. ಭರತನ ಸ್ವಭಾವ ಈ ರೀತಿ ಇದೆ.

ಅಂಬರದೊಳಗಿದ್ದು ಸೂರ್ಯನೊಬ್ಬನು ಜಲ

ತುಂಬಿದ ಹಲವು ಕುಂಭದೊಳು

ಬಿಂಬಿಸುವಂತೆಲ್ಲ ಪೆಂಗಳೆದೆಯೊಳೀತ

ನಿಂಬುಗೊಂಡಿಹ ಪರಿಯೇನು (ರಾಜಲಾವಣ್ಯ ಸಂಧಿ ೨೩)

ಅಂದರೆ ಸೂರ್ಯ ಒಬ್ಬನೇ ಇರಬಹುದು. ಸಾವಿರ ಕೊಡಗಳಲ್ಲಿ ನೀರು ತುಂಬಿಸಿದರೆ ಸಾವಿರಾರು ಸೂರ್ಯರು ಕಾಣಿಸುತ್ತಾರೆ. ಹಾಗೆಯೇ ಭರತ ಒಬ್ಬನಿದ್ದರೂ ಎಲ್ಲ ಹೆಣ್ಣುಗಳ ಮನದಲ್ಲಿ ಇಂಬುಗೊಂಡಿದ್ದಾನೆ.

ಹೇಗೆಂದರೆ ಮುನಿಯ ತಪಸ್ಸಿನ ತಾಣದಲ್ಲಿ ಹುಲಿ, ಜಿಂಕೆಗಳು ತಮ್ಮ ವೈರತ್ವವನ್ನು ಮರೆತು ನಿರ್ಭಯವಾಗಿ ಸುಳಿಯುವಂತೆ ಭರತನ ಆಸ್ಥಾನದಲ್ಲಿ ಎಲ್ಲ ಮಡದಿಯರೂ ತಮ್ಮೊಳಗೆ ಸವತಿ ಮತ್ಸರವನ್ನು ತೊರೆದು ಅನ್ಯೋನ್ಯವಾಗಿರುತ್ತಾರೆ. ಕಾರಣವೇನೆಂದರೆ ಭರತನ ಪ್ರೀತಿ ಅವರ ಸ್ವಭಾವಕ್ಕನುಗುಣವಾಗಿ ಇದ್ದು ತನ್ನಿಂದ ಯಾರೂ ನೋಯದಂತೆ ಎಲ್ಲರನ್ನೂ ಸಂಭಾಳಿಸುತ್ತಾನೆ.

ಹೀಗೆ ಭರತ ತನ್ನ ದಿನನಿತ್ಯದ ಬದುಕಿನ ಸಂದರ್ಭಗಳಲ್ಲಿ ತನ್ನಿಂದ ಇತರರಿಗೆ ಕಿಂಚಿತ್ತೂ ನೋವಾಗದಂತೆ ಅಹಿಂಸೆಯನ್ನು ಪಾಲನೆ ಮಾಡುವುದನ್ನು ಗಮನಿಸಬಹುದು.

೩. ಭರತನ ದಿಗ್ವಿಜಯದಲ್ಲಿ ಅಹಿಂಸೆ :

ಭರತನ ದಿಗ್ವಿಜಯಕ್ಕೆ ಸ್ಫೂರ್ತಿ ಚಕ್ರರತ್ನ. ಇದನ್ನು ನಿವೇದಿಸಿ ಧರೆಯನ್ನು ಸಾಧಿಸಲು ಸಮಯವೆಂದು ಮಂತ್ರಿಗಳು ಸೂಚಿಸುತ್ತಾರೆ. ಚಕ್ರರತ್ನ ಬಾಲಸೂರ್ಯನಂತಿದ್ದು, ನೀನು ನಿನ್ನ ಕರ್ತವ್ಯವನ್ನು ಮಾಡು ಎಂದು ಮಂತ್ರಿ ಬುದ್ಧಿಸಾಗರ ಭರತನಲ್ಲಿ ಹೇಳುತ್ತಾನೆ. ಭರತನು ತೀರ್ಥಂಕರ ಪೂಜೆಯನ್ನು ನೆರವೇರಿಸಿ ವಿಜಯದಶಮಿಯ ದಿನ ದಿಗ್ವಿಜಯ ಪ್ರಯಾಣವನ್ನು ಬೆಳೆಸಿದನು. ಭರತನು ದಿಗ್ವಿಜಯಕ್ಕೆ ತೆರಳುವ ಮೊದಲು ತಾಯಿಯ ಹಾಗೂ ತೀರ್ಥಂಕರನ ಆಶೀರ್ವಾದ ಪಡೆಯುತ್ತಾನೆ. ತಾಯಿ ಮಗನನ್ನು ಹೀಗೆ ಆಶೀರ್ವದಿಸುತ್ತಾಳೆ :

ಘನದ ಸಮುದ್ರಾಂತ ಧರೆಯ ಲೀಲಾಮಾತ್ರ

ದನುವಿಂದ ಜಯಿಸೆನ್ನ ಕಂದ

ಜಿನಭಕ್ತಿಯಲ್ಲಿ ಭೋಗದೊಳಿಂದ್ರನಾಗೆಂದು

ಜನನಿ ಹರಸಿದಳು ಮಗನ (ಪಟ್ಟಣ ಪಯಣ ಸಂಧಿ ೫)

ಸಮುದ್ರದ ವರೆಗೆ ಭೂಮಿಯನ್ನು ಜಯಿಸಿ ಬಾ, ಜಿನಭಕ್ತಿ, ಭೋಗದಲ್ಲಿ ಯಾವ ಕೊರತೆಯನ್ನು ಮಾಡಬೇಡ ಎಂದೂ, ಮಗನ ಸೇನೆಯಲ್ಲಿರುವ ಆನೆ, ಕುದುರೆಯ ಕಾಲಿಗೆ ಮುಳ್ಳು ಸಹ ತಾಗದಿರಲಿ, ಬೇರೆ ಬೇರೆ ದೇಶದ ರಾಜರನ್ನು ಶರಣಾಗತಿ ಮಾಡಿ, ನಂತರ ಊರಿಗೆ ನೀನು ವಿಜಯಿಯಾಗಿ ಮರಳಿ ಬಾ ಎಂದು ಹೇಳುತ್ತಾಳೆ. ಈ ರೀತಿ ಯುದ್ಧದ ಮೂಲಕ ಮನುಷ್ಯ ಮಾತ್ರರಲ್ಲದೆ ಪ್ರಾಣಿಗಳಿಗೂ ಹಿಂಸೆ ಆಗದಿರಲಿ ಎಂದು ಹಾರೈಸುತ್ತಾಳೆ.

ಆದಿ ಜಿನನನ್ನು ಕಂಡು ಆಶೀರ್ವಾದ ಪಡೆದು ರಾಜ ಕಿರೀಟದೊಂದಿಗೆ, ರಾಜಲಾಂಛನ ಹಿಡಿದ ಗುಂಪಿನೊಂದಿಗೆ, ಚಾಮರ ಬೀಸುವ ಗುಂಪಿನೊಂದಿಗೆ ಪತಾಕೆಗಳ ಸಮೂಹದೊಂದಿಗೆ, ಮಡದಿಯರು,

ಸೈನಿಕರು ಹೀಗೆ ಸಮಸ್ತ ಪರಿವಾರದೊಡನೆ ದಿಗ್ವಿಜಯಕ್ಕಾಗಿ ಪುರವನ್ನು ಬಿಡುತ್ತಿದ್ದನು. ಸೈನ್ಯ ಪುರದ ಅಂಚಿಗೆ ಬಂದರೆ, ಊರ ಬಾಗಿಲಿಗೆ ಚಕ್ರ ರತ್ನ ನಿಂತಿತು. ಎಲ್ಲಾ ಕಡೆ ಸೈನ್ಯ, ಆನೆ, ಕುದುರೆ, ರಥ, ವೀರಭಟರು ಸಜ್ಜುಗೊಂಡಿದ್ದಾರೆ.

ಭರತನು ದಿಗ್ವಿಜಯಕ್ಕೆ ಹೊರಟಿದ್ದಾನೆಂದು ತಿಳಿದು, ಒಂದು ಖಂಡದ ರಾಜರು ಭರತನನ್ನು ಭೇಟಿಯಾಗಿ ಶರಣಾಗುತ್ತಾರೆ. ಭರತ ಕೇವಲ ರಾಜರನ್ನು ಮಾತ್ರವಲ್ಲ, ಅವರ ಸೈನ್ಯವನ್ನು ತನ್ನ ಸೈನ್ಯಕ್ಕೆ ಸೇರಿಸಿದನು. ಹೀಗೆ ಮುಂದುವರಿದ ಭರತ ಪಯಣ ಸ್ವಲ್ಪವೂ ರಕ್ತಪಾತವಿಲ್ಲದೆ ಪೂರ್ವ ಸಾಗರ ಪರ್ಯಂತ ರಾಜ್ಯವೂ ಆತನ ಅಧೀನವಾಯಿತು. ಅಲ್ಲಲ್ಲಿ ಬೀಡು ಬಿಟ್ಟ ಭರತನಿಗೆ ಸುತ್ತಮುತ್ತಲಿನ ಇತರ ರಾಜರೆಲ್ಲರೂ ಕಪ್ಪಕಾಣಿಕೆಯನ್ನು ಕೊಟ್ಟರು.

ಇಲ್ಲಿ ರತ್ನಾಕರನ ಮುಖ್ಯ ಉದ್ದೇಶವೇ ಹಿಂಸಾ ಯುದ್ಧವಲ್ಲ. ಅಹಿಂಸೆಯ ಯುದ್ಧವನ್ನು ತರುವ ಉದ್ದೇಶದಿಂದ ಶರಣಾಗತಿಯನ್ನು ಯುದ್ಧದಲ್ಲಿ ತರುತ್ತಾನೆ.

ಸಮುದ್ರದ ಮಧ್ಯದ ದ್ವೀಪವಾಸಿಯಾದ ಮಗಧನೆಂಬ ವ್ಯಂತರ ರಾಜನೊಬ್ಬನು ಮಾತ್ರ ಭರತ ಚಕ್ರಿಯ ಅಧೀನತೆಯನ್ನು ಒಪ್ಪದೆ ಬರದೆ ಇದ್ದಾಗ ಅವನ ಉದ್ಧಟತನವನ್ನು ಕಂಡು ಕೋಪಗೊಂಡ ಭರತನು 'ಸಕಲ ಭೂಮಂಡಲಕ್ಕೂ ಬೆಳಕು ನೀಡುವ ಸೂರ್ಯನಿಗೆ ರಾತ್ರಿಯಲ್ಲಿ ಎಚ್ಚರವಿರುವ ಹಗಲಲ್ಲಿ ತನ್ನ ಬೆಳಕನ್ನು ಲೆಕ್ಕಿಸದೆ ನಿದ್ರಿಸುವ ಗೂಬೆಯ ಚಿಂತೆ ಏಕೆ?' ಎಂದುಕೊಳ್ಳುತ್ತಾನೆ. ಭರತ 'ಉಗುರಿನಿಂದ ಕೆರೆಯುವುದಕ್ಕೆ ಕೊಡಲಿ ಏಕೆ' ಎಂದು ವೈರಿಯ ನಾಶಕ್ಕೆ ಯುದ್ಧದ ಅವಶ್ಯಕತೆ ಇಲ್ಲ. ಕರ್ಮಾಂಗಗಳನ್ನು ಗೆಲ್ಲುವುದೇ ನನಗೆ ಮುಖ್ಯ ಎಂದು ಹೇಳುತ್ತಾನೆ.

ಹೀಗೆ ಮಗಧನಿಗೆ ಬಾಣದ ಮೂಲಕ ಒಂದು ಓಲೆಯನ್ನು ಕಳುಹಿಸುತ್ತಾನೆ. ಆ ಓಲೆಯಲ್ಲಿದ್ದ ಭರತನ ಬಿರುದಾವಳಿಗಳನ್ನು ಓದಿ ಸಿಟ್ಟಿನಿಂದ ಭರತನ ವಿರುದ್ಧ ಹೋರಾಡಲು ನಿರ್ಧರಿಸುತ್ತಾನೆ. ಆಗ ಮಂತ್ರಿಗಳು ಮಗಧನನ್ನು ಸಮಾಧಾನಿಸುತ್ತಾ :

> ಭರತ ಚಕ್ರೇಶ್ವರನು ಸಾಮಾನ್ಯನಲ್ಲ ದೆ
> ವರದೇವನಾತ್ಮಜ ... (ರಾಯಸದಂ ಬೆಚ್ಚ ಸಂಧಿ ೪೧)
>
> ತುಡುಕ ಬೇಕಹುದು ಕಾಳಗವನು ತನಗೆ ತ
> ಕ್ಕೆಡೆಯೊಳಗಧಿಕ ನೊಳ್ಸೆಣಸಿ
> ಬಡವ ಸೆರೆತು ನೋಡಿ ತಿವಿಯಿಸಿಕೊಂಡ ನಾ
> ಣ್ನುಡಿ ಗೆಡೆಯಾಗಬಹುದೆ (ರಾಯಸದಂ ಬೆಚ್ಚ ಸಂಧಿ ೪೫)

ಅಂದರೆ ಭರತ ಚಕ್ರೇಶ್ವರನು ಸಾಮಾನ್ಯನಲ್ಲ, ದೇವರ ದೇವನ ಆತ್ಮಜ. ಆದುದರಿಂದ ಅವನೊಡನೆ ಕಾಳಗ ಮಾಡುವುದು ಸರಿಯಲ್ಲ. ಯುದ್ಧ ಮಾಡುವುದೇ ಆದರೆ, ಸಮಾನರೊಡನೆ ಯುದ್ಧ ಮಾಡುವುದು ಸರಿಯೇ ಹೊರತು ಅಧಿಕರೊಡನೆ ಹೋರಾಡುವುದು ತನ್ನನ್ನು ತಾನೇ ಇರಿದುಕೊಂಡಂತೆ ಎಂದರು. ಮಂತ್ರಿಗಳ ಮಾತಿನಿಂದ ಭರತನ ಶೌರ್ಯಕ್ಕೆ ಹೆದರಿದ ಮಗಧ ಭಯದಿಂದ ಎರಡೂ ಕೈಗಳನ್ನು ಬಾಯಿಯಲ್ಲಿರಿಸಿ, ನನ್ನನ್ನು ರಕ್ಷಿಸು, ಭೋಗಯೋಗದಿಂದ ಸಮನ್ವಯಗೊಂಡ ನಿನಗೆ ಯಾರು ಸಮಾನ

ಎಂದು ಹೇಳುತ್ತಾನೆ.ಇನ್ನು ತಾನು ಶರಣಾಗುವುದೇ ಲೇಸೆಂದು ಕಪ್ಪಕಾಣಿಕೆಯನ್ನು ಕೊಟ್ಟು ಭರತನ ಸಾಮಂತನಾದನು.

ನಂತರ ಪಶ್ಚಿಮಕ್ಕೆ ಪಯಣ ಮಾಡಿ ಪಶ್ಚಿಮ ಸಮುದ್ರವನ್ನು ಸೇರಿ ಆ ಕಡಲ ಮಧ್ಯದ ಒಡೆಯನಾದ ಪ್ರಭಾಸಾಮರ ಎಂಬ ವ್ಯಂತನನ್ನು ತನ್ನ ಮಾತಿನ ಮೂಲಕ ಗೆದ್ದು, ಕಪ್ಪಕಾಣಿಕೆಗಳನ್ನು ಪಡೆದನು. ನಂತರ ಸಿಂಧೂ ನದಿಯ ದಕ್ಷಿಣ ತುದಿಯ ಮೂಲಕ ಮ್ಲೇಚ್ಛ ರಾಜ್ಯಗಳ ಮೇಲೆ ದಂಡೆತ್ತಿ ನಡೆದ ಸಂದರ್ಭದಲ್ಲಿ ಪ್ರಭಾಸ ಎಂಬಾತ ಮತ್ತು ಆತನ ಪಡೆಯೂ ಕೂಡ ಭರತ ಚಕ್ರಿಯ ಅಧಿಪತ್ಯಕ್ಕೆ ಹೆದರಿ ಕಪ್ಪಕಾಣಿಕೆಯನ್ನು ಕೊಟ್ಟು ಸಾಮಂತನಾದನು. ಮುಂದೆ ದಂಡೆತ್ತಿ ಹೋದಾಗ ವಿಜಯಾರ್ಧಗಿರಿ ಪರ್ವತವು ಅಡ್ಡವಾಗಿ ನಿಲ್ಲುತ್ತದೆ. ಈ ಪರ್ವತದಲ್ಲಿ ಬಿಳಿಯ ಆನೆಯನ್ನು ಅಲಂಕರಿಸಿದಂತೆ ೧೧೦ ಪಟ್ಟಣಗಳಿದ್ದು ಇದು ವಿದ್ಯಾಧರನಿಗೆ ಸೇರಿದ್ದಾಗಿತ್ತು.

ಮುಂದೆ ಭರತನಿಗೆ ಎದುರಾದುದು ಗಗನವಲ್ಲಭ ಮತ್ತು ರಥನೂಪುರ ಚಕ್ರವಾಳ ಎಂಬ ಎರಡು ಪ್ರಸಿದ್ಧ ಪಟ್ಟಣಗಳು. ಇದನ್ನು ಆಳುತ್ತಿದ್ದವರು ನಮಿರಾಜ ಮತ್ತು ವಿನಮಿರಾಜ. ಈ ಇಬ್ಬರು ಸಹೋದರರು ಭರತನಿಗೆ ಸಂಬಂಧಿಕರು.ಇನ್ನೊಂದು ತಪ್ಪಲಿನಲ್ಲಿ ಖೇಚರರು. ಇವರ ಅರಸರು ವಿಜಯಾರ್ಧಕುಮಾರ. ಇವರನ್ನು ಜಯಿಸಲು ಭರತ ಬೆಟ್ಟದ ಎರಡೂ ಕಡೆಯಲ್ಲಿ ಸೇನಾಧಿಕರ ಸಹಾಯದಿಂದ ಹೊಂಡವನ್ನು ತೋಡಿಸುತ್ತಾನೆ. ಯುದ್ಧದ ಸಂದರ್ಭದಲ್ಲಿ ಬೆಂಕಿ ಬಂದಾಗ ನಂದಿಸಲು ಪೂರ್ವದಲ್ಲೇ ತಯಾರಿ ನಡೆಸುತ್ತಾನೆ. ಏಕೆಂದರೆ ಇಲ್ಲಿ ಆತನ ಅಹಿಂಸಾ ತತ್ವವು ಕೆಲಸ ಮಾಡಿರುವುದನ್ನು ಗಮನಿಸಬಹುದು. ನಂತರ ಭರತಚಕ್ರಿ ತನ್ನ ದಂಡರತ್ನದಿಂದ ವಜ್ರಕವಾಟವನ್ನು ಒಡೆಯಲು ಅದರ ಆರ್ಭಟಕ್ಕೆ ವಿಜಯಾರ್ಧಗಿರಿ ನಡುಗಿ, ಆ ಗಿರಿಯ ಒಡೆಯನಾದ ವಿದ್ಯಾಧರ, ಮ್ಲೇಚ್ಛ ನೃಪರು ತಲ್ಲಣಗೊಂಡು ಇವರು ಮತ್ತು ವಿದ್ಯಾಧರ, ವಿಜಯಾರ್ಧ ದೇವನು ತನ್ನ ಪರಿವಾರದೊಂದಿಗೆ ಭರತನ ಬಳಿ ಬಂದು ಕಪ್ಪವಿತ್ತು ಮನ್ನಣೆ ಪಡೆದುಕೊಂಡು ಹೋಗುತ್ತಾರೆ.

ಇನ್ನೊಂದೆಡೆ ಭರತನ ದಿಗ್ವಿಜಯದ ಸ್ಫೋಟ ಇಡೀ ಪುರಕ್ಕೆ ತಿಳಿದು ಭರತನ ಸಾಮರ್ಥ್ಯವು ಬೆಟ್ಟವನ್ನು ಹಾದು ಬಂದದ್ದು ತಮ್ಮನಾದ ವಿನಮಿಗೆ ಸಂತೋಷವನ್ನುಂಟುಮಾಡಿದರೆ, ಅಣ್ಣನಾದ ನಮಿಗೆ ಇದು ಅಸಮಾಧಾನಕರವಾಗಿ ಪರಿಣಮಿಸಿತು. ಆ ಕಾರಣದಿಂದಾಗಿ ತಮ್ಮನಲ್ಲಿ 'ರಾಜನೀತಿಯ ಪಾಠ ನನಗೆ ತಿಳಿದಿಲ್ಲ' ಇಲ್ಲಿಯವರೆಗೆ ನಾವು ಜತೆಗಿದ್ದೆವು. ಇನ್ನು ಭರತ ಕೂತಿರಬೇಕು, ನಾವು ನಿಂತಿರಬೇಕು, ಮಾತ್ರವಲ್ಲದೆ ಭರತನಿಗೆ ಜಿಯಾ ಎಂದು ಹೇಳಿ ಆತ ಹೇಳಿದ್ದನ್ನು ಕೇಳಬೇಕು. ಇಬ್ಬರೊಳಗೆ ಶ್ರೀಮಂತಿಕೆ ಒಂದಾಗಿದ್ದರೆ ಸಮನಾಗಿರುತ್ತಾರೆ. ಒಬ್ಬರೊಳಗೆ ಶ್ರೀಮಂತಿಕೆ ಜಾಸ್ತಿಯಾದಾಗ ಕೀಳಾಗಿ ನೋಡುತ್ತಾರೆ. ಭರತನನ್ನು ತೋಳ್ಬಲದಲ್ಲಿ ಗೆಲ್ಲಲು ಅಸಾಧ್ಯ, ಬಂಧುತ್ವದಿಂದ ಜಯಿಸಲು ರಾಜಕಾರಣ ಅಡ್ಡಿ ಬರುತ್ತದೆ ಎಂದು ಇಬ್ಬರ ಪ್ರತಿಷ್ಠೆ, ಮನಸ್ತಾಪಗಳಿಗೂ ಧಕ್ಕೆ ಬರದಂತೆ ಜಯಿಸಲು ಏನು ಮಾಡಬೇಕೆಂದು ಅಣ್ಣತಮ್ಮಂದಿರಿಬ್ಬರೂ ತಮ್ಮ ಮಂತ್ರಿಯೊಡನೆ ಹೇಳಿದಾಗ ಮಂತ್ರಿಗಳು ಇವರ ಮೂವರ ನಡುವೆಯೂ ಯಾವುದೇ ರೀತಿಯ ಯುದ್ಧ, ವೈಮನಸ್ಸು, ಮನಸ್ತಾಪಗಳು ಏರ್ಪಡದಂತೆ ಜಟಿಲವಾದ ಸಮಸ್ಯೆಯನ್ನು ಮದುವೆಯಂತಹ ಶುಭ ಕಾರ್ಯದ ಮೂಲಕ ಸಮಸ್ಯೆಯನ್ನು ಪರಿಹರಿಸಬಹುದೆಂದು ಸೂಚಿಸುತ್ತಾರೆ. ನಮಿಯ ಕುರಿತು ವಿನಮಿಯಲ್ಲಿ ಭರತ ಹೇಳುವ ಸಂದರ್ಭದಲ್ಲಿ ನನ್ನ ತಂದೆ ನನಗೆ ಭರತೇಶ ಎಂದು ಹೆಸರಿಟ್ಟು ಅದೇ ರೀತಿ ಭರತಖಂಡ ಎಂದೇ ಕರೆಯುವಂತೆ ನಾನು ರಾಜ್ಯವನ್ನು ಆಳುತ್ತೇನೆ ಎಂದು ಹೇಳುವ

ಭರತನ ಮಾತಿನಲ್ಲಿ ಇಡೀ ಖಂಡವನ್ನು ಪಡೆಯುವ ಸೂಚನೆಯನ್ನು ಗುರುತಿಸಬಹುದು. ಇಲ್ಲಿ ಭರತನಿಗೆ ಯುದ್ಧ ಮಾಡಬಹುದಿತ್ತು. ಆದರೆ ರತ್ನಾಕರನು ಭರತನಲ್ಲಿ ರಕ್ತಪಾತದ, ಹಿಂಸೆಯ ಯುದ್ಧವನ್ನು ತಪ್ಪಿಸುವುದಕ್ಕಾಗಿ ಬೆದರಿಕೆಯ ಮಾತಿನ ಮೂಲಕ ರಾಜರನ್ನು ಒಲಿಸುವ ಪ್ರಯತ್ನವನ್ನು ಮಾಡುತ್ತಾನೆ. ಅಂದರೆ ಇಲ್ಲಿ ರತ್ನಾಕರನ ಭರತನು ಕಾವ್ಯದ ನಾಯಕನಾದ್ದರಿಂದ ನೇರವಾಗಿ ಯುದ್ಧವನ್ನು ಮಾಡಲು ಅವಕಾಶ ಮಾಡದೆ, ಮಾತಿನ ಮೂಲಕ ರಾಜರನ್ನು ಎಚ್ಚರಿಸುವುದರಲ್ಲಿ ಅಹಿಂಸಾಪರವಾದ ತಂತ್ರವನ್ನು ನಡೆಸುತ್ತಾನೆ.

ನಂತರ ಚಿಲಾತ, ಆವರ್ತರೆಂಬ ಉತ್ತರಖಂಡದ ರಾಜರಿಬ್ಬರೂ ಭರತನ ಸೈನ್ಯದ ಆಗಮನವನ್ನು ಕಂಡು ಭಯಪಡುತ್ತಾರೆ. ಹೆದರಿದ ಇವರು ಕುಲದೇವತೆಗಳನ್ನು ಅರ್ಚಿಸಿ ನಮ್ಮನ್ನು ರಕ್ಷಿಸುವುದು ನಿಮ್ಮ ಕರ್ತವ್ಯ ಎಂದು ಬೇಡಿದಾಗ ದೈವಗಳು ತಮ್ಮ ಆ ಶಕ್ತಿಯ ಕಾರಣೀಕತೆಯ ಪ್ರದರ್ಶನಕ್ಕೆ ತೊಡಗಿ, ಪ್ರಕೃತಿಯಲ್ಲಿ ದಟ್ಟವಾದ ಮೋಡ, ಬಿರುಗಾಳಿ ಮಳೆಯನ್ನು ಸುರಿಸಿದರು.

'ಮೇಘವೆಂಬ ರಾಹುಗಳು ಉಗುಳುವ ವಿಷವೊಯೆಂಬಂತಾಗ ಕಷ್ಟ ವೃಷ್ಟಿಗಳ ಸೂಸಿದವು ದೈವಗಳು' ಈ ರೀತಿಯ ಭೀಕರತೆಗೆ ಯಾವುದೋ ದುಷ್ಟ ದೈವಗಳ ಕೆಟ್ಟ ಚೇಷ್ಟೆ ಇರಬೇಕೆಂದು ಸಂದೇಹದಿಂದ ಆಕಾಶವನ್ನು ನೋಡಿದಾಗ, ಮೇಘದೂತ ಕಾಲಮುಖಗಳೆಂಬ ದುಷ್ಟ ಶಕ್ತಿಗಳು ತಮ್ಮ ಅನುಚರರೊಂದಿಗೆ ಸಾಲಾಗಿ ನಿಂತಿರುವುದನ್ನು ಕಾಣುತ್ತಾನೆ. ಆದರೆ, ಈ ದೈವಗಳ ಸದೆಬಡಿಯಲು ಭರತ ತಕ್ಕ ತಂತ್ರವನ್ನೇ ಹೂಡುತ್ತಾನೆ. ಅಂತೆಯೇ ಚಿಲಾತ ಮತ್ತು ಆವರ್ತ ರಾಜರುಗಳು ತಾವು ಬೇಡಿಕೊಂಡ ದೈವಗಳ ಶಕ್ತಿಯನ್ನು ಹೆಮ್ಮೆಪಟ್ಟು, ಮೈಮರೆತು ನೋಡುತ್ತಿದ್ದಾಗ ಇದ್ದಕ್ಕಿದ್ದಂತೆ ಮಳೆ ನಿಲ್ಲುತ್ತದೆ. ಆಗ ಅದಕ್ಕೆ ಭಯಭೀತರಾದ ಸಹೋದರರು ಮಳೆಯನ್ನು ತಡೆದುದು ಭರತನೆಂದೂ, ಇನ್ನು ತಮಗೆ ಉಳಿಗಾಲವಿಲ್ಲವೆಂದೂ ತಲೆಮರೆಸಿ ಓಡಿಹೋಗುತ್ತಾರೆ. ಆದರೆ ಭರತನ ಶಕ್ತಿ ಅವನ ಯೋಗ-ಭೋಗವನ್ನು ಅರಿತು ಆತನಿಗೆ ಆ ದೈವಗಳು ಶರಣಾದುದು ಮಾತ್ರವಲ್ಲದೆ ಓಡಿ ಹೋದ ತಮ್ಮ ಅರಸರನ್ನು ಭರತನಿಗೆ ಒಪ್ಪಿಸುತ್ತಾರೆ. ಇಲ್ಲಿ ಭರತನ ವ್ಯಕ್ತಿತ್ವಕ್ಕೆ ದೈವಗಳು ಸಹ ಶರಣಾದುದನ್ನು ಗಮನಿಸಬಹುದು.

ಭರತ ತನ್ನ ದಿಗ್ವಿಜಯದ ಸಂದರ್ಭದಲ್ಲಿ ತಾವಾಗಿಯೇ ಕಪ್ಪಕಾಣಿಕೆಗಳನ್ನು ಕೊಟ್ಟು ಶರಣಾದಂತಹ ರಾಜರು, ಅವರ ಸೈನಿಕರೆಲ್ಲರನ್ನು ಬಹಳ ಆದರದಿಂದ ಸ್ವೀಕರಿಸುತ್ತಿದ್ದನು. ಆದರೆ ತನಗೆ ಎದುರಾಳಿಯಾಗಿ ನಿಲ್ಲುತ್ತಿದ್ದ ರಾಜರನ್ನು ಒತ್ತಾಯಪೂರ್ವಕವಾಗಿ ಹಿಂಸೆಯಿಂದ ತನ್ನ ವಶಮಾಡಿಕೊಳ್ಳದೆ ಕೇವಲ ಬುದ್ಧಿವಂತಿಕೆ, ಸೂಕ್ಷ್ಮವಾದ ಮಾತುಗಳಿಂದ ತಾವಾಗಿಯೇ ತಮ್ಮ ಅಹಂನ್ನು ಮರೆತು ಆತನಿಗೆ ಶರಣಾಗುವಂತೆ ಮಾಡುತ್ತಿದ್ದನು.

ಹೀಗೆ ಭರತನು ಹಿಂಸೆಯನ್ನು ಮಾಡದೆ ನಿರಾಯಾಸವಾಗಿ ಅಹಿಂಸೆಯ ಮೂಲಕ ದಿಗ್ವಿಜಯ ಸಾಧಿಸಿದ್ದನ್ನು ಗಮನಿಸಬಹುದು.

ಮುಂದೆ ಭರತನು ಇತರ ರಾಜರನ್ನೆಲ್ಲಾ ಸೋಲಿಸಿ ವೃಷಭಾದ್ರಿಗೆ ಬಂದಾಗ ಹಿಂದಿನ ಚಕ್ರವರ್ತಿಗಳು ಆ ಪರ್ವತದ ಮೇಲೆ ಅಂಕಮಾಲೆಯನ್ನು ಬರೆದು ತುಂಬಿ ಹೋಗಿರುವುದನ್ನು ಕಂಡು ತನಗೆ ಬರೆಯಲು ಜಾಗವೇ ಇರದಿದ್ದುದಕ್ಕಾಗಿ ಕೋಪಗೊಂಡು ದಂಡಕರತ್ನದಿಂದ ಒಂದು ಶಾಸನವನ್ನು ಅಳಿಸಿ, ಕಾಂಕಿಣೀರತ್ನದಿಂದ ತನ್ನ ಶಾಸನವನ್ನು ಕೆತ್ತುತ್ತಾನೆ.

ಇಲ್ಲಿ ರತ್ನಾಕರವರ್ಣಿಯು ಕಥಾನಾಯಕನಾದ ಭರತನ ಯೋಗಭೋಗಗಳನ್ನು ಸಮನ್ವಯಗೊಳಿಸಿ ತನ್ನ ಕಥಾನಾಯಕನನ್ನು ಚಿತ್ರಿಸುತ್ತಾನೆ. ತನ್ನ ಕಾವ್ಯದ ನಾಯಕನಿಗೆ ಎಲ್ಲಾ ಕುಂದುಬಾರದಂತೆ ಎತ್ತಿ ಹಿಡಿಯುವುದೇ ಆತನ ಉದ್ದೇಶವಾದ್ದರಿಂದ ಇಲ್ಲಿ ಭರತ ಹಿಂಸೆಯ ಯುದ್ಧವನ್ನು ಮಾಡದಂತೆ ಎಚ್ಚರಗೊಂಡು ಮಾತಿನ ಮೂಲಕವೇ ಶರಣಾಗತಿ, ಎದುರಾಳಿಯ ಯುದ್ಧವನ್ನು ಮಾಡಿಸಿ ತನ್ನ ನಾಯಕನನ್ನು ಎತ್ತರಕ್ಕೇರಿಸಿದ್ದಾನೆ.

ಹೀಗೆ ರತ್ನಾಕರನು ಚಕ್ರೇಶ್ವರನಾದ ಭರತನ ಮಹಿಮೆಯನ್ನು ಈ ರೀತಿ ಗುರುತಿಸಿದ್ದಾನೆ :

ಧರೆಯೊಳಲ್ಲವ ಸುಟ್ಟರುಂಟಲ್ಲಿ ಭಸ್ಮಕ
ರ್ಪೂರವ ಸುಟ್ಟರೆ ಭಸ್ಮವುಂಟೆ
ನರಪತಿಗಾಹಾರ ನಿಹಾರವುಂಟೆಮ್ಮ
ಭರತೇಶನಿಗಲ್ಲ ನಿಹಾರ (ಆಸ್ಥಾನ ಸಂಧಿ ೧೪)

ಅಂದರೆ ಜಗತ್ತಿನ ಯಾವುದೇ ವಸ್ತು ನಾಶವಾಗಿ, ಅದರ ಶ್ಲೇಷೆ ಮಾತ್ರ ಉಳಿಯುತ್ತದೆ. ಆದರೆ ಕರ್ಪೂರವನ್ನು ಉರಿಸಿದರೆ ಹೇಗೆ ಅಲ್ಲಿ ಶ್ಲೇಷೆಯಿಲ್ಲವೋ ಹಾಗೆ ಭರತನಲ್ಲಿ ಈ ರೀತಿಯ ಶ್ಲೇಷೆ ಇಲ್ಲ ಎಂದು ರತ್ನಾಕರನು ತನ್ನ ಕಥಾನಾಯಕನನ್ನು ಎತ್ತರದಲ್ಲಿರಿಸಿರುವುದನ್ನು ಗಮನಿಸಬಹುದು.

೪. ಭರತ ಮತ್ತು ಬಾಹುಬಲಿಯರ ಯುದ್ಧ ಮತ್ತು ತ್ಯಾಗದ ಸಂದರ್ಭಗಳಲ್ಲಿ ಅಹಿಂಸೆ :

ಸುತ್ತಮುತ್ತಲಿನ ರಾಜರುಗಳನ್ನು ಸುಲಭದಿಂದ ಗೆದ್ದ ಭರತನಿಗೆ ತನ್ನ ಸಹೋದರರನ್ನೂ ಸಹ ಇಷ್ಟೇ ಸುಲಭದಿಂದ ಗೆಲ್ಲಬಹುದೆಂಬ ಮಹತ್ವಾಕಾಂಕ್ಷೆಯಿರುತ್ತದೆ. ಅದೇ ನಂಬಿಕೆಯಿಂದ ಬಂದ ಭರತನಿಗೆ ಪೌದನಾಪುರದಲ್ಲಿ ನಿರಾಸೆ ಕಾದಿರುತ್ತದೆ. ಹೀಗೆ ದಿಗ್ವಿಜಯಕ್ಕಾಗಿ ಬಂದಾಗ ಚಕ್ರರತ್ನವು ಪೌದನಾಪುರದ ಬಳಿ ಮುಂದೆ ಸಾಗದೆ ತಟಸ್ಥವಾಗಿ ನಿಲ್ಲುತ್ತದೆ. ಇದರಿಂದ ಚಕಿತನಾದ ಭರತ ಇದಕ್ಕೆ ಕಾರಣವೇನೆಂದು ಕೇಳಲು ಆಗ ಮಂತ್ರಿಗಳು ಈ ಪುರಕ್ಕೆ ಅಧಿಪತಿ ಬಾಹುಬಲಿ. ನಿನ್ನ ದಿಗ್ವಿಜಯವನ್ನು ಕಂಡು ಎಲ್ಲರೂ ಸಂತೋಷಪಟ್ಟರೆ ನಿನ್ನ ತಮ್ಮಂದಿರು ಮಾತ್ರ ಒಪ್ಪಿಕೊಂಡಿಲ್ಲ ಎಂದೂ ಹೇಳುತ್ತಾರೆ. ಮಂತ್ರಿಗಳ ಮಾತನ್ನು ಕೇಳಿ ಭರತನು ತಮ್ಮಂದಿರಿಗೆಲ್ಲ ಶರಣಾಗುವಂತೆ ಓಲೆಗಳನ್ನು ಕಳುಹಿಸುತ್ತಾನೆ.

ಅದನ್ನು ಓದಿಕೊಂಡ ತಮ್ಮಂದಿರು
ತಂದೆ ಕೊಟ್ಟುಂಬಳಿಯೊಳಗಿರ್ದು ತನಗಿನ್ನು
ವಂದಿಸಿ ಬಾಳ್ವೆವೆಯೆಂದು
ಒಂದನು ನುಡಿಯದೆ ಕೈಲಾಸಗಿರಿಗೆದ್ದು
ತಂದೆಯೊಳ್ತಪದಾಳ್ದರವರು (ಕಾಮದೇವಸ್ಥಾನ ಸಂಧಿ ೭)

ಆದರೆ ರತ್ನಾಕರನ ಪ್ರತಿನಾಯಕನಾದ ಬಾಹುಬಲಿ ಮಾತ್ರ ಅಣ್ಣನ ಮೇಲೆ ಸೆಟೆದು ನಿಲ್ಲುತ್ತಾನೆ. ಬಾಹುಬಲಿ ಭರತನ ಯಜಮಾನಿಕೆಯನ್ನು ಒಪ್ಪಲಾರ ಎನ್ನುವುದನ್ನು ಮೊದಲೇ ಊಹಿಸಿದ್ದ ಭರತನ ಈ ಊಹೆ ನಿಜವಾಗುತ್ತದೆ. ಅದನ್ನು ಕಂಡು ಮಂತ್ರಿಗಳೊಡನೆ ತನ್ನ ಮನಸ್ಸಿನ ಇಂಗಿತವನ್ನು ಹೇಳುತ್ತಾನೆ. ಬಾಹುಬಲಿಗೆ ತಾನು ಭುಜಬಲಿ ಪರಾಕ್ರಮಿ ಎಂಬ ದರ್ಪವಿದೆ. ಲೋಕದಲ್ಲಿ ಸುಂದರ ಎಂಬ ಹೆಮ್ಮೆಯಿದೆ.

ಹೀಗಿರುವಾಗ ನಾನು ಭರತನೊಂದಿಗೆ ಯಾಕೆ ಶರಣಾಗತಿಯನ್ನು ಪಡೆಯಬೇಕು ಎಂಬುದು ಆತನ ನಿಲುವು.

ತನ್ನ ಸಹೋದರರು ತಂದೆ-ತಾಯಿಯೊಡನೆ ತೋರಿಸುವ ಪ್ರೀತಿ ತನ್ನೊಡನೆ ತೋರಿಸಲಾರರು. ನಾವು ಆದಿಜಿನನ ಮಕ್ಕಳು ಎಂಬುದನ್ನು ಮರೆತು ನನ್ನೊಂದಿಗೆ ಮಾತ್ಸರ್ಯದಿಂದಿರುವುದು ಎಷ್ಟು ಸರಿ ಎಂದು ತನ್ನ ಅಳಲನ್ನು ಹೇಳಿಕೊಳ್ಳುತ್ತಾನೆ.

ಆಗ ಮಂತ್ರಿಯು ಸಮಾಧಾನಿಸುತ್ತಾ :

ಕಿರಿಯರವರು ಸ್ವಾಮಿ ಸೈರಿಸು ನಿನಗಾದ
ಕೊರತೆಯೇನಿದರಿಂದ ಚಕ್ರಿ
ಅರಿಯವರು ದೇವ ನಿನ್ನೊಳು ಪುದುವಾಳ್ವ
ಮೆರೆವವರ್ಗತಿ ಪುಣ್ಯ ಬೇಕು (ನವರಾತ್ರಿ ಸಂಧಿ ೫೬)

ನಿನ್ನ ನುಡಿಯೇ ಸಾಕು ಜಗವೆಲ್ಲ ಭಾಸ್ಕರ
ನುನ್ನತಿಗರ್ತಿ ಮಾಡುವುದು
ಕನ್ನೈದಿಲಡ್ಡ ಮೋರೆಯೊಳಿರುವುದರಿಂದ
ಬನ್ನವುಂಟೆ ಪ್ರಭಾಕರಗೆ (ನವರಾತ್ರಿ ಸಂಧಿ ೫೭)

ನಿನಗಿಂತ ಅವರು ವಯಸ್ಸಿನಲ್ಲಿ ಚಿಕ್ಕವರು, ಇದನ್ನು ನೀನು ಸಹಿಸು, ಇದರಿಂದ ನಿನಗೇನು ಕೊರತೆಯಿಲ್ಲ, ಕೊರತೆಯಾದದ್ದು ಅವರಿಗೆ, ನಿನ್ನ ಪ್ರೀತಿಯನ್ನು, ಆಶ್ರಯವನ್ನು ಪಡೆಯಲು ಪುಣ್ಯ ಮಾಡಬೇಕು, ನಿನ್ನ ವ್ಯಕ್ತಿತ್ವದ ಅಗಾಧತೆಯನ್ನು ಅರಿಯದವರು. ಇಡೀ ಜಗತ್ತಿಗೆ ಸೂರ್ಯನು ತನ್ನ ಶಕ್ತಿಯಿಂದ ಕಾರ್ಯ ನಿರ್ವಹಿಸುತ್ತಾನೆ. ನಿನ್ನ ಜೊತೆಯಿರುವವರಿಗೆ ನಿನ್ನ ನಾಲ್ಕು ಮಾತು ಸಾಕು. ಕನ್ನೈದಿಲೆ - ಸಹೋದರರು, ಸೂರ್ಯ ನೀನು, ಕನ್ನೈದಿಲೆ ರಾತ್ರಿ ಅರಳುವುದು, ಸೂರ್ಯಬಂದಾಗ ಕನ್ನೈದಿಲೆ ಮುಚ್ಚುವಂತೆ ನಿನ್ನ ಸಹೋದರರು ನಿನ್ನೊಂದಿಗೆ ಜಗಳಕ್ಕೆ ಅವಕಾಶವಿರಬಾರದು ಎಂದು ಹೇಳುತ್ತಾರೆ.

ಎಲ್ಲರೂ ತಪಸ್ಸಿಗೆ ಹೋದ ಮೇಲೆ ಬಾಹುಬಲಿಗೂ ಇದೇ ರೀತಿ ಓಲೆ ಕಳುಹಿಸಿದರೆ ಪ್ರಯೋಜನವಿಲ್ಲ ಎಂದು ತಿಳಿದು ಸಮಾಲೋಚನೆ ನಡೆಸಿ ಸಂಧಾನಕ್ಕಾಗಿ ದಕ್ಷಿಣಾಂಕನನ್ನು ಕಳುಹಿಸುತ್ತಾನೆ. ಸಂಧಾನಕ್ಕಾಗಿ ಬಂದ ಮಂತ್ರಿಯನ್ನು ಬಾಹುಬಲಿ ಗೌರವದಿಂದ ಸ್ವಾಗತಿಸಿ ಮಾತುಕತೆಗೆ ತೊಡಗುತ್ತಾನೆ.

ಭರತನಿಗೆ ನಿನ್ನನ್ನು ನೋಡಲು ಆಸೆಯಾಗಿದೆ, ಮಾತ್ರವಲ್ಲ, ಚಕ್ರವರ್ತಿ ನಿನ್ನ ಊರ ಬಾಗಿಲಿನಲ್ಲಿಯೇ ಉತ್ಸುಕನಾಗಿ ನಿಂತಿದ್ದಾನೆ. ಜಗತ್ತನ್ನೇ ಜಯಿಸಿರುವ ನಿನ್ನ ಅಣ್ಣನನ್ನು ಕಾಣಬೇಕಾದುದು ನಿನ್ನ ಕರ್ತವ್ಯ ಎಂದು ಮಂತ್ರಿ ಹೇಳುತ್ತಾನೆ.

ಕೋಪಗೊಂಡ ಬಾಹುಬಲಿ ಹೀಗೆನ್ನುತ್ತಾನೆ :

ಬಿಡೆಯಲಾ ನಿನ್ನ ಜಾಣ್ಮೆಯ ಮತ್ತ ನನಗೊಂದು
ಪೊಡವಿಯಾಸೆಯ ತೋರಿ ಕರೆದು
ಒಡೆಯನ ಕಾಲ್ಗೆರಗಿಪೆನೆಂದು ನೆನವಯ್ಯೆ

ಬಕಮುನದವನೆ ನಾನೆಂದ (ಸಂಧಾನ ಭಂಗ ಸಂಧಿ ೧೬)

ತಂದೆಯು ಉಂಬಳಿಯಾಗಿ ಕೊಟ್ಟಂತಹ ಭೂಮಿಯಲ್ಲಿ ನನ್ನಷ್ಟಕ್ಕೆ ನಾನು ಇದ್ದರೆ, ಅದನ್ನು ನಿನ್ನ ಒಡೆಯನಿಗೆ ನೋಡಲಾಗಲಿಲ್ಲವೇ, ನೀನು ಭೂಮಿಯ ಆಸೆ ತೋರಿಸಿ ನಿನ್ನ ರಾಜನ ಕಾಲಿಗೆ ಎರಗುವ ಉಪಾಯ ಹೂಡಿದೆಯಲ್ಲ, ಪ್ರೀತಿಯನ್ನು, ವಿಶ್ವಾಸವನ್ನು ತೋರಿಸಿದರೆ ನಾನು ಅಣ್ಣನಿಗೆ ಕಾಲಿಗೆರಗಲು ಸಿದ್ಧ, ಆದರೆ ವಯಸ್ಸು, ಅಧಿಕಾರದ ಕಾರಣದಿಂದ ಪ್ರತಿಯೋರ್ವನಿಗೂ ತಮಗೆ ಬೇಕಾದ ಅಧಿಕಾರ, ಸಂಪತ್ತನ್ನು ಪಡೆಯುವ ಹಕ್ಕು, ಅರ್ಹತೆ ಇದೆ. ಉಳಿದ ಸಹೋದರರನ್ನು ಭರತನ ಚಕ್ರದ ಮೂಲಕ ತನ್ನವರನ್ನಾಗಿಸಿ ಅಧೀರರನ್ನಾಗಿ ತಪಸ್ಸಿಗೆ ಹೋಗುವಂತೆ ಮಾಡಿದ. ಆದರೆ ನಾನು ಬಲಶಾಲಿ, ಯಾರಿಗೂ ಬಾಗುವವನಲ್ಲವೆಂದು ತಿಳಿದು ನಿನ್ನನ್ನು ನನ್ನ ಬಳಿ ಕಳುಹಿಸಿದ್ದಾನೆ. ನೀನು ಮಾತನಾಡು ವಿನಯದ ಮಾತಿನ ಹಿಂದೆ ಅನೇಕ ಎಚ್ಚರಿಕೆಯ ಮಾತಿದೆ. ಚಂದನ ತಂಪಾದರೂ ಅದರ ಎರಡೂ ಕಡೆ ಘರ್ಷಿಸಿದರೆ ಕಿಡಿ ಬರುತ್ತದೆ, ಹಾಗೆ ನಾವುಗಳು. ಕ್ಷಣಕ್ಷಣಕ್ಕೆ ನಿನ್ನ ಒಡೆಯನ ಗುಣವನ್ನು ಹೇಳಿ ನನ್ನ ಕೆರಳಿಸಬೇಡ ಹೋಗು, ನಿನ್ನಿಂದ ನನ್ನ ಮನಸ್ಸಿಗೆ ನೋವಾಗಿದೆ ಎನ್ನುತ್ತಾನೆ.

ತನ್ನ ತಪ್ಪಿನ ಅರಿವಾಗಿ ಮಂತ್ರಿ ಕ್ಷಮೆ ಕೇಳುತ್ತಾನೆ. ಅಮೂಲ್ಯವಾದ ವಸ್ತುವನ್ನು ಕಳೆದುಕೊಂಡವನಂತೆ ಭರತನಲ್ಲಿಗೆ ಬಂದು ಸಂಧಾನ ಭಂಗವಾದುದನ್ನು ವಿವರಿಸುತ್ತಾನೆ.

ಕೋಪಗೊಂಡ ಭರತ

ಮುನಿದೆನಾದರೆ ಚಂಡನಿಡುವಂತೆ ಹಿಡಿದೆತ್ತಿ

ವನಧಿಗಿಡುವ ಶಕ್ತಿಯುಂಟು

ಅನುಜನ ಮೇಲೆ ಶಕ್ತಿಯ ತೋರಬಹುದೆ ಮೇ

ದಿನಿ ಮೆಚ್ಚುವುದೆ ತೋರೆನೆಂದ (ಕಟಕ ವಿನೋದ ಸಂಧಿ ೧೮)

ಅವನ ಹೂಬಾಣವನ್ನು ನಾಶಮಾಡುವೆ, ಅಲ್ಲಿಯೂ ಸೋಲದೆ ಖಡ್ಗ ಹಿಡಿದು ಬಂದರೆ ಖಡ್ಗವನ್ನು ಮುರಿಯುವೆ, ಹಿಂಸೆಯ ಯುದ್ಧವನ್ನು ಮಾಡದೆ ಕಣ್ಣ ಬೆದರಿಕೆಯಲ್ಲಿ ಯುದ್ಧವನ್ನು ತಡೆಯುತ್ತೇನೆ. ಇನ್ನೂ ಹಟವಿಡಿದರೆ ಯುದ್ಧವೇ ಅಂತಿಮ. ಅವನನ್ನು ಎತ್ತಿ ಸಮುದ್ರಕ್ಕೆ ಎಸಗುವ ಶಕ್ತಿ ಎನಗಿದೆ ಎಂದು ಸಿಟ್ಟುಗೊಳ್ಳುತ್ತಾನೆ. ಇಲ್ಲಿ ಭರತನಿಗೆ ಹಿಂಸೆಯ ಯುದ್ಧ ಇಷ್ಟವಿಲ್ಲದಿದ್ದರೂ ಆತನ ತಾಳ್ಮೆಯ ಪರೀಕ್ಷೆಯನ್ನು ಗಮನಿಸಬಹುದು.

ಅದಕ್ಕೆ ಪೂರಕವಾಗಿ ನಡೆಯುವ ಇನ್ನೊಂದು ಘಟನೆಯೆಂದರೆ - ಆ ದಿನ ಇರುಳಿನಲ್ಲಿ ಎಲ್ಲರೂ ಗಾಢನಿದ್ರೆಯಲ್ಲಿರುವಾಗ ಸೈನಿಕ ಶಿಬಿರದಲ್ಲಿ ಇಬ್ಬರು ಸೈನಿಕರ ಮಾತುಗಳು ಭರತನ ಕಿವಿಗೆ ಬೀಳುತ್ತದೆ.

ಹನಿಗೂಡಿ ಹಳ್ಳ ನಾರೊಡಗೂಡಿ ಹಗ್ಗವೆಂ

ಬನುವೆನೊಳ್ಪಡೆಗೂಡಿ ಚಕ್ರಿ

ಘನತೆವೆತ್ತನು ಸೇನೆ ಹೊರತಾದರಿವನೊಬ್ಬ

ಮನುಜನಲ್ಲವೆಯೆಂದರವರು (ಕಟಕ ವಿನೋದ ಸಂಧಿ ೨೫)

ಅಂದರೆ ಪಡೆಯ ಸಹಾಯದಿಂದ ಚಕ್ರಿಗೆ ಘನತೆಯೇ ಹೊರತು, ಅದಿಲ್ಲದಿದ್ದರೆ ಇವನು ನಮ್ಮಂತೆ ಮನುಷ್ಯ ಮಾತ್ರ ಎಂದೂ, ಹನಿಗೂಡಿ ಹಳ್ಳ, ನಾರೊಡಗೂಡಿ ಹಗ್ಗ ಎಂಬ ಮಾತನ್ನು ಕೇಳಿ ಕೋಪಗೊಂಡ

ಚಕ್ರವರ್ತಿ ತನ್ನ ಪರಾಕ್ರಮ ತೋರಿಸಬೇಕೆಂದು ಹಟ ತೊಡುತ್ತಾನೆ.

ಹೀಗೆ ಎರಡು ಕಾರಣದಿಂದಲೂ ತನ್ನ ಶಕ್ತಿ, ಸಾಮರ್ಥ್ಯವನ್ನು ಮೆರೆಯಲು ಭರತನು ಯುದ್ಧಕ್ಕೆ ತಯಾರಾಗುತ್ತಾನೆ.

ತಾಯಿ ಮತ್ತು ಹೆಂಡತಿ ಬಾಹುಬಲಿಯೊಡನೆ ಭರತನೊಂದಿಗೆ ಯುದ್ಧ ಮಾಡಬೇಡ ಎಂದು ಹೇಳುತ್ತಾರೆ. ಬಿಲ್ಲು ಡೊಂಕಾದರೆ, ನಿನ್ನ ನಡೆ ಡೊಂಕು ಬೇಡವೆಂದೂ, ಈ ಜಗತ್ತಿಗೆ ಸಂತೋಷ ಹಂಚುವವನು ನೀನು, ನೋವು ದುಃಖವನ್ನು ಹಂಚುವುದಕ್ಕೆ ಹೊರಟಿದ್ದೀಯ. ಇದು ಸರಿಯೇ ? ನಿಮ್ಮಿಬ್ಬರ ಯುದ್ಧ ಒಬ್ಬರ ಮನಸ್ಸಿಗೂ ಸಿಹಿ ಇಲ್ಲ. ನೀನು ಕಬ್ಬಿನಬಿದಿರು. ನಿನ್ನ ಕೈಯಲ್ಲಿ ಕಬ್ಬಿದೆ. ಅದರನ್ನು ಮರೆಯಬೇಡ ಎಂದು ಹೇಳುತ್ತಾರೆ.

ಭರತನ ಮಗ ಅರ್ಕಕೀರ್ತಿಯೂ ಕೂಡ ಬಾಹುಬಲಿಯಲ್ಲಿಗೆ ತನ್ನ ಸಹೋದರರೊಡನೆ ಬಂದಾಗ ಈ ಮಕ್ಕಳು ಯಾರೆಂದು ಬಾಹುಬಲಿ ಮಂತ್ರಿಯೊಡನೆ ಕೇಳಲು ನಿನ್ನ ಮಕ್ಕಳೆಂದು ಮಂತ್ರಿ ಹೇಳಲು, ನನ್ನ ಹತ್ತಿರ ಬರಬೇಡಿ ಎಂದು ಬಾಹುಬಲಿ ಹೇಳುವಲ್ಲಿ ಮಕ್ಕಳ ಬಗ್ಗೆ ಯಾವ ಮಾರ್ಗವನ್ನೂ ಇರಿಸದೆ ಬಾಹುಬಲಿ ತಿರಸ್ಕರಿಸುತ್ತಾನೆ. ರತ್ನಾಕರನ ನಾಯಕನಾದ ಭರತನನ್ನು ಒಳ್ಳೆಯ ರೀತಿಯಲ್ಲಿ ಚಿತ್ರಿಸಿರುವ ಕ್ರಮ ಅದೇ ಪ್ರತಿನಾಯಕನಾದ ಬಾಹುಬಲಿಯ ಪಾತ್ರವನ್ನು ಕಟುವಾಗಿ ಟೀಕಿಸಿ ಭರತನಲ್ಲಿ ಅಹಿಂಸೆಯನ್ನು ಬಾಹುಬಲಿಯಲ್ಲಿ ಹಿಂಸೆಯನ್ನು ಚಿತ್ರಿಸಿರುವುದನ್ನು ಗಮನಿಸಬಹುದು. ಆದರೆ ಭರತನಿಗೆ ಸಿಟ್ಟು ಬಂದರೆ ಹಿಂಸೆ ಮಾಡಲು ತೊಡಗಿದರೂ ಕೊನೆಗೆ ಹಿಂಸೆಯಿಂದ ಮುಕ್ತಿ ಪಡೆಯಲು ಅಹಿಂಸೆಯ ದಾರಿಯನ್ನು ಕಂಡುಕೊಳ್ಳುತ್ತಾನೆ.

ಅದೇ ಸಂದರ್ಭದಲ್ಲಿ ಇತ್ತ ಕಡೆ ಬಾಹುಬಲಿ ಅಣ್ಣನ ವಿರುದ್ಧ ದಂಡೆತ್ತಿ ಬರುತ್ತಾನೆ.

ಭರತ ತನ್ನ ಆವೇಶದಿಂದ ತನ್ನ ಸಂಯಮ, ಅಹಿಂಸಾತತ್ವವನ್ನು ಮರೆತು ಯುದ್ಧ ಮಾಡಲು ಸನ್ನದ್ಧವಾದುದನ್ನು ಕಂಡು ಮಂತ್ರಿಗಳು ಹೆದರಿ ಯುದ್ಧದಿಂದ ಆಗುವ ನಾಶವನ್ನು ಮತ್ತು ಭರತನ ವ್ಯಕ್ತಿತ್ವದ ಮೇಲಾಗುವ ಪರಿಣಾಮವನ್ನು ನೆನೆದು ತಡೆಯಲು ಯೋಚನೆ ಮಾಡುತ್ತಾರೆ.

ಅದೇ ರೀತಿ ಬಾಹುಬಲಿಯ ಮಂತ್ರಿಗಳು ಸಹಾ ಇಬ್ಬರಿಗೂ ಯುದ್ಧವೇ ಅಂತಿಮವಾಗಿದ್ದನ್ನು ಕಂಡು ಯುದ್ಧ ಭೀಕರತೆ, ಸಾವುನೋವುಗಳನ್ನು ಅರಿತು, ಯುದ್ಧ ಸಹೋದರರ ನಡುವೆ ಮಾತ್ರ ಹೊರತು ಮಂತ್ರಿ, ಸೈನಿಕರ ನಡುವೆ ಅಲ್ಲ ಎಂದು ಹಿಂಸೆಯನ್ನು ತಡೆಯಲು ಬಾಹುಬಲಿಯ ಮಂತ್ರಿಗಳು ಭರತನ ಮಂತ್ರಿಗಳೊಡನೆ ಸೇರಿ ಚರ್ಚಿಸಿ ಯದ್ಧದ ಸ್ವರೂಪವನ್ನೇ ಬದಲಾಯಿಸುವ ತಂತ್ರವನ್ನು ಕಂಡುಹಿಡಿಯುತ್ತಾರೆ.

ಮಂತ್ರಿಗಳು ಭರತ - ಬಾಹುಬಲಿಯರಲ್ಲಿ
ಸರ್ವಬಲವ ಕೊಲಬೇಡ ಕೂರಸಿವಿಡಿ
ದೊರ್ವರು ಕಾಡಬೇಡಿನ್ನು
ಇರ್ವರ ಧರ್ಮಯುದ್ಧಕ್ಕೆ ಕೇಳ್ವವೆಂದೆಯ್ದಿ
ಸಾರ್ವಭೌಮನ ಕೇಳ್ದರೊಡನೆ (ರಾಜೇಂದ್ರ ಗುಣವಾಕ್ಯ ಸಂಧಿ ೨)

ಕಾಳಿಗವುಂಟು ಖಡ್ಗದ ಯುದ್ಧ ಬೇಡ ಕೇ
ಳ್ಮೈಲಾದ ಮೃದುಲ ಯುದ್ಧವನು
ತೋಳ ಬಲ್ಮೆಯೊಳೆ ನೀವಿಬ್ಬರು ಮಾಳ್ಪುದೆಂ
ದಾ ಲೇಸುಗಾರರಾಡಿದರು (ರಾಜೇಂದ್ರ ಗುಣವಾಕ್ಯ ಸಂಧಿ ೨)

ಅಂದರೆ ನೀವು ಯುದ್ಧ ಮಾಡುವುದಾದರೆ, ಹಿಂಸೆಯ ಯುದ್ಧ ಬೇಡ, ಧರ್ಮದ ಯುದ್ಧ ಮಾಡಬೇಕು, ನೀವಿಬ್ಬರೂ ಆಜಾನುಬಾಹುಗಳು. ಮತ್ತು ಮಲ್ಲಯುದ್ಧದಲ್ಲಿ ಪ್ರಾವೀಣ್ಯವನ್ನು ಪಡೆದವರು. ಆದ್ದರಿಂದ ನೀವು ಮಲ್ಲಯುದ್ಧದ ಜಾಗಕ್ಕೆ ಬರುವಾಗ ಎರಡಾನೆ ಹೊಕ್ಕಾಗೆ ಅದರ ಪರಿಸ್ಥಿತಿ ಹೇಗಿರುತ್ತದೆ. ಆದ್ದರಿಂದ ಯುದ್ಧ ಮಾಡುವುದಾದರೆ ಧರ್ಮಯುದ್ಧವೇ ಮಾಡಿ ಎಂದು ಹೇಳಿದರು. ಹೀಗೆ ಹಿಂಸಾ ರಹಿತವಾದ ದೃಷ್ಟಿ, ಮಲ್ಲ, ಜಲಯುದ್ಧಗಳಿಗೆ ಒಪ್ಪಿದರು. ಈ ಯುದ್ಧಕ್ಕೆ ಬರುವಾಗ ನೀವಿಬ್ಬರೂ ನಿಮ್ಮಲ್ಲಿನ ವೈಮನಸ್ಸನ್ನು ಬಿಡಬೇಕೆಂದು ಮಂತ್ರಿಗಳು ಹೇಳುತ್ತಾರೆ.

ಹೀಗೆ ಯುದ್ಧರಂಗಕ್ಕೆ ಮುಖಾಮುಖಿಯಾಗಿ ಬಂದು ನಿಂತ ಭರತ-ಬಾಹುಬಲಿಯರು ಕುಂದಣದ ಅದ್ರಿಯಂತೆ, ಪಚ್ಚೆಗಿರಿ ಎಂಬ ಎರಡು ಪರ್ವತಗಳು ಎದುರಾದಂತೆ ನೆರೆದಿದ್ದ ಜನರಿಗೆ ಕಂಡುಬಂದರು.

ಭರತನು ಯುದ್ಧಕ್ಕೆ ಮೊದಲು ಬಾಹುಬಲಿಯ ಹಟವನ್ನು ತನ್ನ ಬಗ್ಗೆ ಆತನಿಗಿದ್ದ ವೈರವನ್ನು ಮತ್ತು ತನಗೆ ಆತನ ಬಗೆಗಿದ್ದ ಪ್ರೀತಿಯನ್ನು ನೇರವಾಗಿ ವ್ಯಕ್ತಪಡಿಸುವುದಕ್ಕೆ ಮಾತಿನ ಮೂಲಕ ಮನ ಪರಿವರ್ತಿಸುವ ಪ್ರಯತ್ನ ಮಾಡುತ್ತಾನೆ.

ಮನಸಿಜನ ಕೇಳಣ್ಣ ನಿನಗೆನಗಿಂದು ದು
ರ್ಮನದಿಂದ ಜಗಳ ವಪ್ಪದಕೆ
ಘನವೇರಿನು ಹೇಳು ನಿಷ್ಕಾರಣ ಕದನವ
ಜನಪರೆಸಗುವರೆಯೆಂದ (ರಾಜೇಂದ್ರ ಗುಣವಾಕ್ಯ ಸಂಧಿ ೧೮)

ನಾವಿಬ್ಬರೂ ಒಡಹುಟ್ಟಿದವರು, ಜಿನನ ಪುತ್ರರು, ನನಗೂ ನಿನಗೂ ಇವತ್ತು ಜಗಳ ಶುರುವಾಯಿತು. ಕಾರಣವಿಲ್ಲದೆ ಯುದ್ಧ ಮಾಡಿದರೆ ಅರಸರು, ಜಗತ್ತಿನ ಜನರು ಮೆಚ್ಚುತ್ತಾರೆಯೇ? ಇನ್ನೊಮ್ಮೆ ಆಲೋಚಿಸು ಯುದ್ಧ ಯಾಕೆ ? ಈ ರೀತಿ ಮಾತನಾಡಿದ್ದಕ್ಕೆ ನೀನು ನಮ್ಮ ಬಗ್ಗೆ ಇವನಿಗೆ ಹೆದರಿಕೆಯಾಗಿದೆ ಎಂದು ತಿಳಿಯಬೇಡ. ನಾನು ಯುದ್ಧಕ್ಕೆ ತಯಾರಿದ್ದೇನೆ. ದಕ್ಷಿಣಾಂಕನಿಂದ ನಿನ್ನನ್ನು ಬರಲು ಹೇಳಿದಾಗ ನೀನು ಬರಲಿಲ್ಲ, ನಾನಾದರೆ ಬರುತ್ತಿದೆ ಎಂದು ಹೇಳಿ ಕೊನೆಯ ಕ್ಷಣದಲ್ಲಿ ಯುದ್ಧವನ್ನು ನಿಲ್ಲಿಸುವ ಪ್ರಯತ್ನ ಮಾಡುತ್ತಾನೆ.

ನನ್ನ ಗೆದ್ದುದರಿಂದ ನಿನಗೆ ಕೀರ್ತಿಯೆ ಹೇಳು
ನಿನ್ನ ಗೆಲ್ದೆನಗೊಂದು ಜಸವೆ
ಪನ್ನಗ ನರಸುರ ಲೋಕದುತ್ತಮರು ವಿ
ಯನ್ನರೆ ಯೋಚಿಸು ನೋಡು ? (ರಾಜೇಂದ್ರ ಗುಣವಾಕ್ಯ ಸಂಧಿ ೨೪)

ಅಂದರೆ ನಿನ್ನ ಹಟಮಾರಿತನದಿಂದ ನನ್ನನ್ನು ನೀನು ಗೆದ್ದರೆ ಕೀರ್ತಿ ಬರಲು ಸಾಧ್ಯವೇ. ಅಥವಾ ನನಗೆ ಯಶಸ್ಸು ಬರಲು ಸಾಧ್ಯವೇ. ಸಹೋದರರ ಒಳಗೆ ಯುದ್ಧ ಬಂದರೆ ಅದು ಇಬ್ಬರ ಸೋಲಲ್ಲವೇ ?

ಈ ವರ್ತನೆಯನ್ನು ಕಂಡು ಲೋಕದ ಜನರು ಹೇಸಿಗೆ ಪಡುವುದಿಲ್ಲವೇ ? ದೃಷ್ಟಿಯುದ್ಧ, ಜಲಯುದ್ಧದಲ್ಲಿ ನೀನು ಗೆಲ್ಲಬಹುದು, ಮಲ್ಲ ಯುದ್ಧದಲ್ಲೂ ನೀನು ನನ್ನನ್ನು ಎತ್ತುತ್ತಿ ಎಂದು ನನಗೆ ಗೊತ್ತಿದೆ. ನಾವು ಯುದ್ಧ ಮಾಡುವುದು ಯಾಕೆ 'ಗೆಲುವು ನಿನ್ನದು ಸೋಲು ನನ್ನದು' ಎಂದು ಭರತ ಹೇಳುತ್ತಾನೆ. ಬಾಹುಬಲಿಯನ್ನು ಕುರಿತು ಭರತ ಹೇಳಿದ ಮಾತು ದಶದಿಕ್ಕುಗಳಲ್ಲೂ ನೆರೆದಿದ್ದ ಸೈನಿಕರಿಗೆ ಕೇಳಿ ಅಣ್ಣ ತಮ್ಮನಿಗೆ ಸೋತ ಎಂದು ಮುಖ ಕಂದಿತು.

ತಮ್ಮ ಅರಸ ಸೋಲನ್ನು ಒಪ್ಪಿಕೊಂಡಿದ್ದಾನೆ, ಬಾಹುಬಲಿ ಸಂತೋಷದಿಂದಿದ್ದಾನೆ ಎಂದು ಸೈನಿಕರು ಯೋಚಿಸುತ್ತಿರುವಾಗ ಅದುವರೆಗೆ ಅಣ್ಣನನ್ನು ದಿಟ್ಟಿಸಿ ನೋಡಿದ್ದ ಬಾಹುಬಲಿ ಅಣ್ಣನನ್ನು ನೋಡಲಾಗದೆ ಮುಖ ತಿರುಗಿಸುತ್ತಾನೆ.

ಆಗ ಭರತ 'ಕೇಳು ನಾನೇನು ಚಕ್ರವನ್ನು ಬಯಸಿ ಪಡೆದವನಲ್ಲ, ಅದಾಗಿಯೇ ಶಸ್ತ್ರಾಲಯದಲ್ಲಿ ಹುಟ್ಟಿತು. ನನ್ನಷ್ಟಕ್ಕೆ ನಾನಿದ್ದವನನ್ನು ಎಬ್ಬಿಸಿ ನಾಡು ಸುತ್ತಿಸಿ ನಿಮ್ಮೆಲ್ಲರ ಮನಸ್ಸಿಗೆ ನೋವನ್ನುಂಟು ಮಾಡುವಂತೆ ಮಾಡಿತು. ನಿನಗೆ ನಾನು ಅಣ್ಣನೆಂಬ ಮಮಕಾರವಿಲ್ಲ. ಆದರೆ ನನಗೆ ನಿನ್ನ ಮೇಲೆ ತಮ್ಮನೆಂಬ ಅಕ್ಕರೆಯಿದೆ. ನಿನ್ನ ಭಾಗ್ಯವನ್ನು ಕಣ್ತುಂಬ ನೋಡುತ್ತೇನೆ. ನನಗೊಂದು ರಾಜ್ಯವನ್ನು ಕೊಡು, ನಾನು ಸಂತೋಷದಿಂದ ಅದನ್ನು ಸ್ವೀಕರಿಸಿ ತೃಪ್ತನಾಗುತ್ತೇನೆ ಎಂದು ಭರತ ಹೇಳುತ್ತಾನೆ. ಆದರೂ ತನ್ನ ಮಾತನ್ನು ಇನ್ನಷ್ಟು ದೃಢಪಡಿಸಲು ಭರತನು ಚಕ್ರರತ್ನವನ್ನು ಬಾಹುಬಲಿಯನ್ನು ಓಲೈಸಲು ಕಳುಹಿಸಿಕೊಡುತ್ತಾನೆ.

'ಹೋಗು ಚಕ್ರವೆ ಭುಜಬಲಿಯನೋಲೈಸನೆ
ಹೋಗದೀತಗೆ ಪುಣ್ಯವುಂಟು
ಪೂಗಣೆಯಗೆ ಚಕ್ರ ಬೈಸಗೈಯ್ದು ಪುಣ್ಯವಿ
ಲ್ಲಾಗಿ ನಿಂದಿತು ಮುಂದೆ ಬಂದು (ರಾಜೇಂದ್ರ ಗುಣವಾಕ್ಯ ಸಂಧಿ ೨೨)'
ಎಲೆಲೆ ಪಿಶಾಚ ಹೋಗೆಂದರೇತಕೆ ಹೋಗೆ
ಕಲಹ-ನನ್ನಿಂದಾದುದೆನಗೆ
ಜಲಜಾಸ್ತ್ರನತ್ತ ಸಾರೆಂದು ನೂಕರಿದರದು
ಬಳೆ ಜಾರುವಂತೆ ಜಾರಿದುದು (ರಾಜೇಂದ್ರ ಗುಣವಾಕ್ಯ ಸಂಧಿ ೨೮)

ಬಾಹುಬಲಿಗೆ ರಾಜ್ಯವಾಳುವ ಪುಣ್ಯವಿಲ್ಲದೇ ಇರುವ ಕಾರಣವಾಗಿ ಬಾಹುಬಲಿಯ ಬಳಿಗೆ ಬಂದ ಚಕ್ರರತ್ನ ಆತನನ್ನು ಓಲೈಸದೆ ಹಿಂತಿರುಗುತ್ತದೆ.

ಆಗ ಬಾಹುಬಲಿಗೆ ಭರತನ ಮಾತುಗಳಿಂದ ಕೋಪ ಇಳಿದು ಹೋಯಿತು. ಹೀಗೆ ಬಾಹುಬಲಿ ಭರತನ ಮಾತಿನ ವಶೀಕರಣಕ್ಕೆ ಸೋಲುತ್ತಾನೆ. ಇಡೀ ಭೂಮಂಡಲವನ್ನು ಭರತ ಗೆದ್ದ, ಆದರೆ ನನ್ನಲ್ಲಿ ಸೋಲುಂಡ ಎಂದು ಬಾಹುಬಲಿ ತನ್ನ ಕೃತ್ಯಕ್ಕೆ ನಾಚಿಕೊಳ್ಳುತ್ತಾನೆ. ಅಣ್ಣನನ್ನು ಸೋಲಿಸಿ ನಾನು ತನ್ನ ಕುಲಕ್ಕೆ ಕಂಟಕವನ್ನು, ಲೋಕಾಪವಾದವನ್ನು ತಂದೆ ಎಂದು ದುಃಖಿಸುತ್ತಾನೆ. ಅಲ್ಲದೆ ಚಕ್ರರತ್ನಕ್ಕೆ ಇಲ್ಲಿಯವರೆಗೆ ಎಲ್ಲೂ ಅಡ್ಡಿಯಾಗಿಲ್ಲ, ಆದರೆ ತನ್ನಿಂದ ಅವಮಾನವಾಯಿತೆಂದು ಬಾಹುಬಲಿ ನೊಂದುಕೊಳ್ಳುತ್ತಾನೆ. ಇದೆಲ್ಲಾ ತನ್ನ ತಪ್ಪುಗಳಿಂದ ಎಂದು ಬಾಹುಬಲಿ ಅಂದುಕೊಳ್ಳುತ್ತಾ, ಆತ್ಮನಿರೀಕ್ಷಣೆಯನ್ನು ಮಾಡಿಕೊಳ್ಳುತ್ತಾನೆ. ಇದರಿಂದಾಗಿ ಬೇಸರಗೊಂಡ ಬಾಹುಬಲಿ ಎಲ್ಲದರ ಬಗೆಗಿನ

ಮೋಹವನ್ನು ತೊರೆದು ದೀಕ್ಷೆಯನ್ನು ಕೈಗೊಳ್ಳುವುದು ಮುಖ್ಯವೆಂದು ಭಾವಿಸಿ ತಪಸ್ಸಿಗೆ ಹೋಗಲು ನಿರ್ಧರಿಸುತ್ತಾನೆ. ಇತ್ತ ಬಾಹುಬಲಿ ದೀಕ್ಷೆಗೆ ಹೋಗುವುದು ಭರತನಿಗೆ ಇಷ್ಟವಿರಲಿಲ್ಲ. ನಿರ್ಧಾರ ಬದಲಾಯಿಸಬೇಕೆಂದು ಭರತ ಹೇಳಿದಾಗ ಪ್ರೀತಿಯೆಂಬ ಮಮಕಾರ ನನ್ನಿಂದ ದೂರವಾಯಿತು, ವೈಯಕ್ತಿಕ ಮಮಕಾರವೂ ಕೂಡಾ ತೊರೆದು ಹೋಯಿತು. ಚೂಪಾದ ವಸ್ತುವು ತನ್ನ ಚೂಪನ್ನು ಕಳೆದುಕೊಂಡರೆ ಅದನ್ನು ಮೊನಚು ಮಾಡಬಹುದು, ಆದರೆ ಮುರಿದ ಮನಸ್ಸನ್ನು ಸರಿಗೊಳಿಸಲಾಗದು. ಮಾತ್ರವಲ್ಲ ಆಧ್ಯಾತ್ಮದ ಕಡೆಗೆ ಸಾಗಿದ ಮನಸ್ಸನ್ನು ಅಹಿತದ ಕಡೆಗೆ ತಿರುಗಿಸಲು ಸಾಧ್ಯವಿಲ್ಲ. ಹೀಗೆ ಬಾಹುಬಲಿಯ ತೀರ್ಮಾನದಿಂದ ಭರತ ವಿಚಲಿತನಾಗುತ್ತಾನೆ.

ದೀಕ್ಷೆಗೆ ತೆರಳಿದ ಬಾಹುಬಲಿ ಘೋರ ತಪಶ್ಚರಣೆಯಲ್ಲಿ ನಿರತನಾಗಿದ್ದರೂ ಆತನ ಅಂತರಾಳದಲ್ಲಿ ಅಣ್ಣನ ಭೂಮಿಯ ಮೇಲೆ ನಾನು ನಿಂತಿದ್ದೇನೆ ಎಂಬ ಅಳುಕು ಅಡಗಿದ್ದುದರಿಂದ ಬಾಹುಬಲಿಗೆ ಕೇವಲ ಜ್ಞಾನ ಮೋಕ್ಷ ದೊರೆಯದಂತಾಗುತ್ತದೆ. ಭರತನು ಯುದ್ಧ ಮತ್ತು ತ್ಯಾಗದ ನಡುವೆ ಹಿಂಸೆಯಾಗದಂತೆ ಎಚ್ಚರವಹಿಸಿ ಮಾತಿನ ಮೂಲಕ ಯುದ್ಧವನ್ನು ಮಾಡಿ ಗೆಲ್ಲುತ್ತಾನೆ. ಒಂದು ರೀತಿ ಬಾಹುಬಲಿಯ ಮೋಕ್ಷ ಪ್ರಾಪ್ತಿಗೆ ಭರತನೇ ನೆರವಾದರೂ ಭರತ ಕೊನೆಗೆ ತನ್ನ ಅನೇಕ ಕಾರ್ಯಗಳನ್ನು ಪೂರೈಸಿ ಮುಕ್ತಿ ಪಡೆಯುತ್ತಾನೆ.

ಹೀಗೆ ಭರತನಿಗೆ ದಿಗ್ವಿಜಯ ಮತ್ತು ಪ್ರಸಿದ್ಧಿ ಮುಖ್ಯವಾದರೆ ತಮ್ಮನಾದ ಬಾಹುಬಲಿಯ ಛಲದೊಂದಿಗೆ ತ್ಯಾಗ ಮುಖ್ಯವಾಗಿರುವುದನ್ನು ಗಮನಿಸಬಹುದು.

ಅಧ್ಯಾಯ ೬
ಇಬ್ಬರು ಕವಿಗಳು ಪ್ರತಿಪಾದಿಸಿದ ಅಹಿಂಸಾ ತತ್ವಗಳ ಒಟ್ಟು ಆಶಯ

೧೦ನೇ ಶತಮಾನದಲ್ಲಿ ಗಮನಾರ್ಹವಾಗಿದ್ದ ಧಾರ್ಮಿಕ ಪಂಥಗಳೆಂದರೆ ಜೈನ, ಬೌದ್ಧ, ವೈದಿಕ. ಆದರೆ ಈ ಕಾಲಘಟ್ಟದಲ್ಲಿ ಆದಿಶಂಕರಾಚಾರ್ಯರ ಪ್ರಭಾವಶಾಲಿಯಾದ ವ್ಯಕ್ತಿತ್ವದಿಂದ ಸನಾತನ ಧರ್ಮ ಪುನರುಜ್ಜೀವನಗೊಂಡಿತ್ತು. ಇದರಿಂದಾಗಿ ಬೌದ್ಧ ಧರ್ಮ ತೃಣದೆಸೆಗೆ ಇಳಿದಿತ್ತು. ಆದರೆ ಜೈನಧರ್ಮವು ಗಂಗ ರಾಷ್ಟ್ರಕೂಟರ ಪ್ರಭಾವದ ಜೊತೆಗೆ ಜೈನ ಶ್ರಾವಕರ ಪ್ರೋತ್ಸಾಹದಿಂದ ಆಶ್ರಯ ಕವಿಗಳ ಬರಹಗಳ ನೆರವಿನಿಂದ ಪ್ರವರ್ಧಮಾನಕ್ಕೆ ಬಂತು.

ಈ ಕಾಲದ ಜೈನಕವಿಗಳಲ್ಲಿ ಧರ್ಮಶ್ರದ್ಧೆ, ಸಾಮೂಹಿಕ ವೃದ್ಧಿ, ಸಾಹಿತ್ಯ ಪ್ರೀತಿಗಳು ಗಾಢವಾಗಿತ್ತು. ಐಹಿಕ ಮತ್ತು ಪಾರಲೌಕಿಕ ಎರಡನ್ನು ಸಮನ್ವಯಿಸಿಕೊಂಡ ಜೀವನಶ್ರದ್ಧೆಯು ಅವರದಾಗಿತ್ತು. ಈ ಕಾಲ ಘಟ್ಟದ ಜೈನಕವಿಗಳಲ್ಲಿ ಜನ್ನ ಮತ್ತು ರತ್ನಾಕರವರ್ಣಿಯರೂ ಕೂಡ ಪ್ರಮುಖರು. ಧಾರ್ಮಿಕ ಶ್ರದ್ಧೆಗೆ ಬೇಕಾಗುವಂತೆ ಹಾಗೂ ಜನರ ಮನಸ್ಸನ್ನು ಹಿಂಸೆಯಿಂದ ಅಹಿಂಸೆಯ ಕಡೆಗೆ ಒಯ್ಯುವ ಪ್ರಯತ್ನವನ್ನು ಇವರು ತಮ್ಮ ಆಗಮಿಕ ಕಾವ್ಯದ ಮೂಲಕ ಮಾಡಿದರು. ಜನಸಾಮಾನ್ಯರ ಆಡುಭಾಷೆಯಾದ ಕನ್ನಡವನ್ನು ಮಾಧ್ಯಮವನ್ನಾಗಿ ಉಪಯೋಗಿಸಿಕೊಂಡರು. ಹಿಂಸೆಯಿಂದ ಮಾತ್ರ ಸಾಮ್ರಾಜ್ಯವನ್ನು ಗೆಲ್ಲಲು ಸಾಧ್ಯ ಎಂಬ ರಾಜರ ಪ್ರತಿಪಾದನೆಯ ನಡುವೆಯೇ ಅಹಿಂಸೆಯಿಂದಲೂ ಗೆಲುವು ಸಾಧ್ಯ ಎಂಬುದನ್ನು ಯಶಸ್ವಿಯಾಗಿ ತಮ್ಮ ಕಾವ್ಯದಲ್ಲಿ ಮನದಟ್ಟು ಮಾಡಿದರು. ಇದರ ಜೊತೆಗೆ ಜೈನಧರ್ಮ ಪ್ರಸಾರವನ್ನು ಕೈಗೊಳ್ಳುವುದು ಇವರ ಆಶಯವಾಗಿತ್ತು. ಅದಕ್ಕಾಗಿ ಇವರು ತಮ್ಮ ಕಾವ್ಯದಲ್ಲಿ ಸಾಮಾನ್ಯವಾಗಿ ಜೀವ ಪ್ರೀತಿ, ಸೌಂದರ್ಯಾಸ್ವಾದದ ದೃಷ್ಟಿಗಳನ್ನು ಮೂಲವಾಗಿಟ್ಟುಕೊಂಡೇ ಸ್ವಮತದಲ್ಲಿ ನಿಷ್ಠೆ, ಅನ್ಯ ಮತದಲ್ಲಿ ಸಹಿಷ್ಣುತೆ ಇವುಗಳನ್ನು ಜಾಗೃತವಾಗಿರಿಸಿ ಉದಾರ ಮಾನವ ಧರ್ಮವನ್ನು ಪ್ರತಿಪಾದಿಸಿದರು. ಗಮಕ-ಕಾವ್ಯಧರ್ಮಗಳ ಸಮನ್ವಯವನ್ನು ಪಾಲಿಸುವುದೇ ಈ ಜೈನಕವಿಗಳ ಆದರ್ಶ ಎಂದು ಕವಿಗಳು ಪ್ರತಿಪಾದಿಸಿದ್ದು ಅಹಿಂಸಾತತ್ವವನ್ನು. ಆದರೆ ವ್ಯಕ್ತಪಡಿಸಿದ ರೀತಿ ಬೇರೆಬೇರೆಯದಾಗಿತ್ತು.

ಇಲ್ಲಿ ನಮಗೆ ಪ್ರಮುಖವಾಗಿ ಕಾಣುವ ವಸ್ತು - ರತ್ನಾಕರವರ್ಣಿಯ ಭರತ - ರಾಜ್ಯದ ಪದವಿಯ ಆಸೆಯಿಂದ ಸಂಬಂಧಗಳನ್ನು ಮರೆತು ಯುದ್ಧಕ್ಕೆ ಇಳಿದರೆ, ಜನ್ನನ ಯಶೋಧರನು ತನ್ನ ಪತ್ನಿಯ ಕಾಮ ಪರಾಕಾಷ್ಠೆಯಿಂದ ನೊಂದು ಸಂಕಲ್ಪ ಹಿಂಸೆಗೆ ಇಳಿಯುತ್ತಾನೆ.

ಜನ್ನನ ಯಶೋಧರ ತನ್ನ ಸಂಯಮ ಅಥವಾ ತಾಳ್ಮೆಯ ಕಾರಣಕ್ಕಾಗಿ ಖಡ್ಗವನ್ನು ಕೆಳಗಿರಿಸಿ ಅಮೃತಮತಿಯನ್ನು ಕೊಲ್ಲಲಿಲ್ಲ. ಅವಳು ಮಾಡಿದ ತಪ್ಪನ್ನು ಅವಳೇ ಅರ್ಥ ಮಾಡಿಕೊಳ್ಳಬಹುದೆಂದು ಅಣಕದ ಮಾತುಗಳನ್ನು ಆಡುತ್ತಿದ್ದ ಯಶೋಧರ ಕೊನೆಗೆ ಅದನ್ನೂ ಬಿಡುತ್ತಾನೆ. ಯಾಕೆಂದರೆ ಮಾನಸಿಕ ಹಿಂಸೆ ಕೊಡಬಾರದು, ಕಾರ್ಯರೂಪದಲ್ಲಿ ಮಾತ್ರವಲ್ಲ ಮನಸ್ಸಿನಲ್ಲೂ ಹಿಂಸೆಯನ್ನು ಯೋಚಿಸಬಾರದೆಂದು ತಿಳಿಯುತ್ತಾನೆ.

ಅಂತೆಯೇ ರತ್ನಾಕರನ ಭರತ ಕೂಡಾ ನೀರಿನ ಗಿಂಡಿಗೆ ಬೀಳುವ ಸಂದರ್ಭದಲ್ಲಿ, ಹೂ ಕೊಡುವ ಸಂದರ್ಭದಲ್ಲಿ, ವ್ರತಗಳ ಪಾಲನೆಯಲ್ಲಿ ತನ್ನ ಹೆಂಡತಿಯರೊಂದಿಗೆ ಮತ್ತು ಯುದ್ಧದ ಸಂದರ್ಭದಲ್ಲಿ ರಾಜರೊಂದಿಗೆ, ಬಾಹುಬಲಿಯೊಂದಿಗೆ ಕೂಡಾ ಅಣಕದ, ಮನನೋಯುವ ಮಾತುಗಳನ್ನು ಸಹಾ ಆಡದೆ

ಮನಸ್ಸಿನಲ್ಲೂ ಯಾರಿಗೂ ಹಿಂಸೆಯನ್ನು, ಕೆಟ್ಟದ್ದನ್ನು ಯೋಚಿಸದೆ ಎಚ್ಚರಗೊಳ್ಳುತ್ತಾನೆ.

ಯಶೋಧರ ಚಂದ್ರಮತಿ ಮಾರಿದತ್ತರ ಪಾತ್ರದ ಮೂಲಕ ಕೊಲೆ, ಬಲಿ, ಹಿಂಸೆಯನ್ನು ಮಾಡಿ ಏಳು ಜನ್ಮಗಳಲ್ಲಿ ನಾನಾ ಬಗೆಯ ಕಷ್ಟಗಳನ್ನನುಭವಿಸಿ ಅದರಿಂದಾಗುವ ಕಷ್ಟ ಏನೆಂಬುದನ್ನು ಕಲ್ಪಿಸಿಕೊಂಡು ಹಿಂಸಾಭಾವವನ್ನು ನಿಲ್ಲಿಸುವ ಆಶಯ ಜನ್ನನದ್ದಾದರೆ

ಭರತ ಚಕ್ರಿಯ ವರ್ತನೆಯನ್ನು ಕೆಳಗಿಳಿಸಬಾರದೆಂಬ ಇಚ್ಛೆಯಿಂದ ಯುದ್ಧ ಪ್ರಸಂಗವನ್ನಾಗಲೀ ಅಥವಾ ಸೋತಂತಹ ಭರತನಿಂದ ಚಕ್ರಪ್ರಯೋಗ ಮಾಡಿಸುವುದನ್ನಾಗಲೀ ತರದೆ ಕೇವಲ ಮಾತಿನಿಂದ ಭರತನು ಬಾಹುಬಲಿಯನ್ನು, ಇತರ ರಾಜರನ್ನು ಶರಣಾಗತಿಯ ಮೂಲಕ ಸೋಲಿಸಿ, ಜಯಿಸುವಂತೆ ಮಾರ್ಪಾಡು ಮಾಡುತ್ತಾನೆ. ಅಂದರೆ ಜಗತ್ತಿನಲ್ಲಿ ಹಿಂಸೆಯಿಂದಲ್ಲ, ಅಹಿಂಸೆಯಿಂದಲೂ ದಿಗ್ವಿಜಯವನ್ನು ಸಾಧಿಸಬಹುದೆಂದು ರತ್ನಾಕರವರ್ಣಿಯ ಆಶಯವಾಗಿದೆ.

ಕಂಡ ಕನಸು, ಅದರ ಪರಿಣಾಮ, ಭವಾವಳಿಗೆ ಹೆದರಿ ಬಲಿಕೊಡುವ ಉದ್ದೇಶವಿದ್ದರೂ ಪ್ರಾಣಿಬಲಿಯು ಹಿಂಸೆಯೆಂದು ತಿಳಿದು, ಹಿಟ್ಟಿನ ಹುಂಜವನ್ನು ಬಲಿಕೊಡುವುದರ ಮೂಲಕ ಅಹಿಂಸೆಯನ್ನು ಜನ್ನ ಪ್ರತಿಪಾದಿಸಿದರೆ, ರತ್ನಾಕರವರ್ಣಿ ಹಿಂಸೆಯನ್ನು ತಡೆಯಲು ಮೂರು ಯುದ್ಧಗಳಲ್ಲಿ ಮಾರ್ಪಾಡು ಮಾಡಿ ಮಾತಿನ ಮೂಲಕ ಯುದ್ಧವನ್ನು ಮಾಡಿ ಅಹಿಂಸೆಯನ್ನು ಪ್ರತಿಪಾದಿಸುತ್ತಾನೆ.

ರತಿ ರಹಸ್ಯಗಳನ್ನು ಬಣ್ಣಿಸುವುದಕ್ಕಿಂತಲೂ ಪ್ರಣಯ ಸಮಸ್ಯೆಯನ್ನು ಬಿಡಿಸುವುದರ ಕಡೆಗೆ ಜನ್ನನ ಆಸಕ್ತಿ ಹೆಚ್ಚು. ಅದೇ ಅವನ ವೈಶಿಷ್ಟ್ಯ, ಅದೇ ಅವನ ಕಾವ್ಯ ಸತ್ವ ಎಂಬ ತೀನಂಶ್ರೀಯವರ ಮಾತನ್ನು ಒಪ್ಪಬಹುದು. ಯಾಕೆಂದರೆ ಯಶೋಧರನಿಗೆ ತನ್ನ ಪತ್ನಿ ಅಮೃತಮತಿಯ ಪ್ರಣಯ ಪ್ರಸಂಗವೇ ಮುಂದಿನ ಅವಘಡಕ್ಕೆಲ್ಲ ಕಾರಣ. ಆದ್ದರಿಂದ ಈ ಪ್ರಣಯ ಪ್ರಸಂಗವನ್ನು ಚಿತ್ರಿಸಿ ಹಿಂಸೆ-ಅಹಿಂಸೆಗಳ ಪರಿಣಾಮವನ್ನು ನಿರೂಪಿಸಿ ಜೈನಧರ್ಮದ ಸಿದ್ಧಾಂತವನ್ನು ಈ ಕಾವ್ಯದ ಮೂಲಕ ಸಾರಿದ್ದಾನೆ.

ಬಾಳಿನಲ್ಲಿ ಏಳು ಬೀಳುಗಳನ್ನು ಅನುಭವಿಸಿ ಭೋಗಿಯಾಗಿ, ಯೋಗಿಯಾಗಿ ಒಂದು ಭವ್ಯವಾದ ಮತ್ತು ಸಮನ್ವಯಪೂರ್ಣವಾದ ಜೀವನದರ್ಶನವನ್ನು ಕಂಡು ಅದರಂತೆ ಜೀವಿಸಲು ಹವಣಿಸುವಂತೆ ಭರತೇಶನ ಕಥೆ ಅದರ ಪ್ರತೀಕವಾಗಿ ಕವಿ ಬಳಸಿದ್ದಾನೆ[೬]. ಇದಕ್ಕೆ ಮುಗಳಿ ರಂಶ್ರೀಯವರ ಈ ಮಾತನ್ನು ಒಪ್ಪಬಹುದು. ಯಾಕೆಂದರೆ ರತ್ನಾಕರನ ಭರತ ಜೀವನದಲ್ಲಿ ಯೋಗಭೋಗ ಸಮನ್ವಯ ತತ್ವವನ್ನು ಕಾವ್ಯದ ಉದ್ದಕ್ಕೂ ತಂದು, ಭರತನು ಯೋಗಭೋಗಗಳೆರಡರಲ್ಲೂ ಸಮತೋಲನವನ್ನು ಕಾಪಾಡಿ, ಮೋಕ್ಷವನ್ನು ಸಂಪಾದಿಸುವುದು. ಅಂದರೆ ರತ್ನಾಕರನ ಪ್ರಕಾರ ಭೋಗವನ್ನು ಅನುಭವಿಸದೆ ಆಧ್ಯಾತ್ಮದ ಕಡೆಗೆ ಹೋಗುವ ನಡೆ ಎಂಬುದನ್ನು ಆತ ಒಪ್ಪುವುದಿಲ್ಲ. ಇಡೀ ಕಾವ್ಯದಲ್ಲಿ ಲೌಕಿಕ ಚಿಂತನೆಗಳು ನಡೆದಿರುವುದನ್ನು ಕಾಣಬಹುದು.

ಯಶೋಧರ - ಅಮೃತಮತಿ ಸಂಕಲ್ಪ ವಧೆಯಿಂದಲೇ ಇಷ್ಟು ಹಿಂಸೆ ಅನುಭವಿಸಿ ಭವಾವಳಿಗಳನ್ನು ದಾಟಿದರೆ, ಇನ್ನು ಕಾರ್ಯರೂಪದ ಹಿಂಸೆಯಿಂದ ಎಂತಹ ನರಕ ಬರಬಹುದೆಂದು ಕವಿಯೇ ಅಭಯರುಚಿ, ಅಭಯಮತಿಯರ ಮೂಲಕ ಹೇಳುವುದರಲ್ಲಿ ಇನ್ನು ಮುಂದೆ ಅಹಿಂಸೆ ನಡೆಯಬಾರದೆಂಬಂತೆ ಕವಿಯೇ ಮುನ್ಸೂಚನೆಯನ್ನು ಈ ಮಕ್ಕಳ ಮೂಲಕ ಹೇಳಿಸುತ್ತಾನೆ. ಭರತನಲ್ಲಿ ಯಾವುದೇ ಮಾನಸಿಕ ಹಿಂಸೆ ನಡೆಯದಂತೆ ರತ್ನಾಕರ ಎಚ್ಚರವಹಿಸಿ, ಬಾಹುಬಲಿಯ ಮೂಲಕ ಯುದ್ಧಕ್ಕೆ ಕಾರಣವಾಯಿತೆಂದು

ಮಾರ್ಪಡಿಸಿ, ಕೊನೆಯ ಪಕ್ಷಕ್ಕೆ ಮಾತಿನ ಮೂಲಕ ಯುದ್ಧವನ್ನು ಬದಲಾಯಿಸಿ ಇಡೀ ಕಥೆಯಲ್ಲಿ ತಿರುವನ್ನು ತಂದು, ಬಾಹುಬಲಿಗೆ ಪಶ್ಚಾತ್ತಾಪ ಆಗುವುದರ ಮೂಲಕ 'ಅಹಿಂಸೆ'ಯ ತತ್ವವನ್ನು ಪಾತ್ರದ ಮೂಲಕ ತಂದಿದ್ದಾನೆ.

ಜೈನಧರ್ಮದ ಅಡಿಗಲ್ಲು ಕರ್ಮಸಿದ್ಧಾಂತ. ಪಾಪ ಮಾಡಿದರೆ ಈ ಪಾಪಕ್ಕೆ ಇಂತಹ ಶಿಕ್ಷೆ ಎಂಬಂತಹ ಹೃದಯಹೀನ ಕರ್ಮಸಿದ್ಧಾಂತದ ತರ್ಕವು ಜನ್ನನ ಕೃತಿಯಲ್ಲಿ ಕೆಲಸಮಾಡುತ್ತದೆ. ಸಂಕಲ್ಪ ವಧೆಗಿನಿತಾಯ್ತು. ದಿಟ ದಿನೇನೇನಾಗರ್, ಮಾಡಿದುದಂನಾವುಣ್ಣದೆ ಪೋಕುಮೆ, ಜಗದಲ್ಲಿ ದುರ್ಜಮ ಕರ್ಮ ವಿಪಾಕಂ, ದೋಷದ ಬೆನ್ನೊಳೆ ಸಂಧಿಸುವ ದಂಡಂತೆ - ಇಂತಹ ಕವಿಯು ತನ್ನ ಮಾತುಗಳನ್ನು ಕೃತಿಯಲ್ಲಿ ಹೇಳುವುದರ ಮೂಲಕ ಕರ್ಮಸಿದ್ಧಾಂತವನ್ನು ಹೇಳುತ್ತದೆ. ಬಿದಿಯಂ ಮೂಗಂ ಕೊಯ್ಬಿಟ್ಟಿಗೆಯೊಳ್ ಪೋಗರಸೆದೆ, ಜೀವಜಾತದಿಂದೆನಗೆ ಬಲಿಯನಿತ್ತೊಡೆ ಮುನಿವೆಂ ಎಂದು ಜನ್ನ ಕವಿಯೇ ಮಾರಿದತ್ತ ಮತ್ತು ಚಂಡಮಾರಿಯ ಮೂಲಕ ಹೇಳಿಸುತ್ತಾನೆ.

ರತ್ನಾಕರನು ಯುದ್ಧವನ್ನು ಕೈಬಿಟ್ಟು ಮಾತಿನ ಮೂಲಕ ಬದಲಾಯಿಸುತ್ತಾನೆ. ಜಲದೃಷ್ಟಿ ಮುಷ್ಟಿ ಯುದ್ಧದಿ ಚಕ್ರಿ ತಮ್ಮ ಗೆಲದೋರಿ ನುಡಿದರಂತದನು.

ಇವರಿಬ್ಬರ ನಡುವೆ ಯುದ್ಧ ಆಗಬಾರದೆಂದು ರತ್ನಾಕರವರ್ಣಿ ಭರತನ ಮೂಲಕ ರಣಭಂಗವಾಗಬಾರದು ತಮಗೆಂದು ಸದ್ಗುಣವಚನದಿ ಜಯಿಸಿದನು ಕ್ಷಣದಿ ಮುಕ್ತಿಯ ಕೊಂಬ ಮೃದುಹೃದಯಗೆ ಕ್ರೂರ ಗುಣವುಂಟೆ ಎಂದು ಹೇಳುವಲ್ಲಿ ಇಬ್ಬರೂ ಕವಿಗಳು ಅಹಿಂಸಾ ಪರಮೋ ಧರ್ಮ ಎಂಬ ತತ್ವಕ್ಕೆ ಒತ್ತು ನೀಡಿ ಕಾವ್ಯ ರಚಿಸಿರುವುದನ್ನು ಗುರುತಿಸಬಹುದು.

ಜೀವದಯೆ ಜೈನಧರ್ಮಂ ಎನ್ನುವ ಮೂಲಕ ಅಹಿಂಸೆಯ ಮುಂದೆ ಹಿಂಸೆಯ ಪರಾಭವ ಅನಿವಾರ್ಯ ಎನ್ನುವ ತತ್ವವನ್ನು ಎರಡೂ ಕೃತಿಗಳಲ್ಲಿ ಗುರುತಿಸಬಹುದು. ಮನುಷ್ಯನು ಕಾಣದ ಆಸೆಗೆ ಬಲಿಯಾದರೆ ಸಂಬಂಧಗಳನ್ನು ಮರೆತು ಹಿಂಸೆಗೆ ಬಲಿಯಾಗುತ್ತಾನೆ. ಆಗ ಸಂಭವಿಸುವ ದುರಂತವನ್ನು ಜನ್ನನ ಕೃತಿಯಲ್ಲಿ ಯಶೋಧರ, ಅಮೃತಮತಿ, ಚಂದ್ರಮತಿ ಹಾಗೂ ಭರತೇಶ ವೈಭವದಲ್ಲಿ ಭರತ - ಬಾಹುಬಲಿಯರ ಹೋರಾಟದ ಮೂಲಕ ಇಬ್ಬರೂ ಕವಿಗಳು ಪರಿಚಯಿಸುತ್ತಾರೆ.

ಯಶೋಧರ ಚರಿತೆ ಒಂದು ಧಾರ್ಮಿಕ ಕಾವ್ಯ, ಅದರ ವಸ್ತುವಿನೊಂದಿಗೆ ಲೌಕಿಕತೆಯನ್ನು ಹೊಂದಿದ್ದರೂ ಜನ್ನ ಅಹಿಂಸೆಯನ್ನು ಎತ್ತಿಹಿಡಿಯಲು ಮಾಡಿದ ಪ್ರಯತ್ನ ಮಾಡಿದರೆ ರತ್ನಾಕರವರ್ಣಿ ಭರತೇಶ ವೈಭವದಲ್ಲಿ ಹಿಂಸೆಯಿಂದಲೆ ವೈರಾಗ್ಯ ಹೇಗೆ ಹುಟ್ಟುತ್ತದೆ ? ಕ್ಷಣದ ಆಸೆ, ಸಾಮ್ರಾಜ್ಯದ ದಾಹದಲ್ಲಿ ಒಂದಿಷ್ಟು ಹಿಂಸೆಯ ನೋವಾಗದಂತೆ ಮಾಡುವ ಅಹಿಂಸಾತತ್ವವನ್ನು ಎತ್ತಿಹಿಡಿಯುವ ಪ್ರಯತ್ನ ಮಾಡಿದ್ದಾನೆ.

ಇಡೀ ಜಗತ್ತಿನಲ್ಲಿ ಎಲ್ಲರಿಗೂ ಬದುಕುವ, ಬೇಕಾದುದನ್ನು ಪಡೆಯುವ ಅಧಿಕಾರವಿದೆ ಎಂಬ ಮಾತ್ರಕ್ಕೆ ಇತರರಿಗೆ ಹಿಂಸೆ ಮಾಡಿ ಬದುಕುವುದು ತಪ್ಪು. ಆದರೆ ಮನುಷ್ಯನಾದವನು ಯಾವುದೇ ಒಂದಲ್ಲ ಒಂದು ಕಾರಣಕ್ಕಾಗಿ ಹಿಂಸೆ ಮಾಡದೆ ಬದುಕಲು ಸಾಧ್ಯವೇ ಇಲ್ಲ. ಆದ್ದರಿಂದ ತನ್ನಿಂದ ಎಷ್ಟು ಸಾಧ್ಯವೋ ಅಷ್ಟು ಅಹಿಂಸೆಯನ್ನು ಪಾಲಿಸಬೇಕು. ಹೀಗೆ ಜೈನಕೃತಿಗಳಲ್ಲಿ ಹಿಂಸೆಯ ಪ್ರತಿಪಾದನೆ ಇದ್ದರೂ ಕೂಡ ಅದನ್ನು ತನ್ನಿಂದ ಎಷ್ಟು ಸಾಧ್ಯವೋ ಅಷ್ಟರ ಮಟ್ಟಿಗೆ ಅಹಿಂಸಾ ಪ್ರತಿಪಾದನೆಯ ಕಡೆಗೆ

ಕೊಂಡೊಯ್ಯುವುದನ್ನು ಗುರುತಿಸಬಹುದು. ಇಂತಹ ಜೈನಕೃತಿಗಳಲ್ಲಿ ಜನ್ನ ಮತ್ತು ರತ್ನಾಕರವರ್ಣಿಯ ಕೃತಿಗಳನ್ನು ಗಮನಿಸಬಹುದು.

ಈ ಇಬ್ಬರು ಕವಿಗಳ ಉದ್ದೇಶ, ಆಶಯವೇ ತಮ್ಮ ಕಾವ್ಯದಲ್ಲಿ ಹಿಂಸೆಯ ದುರಂತದ ಘೋರ ಪರಿಣಾಮಗಳನ್ನು ಬಿತ್ತರಿಸಿ, ತನ್ಮೂಲಕ ಅಹಿಂಸೆಯನ್ನು ಎತ್ತಿ ಹಿಡಿಯುವುದಾಗಿದೆ.

ಹೀಗೆ ಇಬ್ಬರೂ ಕವಿಗಳಲ್ಲಿ ಜನ್ನ ತನ್ನ ಕಾವ್ಯದಲ್ಲಿ ನಾಲ್ಕು ಅವತಾರಗಳ ಮೂಲಕ ಮೊದಲು ಹಿಂಸೆಯ ಒಂದೊಂದು ಚಿತ್ರಣವನ್ನು ನೀಡಿ ಕೊನೆಗೆ ಹಿಂಸೆಯಿಂದ ಮುಕ್ತಿ ಪಡೆಯಬೇಕೆನ್ನುವ ದೃಷ್ಟಿಯಿಂದ ಅಹಿಂಸಾ ತತ್ವಕ್ಕೆ ಒತ್ತು ನೀಡಿದರೆ, ಅದೇ ರತ್ನಾಕರನು ಭುಜಬಲಿಯಾದ ಬಾಹುಬಲಿ ಮತ್ತು ಭರತರಲ್ಲಿ ಯುದ್ಧವೇ ನಿಶ್ಚಯವಾಯಿತೆಂದಾಗ ಕವಿಯು ಕಟಕವಿನೋದ, ಮದನ ಸನ್ನಾಹ, ರಾಜೇಂದ್ರ ಗುಣವಾಕ್ಯಗಳೆಂಬ ೩ ಸಂಧಿಗಳನ್ನು ಏರ್ಪಡಿಸಿ ಯುದ್ಧದ ಸಂಭವವನ್ನು ಕೊನೆಯವರೆಗೂ ತೋರಿ, ಅಂತ್ಯದಲ್ಲಿ ಅಹಿಂಸಾಧರ್ಮವನ್ನು ನೆಲೆಗೊಳ್ಳುವಂತೆ ಸೋದರರ ಯುದ್ಧವು ಸೊಗಸಲ್ಲವೆಂದು ಅದನ್ನು ವಿಸ್ತರಿಸದೆ ಲೋಕಕ್ಕೆ ಯೋಗ್ಯವಾದ ಅಹಿಂಸಾ ನೀತಿಯನ್ನು ತೋರಿರುವುದು ಗಮನಾರ್ಹ.

ನಿಷ್ಕಾಹೀನವೂ ಹಿಂಸಾಮಯವೂ ಆದ ಇಂದಿನ ಜಗತ್ತಿಗೆ ಇಂತಹ ಕೃತಿಗಳು ಯೋಗ್ಯವಾದವುಗಳು.

ಒಟ್ಟಿನಲ್ಲಿ ಇವೆರಡೂ ಕೃತಿಗಳು ಕೇವಲ ಒಂದು ಜೈನಮತೀಯ ಕೃತಿಯಾಗಿ ಪರಿಣಮಿಸದೆ ವಿಶಾಲತರವಾದ ಧರ್ಮ ಸಂದೇಶವನ್ನು ಸಾರುವ ದೃಷ್ಟಿಯಿಂದ ಹಾಗೂ ಜಿನಧರ್ಮದ ನೆವದಲ್ಲಿ ಜೀವನ ಧರ್ಮವನ್ನು ಹೇಳುವ ಕಾವ್ಯ ಎಂದು ಹೇಳಬಹುದು.

ಅಧ್ಯಾಯ ೭
ಅಧ್ಯಯನದ ಫಲಶ್ರುತಿ

ಒಟ್ಟಿನಲ್ಲಿ ಜೈನಧರ್ಮದ ತತ್ವಗಳಲ್ಲಿ ಒಂದಾದ ಅಹಿಂಸೆಯ ಪರಿಕಲ್ಪನೆಯ ಆಧಾರದ ಮೇಲೆ ರಚನೆಯಾದ ಈ ಎರಡು ಪ್ರಮುಖ ಕೃತಿಗಳನ್ನು ಅಭ್ಯಸಿಸಿದಾಗ 'ಅಹಿಂಸೆಯೇ ಪರಮ ಧರ್ಮ, ಜೀವದಯೆಯೇ ಜೈನಧರ್ಮ'ದ ಪ್ರಮುಖ ಲಕ್ಷಣ ಎಂಬ ಅಂಶ ನಮ್ಮ ಅರಿವಿಗೆ ಬರುತ್ತದೆ.

ಅಹಿಂಸೆಯ ಇನ್ನೊಂದು ಮುಖವಾಗಿ ವೈರಾಗ್ಯವನ್ನು ಪ್ರಧಾನವಾಗಿ ಕೃತಿಗಳಲ್ಲಿ ಪ್ರತಿಪಾದಿಸಲಾಗಿದೆ. ಜನ್ನ ಮತ್ತು ರತ್ನಾಕರವರ್ಣಿಯರು ತಮ್ಮ ಕೃತಿಯ ಮೂಲಕ ಅಹಿಂಸೆಯ ಎರಡು ವಿಭಿನ್ನ ಮುಖಗಳನ್ನು ಪರಿಣಾಮಕಾರಿಯಾಗಿ ನಿರೂಪಿಸಿದ್ದಾರೆ.

ಈ ಲೇಖಕರು ಎರಡು ವಿಭಿನ್ನ ವಸ್ತುಗಳನ್ನು ತಮ್ಮದೇ ಆದ ಕಾವ್ಯಶೈಲಿಯಲ್ಲಿ ಜನರ ಮುಂದಿಟ್ಟು ಜೈನ ಧರ್ಮದ ಅಹಿಂಸಾ ಸಿದ್ಧಾಂತವನ್ನು ಪ್ರತಿಯೊಬ್ಬ ಸಾಮಾಜಿಕನೂ ಒಪ್ಪಿಕೊಳ್ಳುವಂತೆ ಮಾಡಲು ಪ್ರಯತ್ನಿಸಿದ್ದಾರೆ. ಜನ್ನನ ಯಶೋಧರ ಚರಿತೆಯಲ್ಲಿ ಯಶೋಧರನು ಅರಿಯದೆ ಮಾಡಿದ ಸಂಕಲ್ಪಹಿಂಸೆಯಿಂದ ಭವಾವಳಿಗಳನ್ನು ಹೊಂದಿ, ಸಂಕಷ್ಟಗಳನ್ನು ಎದುರಿಸಿ ಪಶ್ಚಾತ್ತಾಪದಿಂದ ಪ್ರಾಯಶ್ಚಿತ್ತವನ್ನು ಹೊಂದಿದ ಚಿತ್ರಣವಿದೆ. ರತ್ನಾಕರನ ಭರತೇಶ ವೈಭವದಲ್ಲಿ ರಾಜ್ಯದ ವ್ಯಾಮೋಹದಿಂದ ಸಹೋದರ ಸಂಬಂಧವನ್ನು ಮರೆತು ಹಿಂಸೆಯು ತಮ್ಮ ಸಾರ್ವಭೌಮತ್ವವನ್ನು ಮೆರೆಯಲು ಪ್ರಯತ್ನಪಟ್ಟಾಗ ಅಹಿಂಸೆ ಸಾರ್ವಕಾಲಿಕ ಸತ್ಯ ಎಂಬ ಸತ್ಯದ ಚಿತ್ರಣವಿದೆ. ಈ ಅಂಶಗಳನ್ನು ಈ ಅಧ್ಯಯನದಲ್ಲಿ ಗುರುತಿಸಿ ವಿಶ್ಲೇಷಿಸಲಾಗಿದೆ.

ಪರಾಮರ್ಶನ ಗ್ರಂಥಗಳು

೧. ಜಿ. ಎಸ್. ಶಿವರುದ್ರಪ್ಪ - ಸಮಗ್ರ ಕನ್ನಡ ಸಾಹಿತ್ಯ ಚರಿತ್ರೆ
ಸಂಪುಟ ೨ ಮತ್ತು ೩

೨. ರಂ. ಶ್ರೀ. ಮುಗಳಿ - ಕನ್ನಡ ಸಾಹಿತ್ಯ ಚರಿತ್ರೆ
ಸಮಾಜ ಪುಸ್ತಕಾಲಯ, ಧಾರವಾಡ

೩. ಸಂ.: ಎಚ್. ಎಸ್. ರಾಘವೇಂದ್ರ ರಾವ್ - ಶತಮಾನದ ಸಾಹಿತ್ಯ ವಿಮರ್ಶೆ
ಕನ್ನಡ ಸಾಹಿತ್ಯ ಅಕಾಡೆಮಿ
ಕನ್ನಡ ಭವನ, ಜೆ.ಸಿ. ರಸ್ತೆ, ಬೆಂಗಳೂರು - ೩

೪. ಕುವೆಂಪು - ದ್ರೌಪದಿಯ ಶ್ರೀಮುಡಿ
ಉದಯರವಿ ಪ್ರಕಾಶನ
ವಾಣಿವಿಲಾಸಪುರಂ, ಮೈಸೂರು - ೩

೫. ಡಾ। ಎಂ. ಚಿದಾನಂದ ಮೂರ್ತಿ - ಹೊಸತು ಹೊಸತು (ಸಂಪ್ರಬಂಧ ಸಂಪುಟ)
ಕನ್ನಡ ಪುಸ್ತಕ ಪ್ರಾಧಿಕಾರ
ಚಾಮರಾಜಪೇಟೆ, ಬೆಂಗಳೂರು - ೧೮

೬. ಡಾ। ಶಾಲಿನಿ ರಘುನಾಥ್ - ಸಮನ್ವಿತ ಮಹಿಳಾ ಅಧ್ಯಯನಗಳು
ಅಕ್ಷರ ಪ್ರಕಾಶನ, ಹೆಗ್ಗೋಡು (ಸಾಗರ)
ಕರ್ನಾಟಕ ೧೯೯೪

೭. ಜಯದೇವಪ್ಪ ಜೈನಕೇರಿ - ಕವಿಕಾವ್ಯ ಸಿಂಚನ
ಮಲೆನಾಡು ವೀರಶೈವ ಅಧ್ಯಯನ ಸಂಸ್ಥೆ
ಶ್ರೀ ಮುರುಘರಾಜೇಂದ್ರ ಮಹಾಸಂಸ್ಥಾನ ಮಠ
ಆನಂದಪುರ, ಶಿವಮೊಗ್ಗ

೮. ಕೀರ್ತಿನಾಥ ಕುರ್ತಕೋಟಿ - ಕನ್ನಡ ಸಾಹಿತ್ಯ ಸಂಗಾತಿ
ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ ಹಂಪಿ

೯. ಸಂ : ಮನುಬಳಿಗಾರ ಮತ್ತು ಡಾ। ಜಿ.ಎಂ. ಹೆಗ್ಡೆ - ತಲಸ್ಪರ್ಶಿ - ಡಾ। ಗಿರಡ್ಡಿ ಗೋವಿಂದರಾಜರ
ಅಭಿನಂದನಾ ಸಂಪುಟ
ಸಾಹಿತ್ಯ ಪ್ರಕಾಶನ, ಹುಬ್ಬಳ್ಳಿ - ೫೮೦ ೦೨೮

೧೦. ರಾಜೇಂದ್ರ ಚೆನ್ನಿ - ಅಮೂರ್ತತೆ ಮತ್ತು ಪರಿಸರ
"ಅಭಿನವ", ೫೮, ಮಹಡಿ ೫ನೇಯ,
ಎ ಅಡ್ಡರಸ್ತೆ, ಸುಬ್ಬಣ್ಣ ಗಾರ್ಡನ್,
ವಿಜಯ ನಗರ, ಬೆಂಗಳೂರು - ೪೦

೧೧. ತೆಕ್ಕುಂಜೆ ಗೋಪಾಲಕೃಷ್ಣ ಭಟ್ - ಕನ್ನಡ ನವರತ್ನಗಳು
ಶ್ರೀ ಮಂಜುನಾಥೇಶ್ವರ ಪುಸ್ತಕ ಪ್ರಕಾಶನ ಮಾಲೆ,
ಉಜಿರೆ

೧೨. ಡಾ। ಎಸ್. ಪಿ. ಪಾಟೀಲ - ಜಿನಮಾಣಿಕ್ಯ
ವೈಶಾಲಿ ಪ್ರಕಾಶನ, ಧಾರವಾಡ

೧೩. ಪ್ರೊ. ಶಿವರಾಮಯ್ಯ - ಇಮ್ಮಾವು "ಸಾಹಿತ್ಯ ವಿಮರ್ಶೆ"
ಪುಸ್ತಕ ಪ್ರಪಂಚ, ನಂ. ೬೬೧/ಎ,
೪ನೇ ಮುಖ್ಯ ರಸ್ತೆ, ಬೆಂಗಳೂರು - ೫೬೦ ೦೫೦

೧೪. ಡಾ। ಸಿ.ಎನ್. ರಾಮಚಂದ್ರನ್ - ಪರಂಪರೆ ಮತ್ತು ಪ್ರತಿರೋಧ - ವಿಮರ್ಶೆ
ಸಂವಾದ, ಮಲ್ಲಾಡಿ ಹಳ್ಳಿ- ೫೭೭ ೫೩೧

೧೫. ಎಚ್.ಜೆ. ರಾಮಯ್ಯಂಗಾರ್ - ಕೆಲವು ಧಾರ್ಮಿಕ ಕರ್ತವ್ಯಗಳು
ವಸಂತ ಪ್ರಕಾಶನ, ಬೆಂಗಳೂರು - ೫

೧೬. ಡಾ। ಹೆಚ್. ತಿಪ್ಪೇರುದ್ರ ಸ್ವಾಮಿ, ಡಾ। ಕೆ.ಎಲ್. ಗೋಪಾಲಕೃಷ್ಣಯ್ಯ ವಿಮರ್ಶೆಯ ದಾರಿ
ಪ್ರಸಾರಾಂಗ
ಬೆಂಗಳೂರು ವಿಶ್ವವಿದ್ಯಾಲಯ, ಬೆಂಗಳೂರು

೧೭. ಸಿ.ಪಿ. ಕೃಷ್ಣ ಕುಮಾರ್ - ಜನ್ನನ ಯಶೋಧರ ಚರಿತೆ
ಚೇತನ ಬುಕ್ ಹೌಸ್, ಮೈಸೂರು

೧೮. ಸಂ : ಡಾ। ಕೆ.ವಿ. ಪುಟ್ಟಪ್ಪ, ಟಿ.ಎಸ್. ಶಾಮ ರಾವ್ . ರತ್ನಾಕರವರ್ಣಿಯ ಭರತೇಶ ವೈಭವ
ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯ,
ಬೆಂಗಳೂರು

೧೯. ಬೇ.ಗೋ. ರಮೇಶ್ - ಪ್ರಪಂಚದ ವಿವಿಧ ಧರ್ಮಗಳು
ವಿಜಯ ಸಾಹಿತ್ಯ ಪ್ರಕಾಶನ, ಬೆಂಗಳೂರು

೨೦. ಡಿ. ಲಿಂಗಯ್ಯ - ಕಾವ್ಯಾನುಭವ - ವಿಮರ್ಶಾ ಸಂಕಲನ
ದಿನಕರ ಪ್ರಕಾಶನ, ಬೆಂಗಳೂರು

೨೧. ಪದ್ಮಶೇಖರ್ - ಜೈನಶಾಸ್ತ್ರ ಕೆಲವು ಅಧ್ಯಯನ
ಪ್ರಕಾಶಕರು : ವಿ.ಎ.ಎನ್. ಬೆಂಗಳೂರು

೨೨. ಡಾ। ನಂ. ತಪಸ್ವಿಕುಮಾರ್ - ರತ್ನಾಕರವರ್ಣಿ ಮತ್ತು ಜನಪದ
ಕರ್ನಾಟಕ ಜನಪದ ಮತ್ತು ಯಕ್ಷಗಾನ ಅಕಾಡಮಿ,
ಬೆಂಗಳೂರು - ೨

೨೩. ಹೊ.ಗ. ಮನೋಹರ್ - ಕನ್ನಡ ಸಾಹಿತ್ಯ ಮತ್ತು ಧರ್ಮ
ಭಾಸ್ಕರ ಪ್ರಕಾಶನ, ತುರುವೇಕೆರೆ

೨೪. ಶ್ರೀಕಂಠಯ್ಯ - ಕಾವ್ಯ ಸಮೀಕ್ಷೆ
ಮೈಸೂರು ಕಾವ್ಯಾಲಯ ಪ್ರಕಾಶಕರು

೨೫. ಮಿರ್ಜಿ ಅಣ್ಣಾರಾಯ - ಜೈನಧರ್ಮ
ಡಿ.ವಿ.ಕೆ. ಮೂರ್ತಿ, ಕೃಷ್ಣಮೂರ್ತಿಪುರಂ,
ಮೈಸೂರು

೨೬. ಡಾ। ರಾಜಶೇಖರ ಈ ಇಚ್ಛಂಗಿ - ಪಾರ್ಶ್ವನಾಥ ಪುರಾಣ - ಒಂದು ತೌಲನಿಕ ಅಧ್ಯಯನ

೨೭. ಸಂಪಾದಕ : ಪ್ರೊ.ಎಸ್. ಪ್ರಭಾಕರ್ - ರತ್ನತ್ರಯ
ಶ್ರೀ ಧರ್ಮಸ್ಥಳ ಭಗವಾನ್ ಬಾಹುಬಲಿ ಮಸ್ತಕಾಭಿಷೇಕ
ಮಹೋತ್ಸವ ಸಮಿತಿ, ಧರ್ಮಸ್ಥಳ

ಅಡಿ ಟಿಪ್ಪಣಿಗಳು

೧	ಸಂ. ಪ್ರೊ। ಎಸ್. ಪ್ರಭಾಕರ್, 'ರತ್ನತ್ರಯ', ೧೯೯೫	ಪುಟ ೧೬೫
೨	ಡಿ.ಎಲ್.ನ. ಪೂರ್ವೋಕ್ತ	ಪುಟ ೪೮೨
೩	ಅದೇ ಪುಟ	
೪	ರಂ.ಶ್ರೀ ಮುಗಳಿ, ಕನ್ನಡ ಸಾಹಿತ್ಯ ಚರಿತ್ರೆ	ಪುಟ ೧೧೨
೫	ಆರ್.ಸಿ. ಕುಲಕರ್ಣಿ, ಸಮಗ್ರ ಕನ್ನಡ ಸಾಹಿತ್ಯ ಚರಿತ್ರೆ - ೩	ಪುಟ ೫೧೧
೬	ಸಿ.ಪಿ.ಕೆ. ಜನ್ನನ ಯಶೋಧರ ಚರಿತೆ	ಪುಟ ೨೪
೭	ಗಿರಡ್ಡಿ ಗೋವಿಂದ, ವಿಮರ್ಶೆಯ ದಾರಿ	ಪುಟ ೭೯
೮	ಅದೇ ಪುಟ	
೯	ಗಿರಡ್ಡಿ ಗೋವಿಂದ, ವಿಮರ್ಶೆಯ ದಾರಿ	ಪುಟ ೭೬
೧೦	ತೀ.ನಂ. ಶ್ರೀಕಂಠಯ್ಯ, ಪೂರ್ವೋಕ್ತ	ಪುಟ ೬೪
೧೧	ಗಿರಡ್ಡಿ ಗೋವಿಂದ, ವಿಮರ್ಶೆಯ ದಾರಿ	ಪುಟ ೮೩
೧೨	ತೀ.ನಂ. ಶ್ರೀಕಂಠಯ್ಯ, ಕಾವ್ಯ ಸಮೀಕ್ಷೆ	ಪುಟ ೭೫
೧೩	ತೀ.ನಂ. ಶ್ರೀಕಂಠಯ್ಯ, ಪೂರ್ವೋಕ್ತ	ಪುಟ ೬೪
೧೪	ತೀ.ನಂ. ಶ್ರೀಕಂಠಯ್ಯ, ಕಾವ್ಯ ಸಮೀಕ್ಷೆ	ಪುಟ ೫೮
೧೫	ಅದೇ ಪುಟ	